ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಸೋಮವಾರ 2022

ಸಂಪುಟ: 43 | ಸಂಚಿಕೆ: 338 | ಪುಟಗಳು: 8

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದಿನಿಂದ SSLC ಪರೀಕ್ಷೆ: ಧಾರ್ಮಿಕ ಭಾವನೆ ಬಿಂಬಿಸುವ ವಸ್ತ್ರಕ್ಕೆ ಅವಕಾಶವಿಲ್ಲ

ಬೆಂಗಳೂರು, ಮಾ.27– ಸೋಮವಾರದಿಂದ ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ. ಹಿಜಾಬ್ ಕುರಿತು ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪನ್ನು ಶಿಕ್ಷಣ ಇಲಾಖೆ ಪಾಲನೆ ಮಾಡಲಿದೆ. ಹಿಜಾಬ್ ಧರಿಸಿ ಪರೀಕ್ಷಾ ಕೇಂದ್ರದೊಳಗೆ ಹೋಗುವಂತಿಲ್ಲ.



ಬಿ.ಸಿ.ನಾಗೇಶ್

15,387 ಶಾಲೆಗಳ 8,73,846 ವಿದ್ಯಾರ್ಥಿಗಳು ಈ ಬಾರಿಯ ಪರೀಕ್ಷೆ ಬರೆಯಲಿದ್ದಾರೆ. ಹಿಜಾಬ್ ಧರಿಸಿದವರನ್ನು ಪರೀಕ್ಷಾ ಕೇಂದ್ರಕ್ಕೆ ಬಿಡದಿರಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ.


ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕುರಿತು ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಸೋಮವಾರ ಪರೀಕ್ಷೆ ಆರಂಭವಾಗಲಿದೆ. ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ಆದೇಶವನ್ನು ಈಗಾಗಲೇ ಆಯಾ ಶಾಲೆಗಳ ಮುಖ್ಯಸ್ಥರು ಪಾಲಿಸುತ್ತಿದ್ದಾರೆ. ಶಾಲೆಯ ಕಾಂಪೌಂಡ್ ಒಳಗೆ ಹಿಜಾಬ್ ಧರಿಸಿ ಬರಬಹುದು. ಆದರೆ ಕೊಠಡಿಯೊಳಗೆ ಧರಿಸಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಯಾವುದೇ ● 5ನೇ ಪುಟಕ್ಕೆ

ಸಹಾಯವಾಣಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಗೊಂದಲಗಳು ಉಂಟಾದರೆ ಸಹಾಯ ಮಾಡಲು ಸಹಾಯವಾಣಿ ಆರಂಭಿಸಲಾಗಿದೆ. 080–23310075/ 76 ಸಂಖ್ಯೆಗೆ ವಿದ್ಯಾರ್ಥಿಗಳು ಕರೆ ಮಾಡುವ ಮೂಲಕ ಗೊಂದಲಗಳನ್ನು ಬಗೆಹರಿಸಿಕೊಳ್ಳಬಹುದು.

ಕೋವಿಡ್ ಪ್ರಕರಣಗಳು ಕಡಿಮೆಯಾಗಿರುವ ಕಾರಣ ಮಾಸ್ಕ್ ಧರಿಸದಿದ್ದರೂ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲು ತೀರ್ಮಾನಿಸಲಾಗಿದೆ. ಮಾರ್ಚ್ 28ರಿಂದ ಏಪ್ರಿಲ್ 11ರ ತನಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿವೆ.



ಸರ್ಕಾರಿ ಬಸ್‌ನಲ್ಲಿ ಉಚಿತ ಪ್ರಯಾಣ

ಎಸ್‌ಎಸ್‌ಎಲ್‌ಸಿ ಅಂತಿಮ ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಪರೀಕ್ಷೆಗಳು ನಡೆಯುವ ದಿನಗಳಂದು ವಿದ್ಯಾರ್ಥಿಗಳು ಹಾಲ್ ಟಿಕೆಟ್ ತೋರಿಸಿ ಪರೀಕ್ಷಾ ಕೇಂದ್ರಕ್ಕೆ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಈ ಕುರಿತು ಈಗಾಗಲೇ ಚಾಲಕ, ನಿರ್ವಾಹಕರಿಗೂ ಸಹ ಸೂಚನೆ ನೀಡಲಾಗಿದೆ. ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ವಾಪಸ್ ಆಗುವಾಗ ಹಾಲ್ ಟಿಕೆಟ್ ತೋರಿಸಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ.

ಇಂದು ಗೋವಾ ಸಿಎಂ ಪ್ರಮೋದ್ ಸಾವಂತ್ ಪ್ರಮಾಣವಚನ

ಪಣಜಿ, ಮಾ.27– ಗೋವಾದಲ್ಲಿ ನೂತನ ಸಿಎಂ ಪದಗ್ರಹಣ ಕಾರ್ಯಕ್ರಮ ನಾಳೆ (ಮಾ.28) ನಡೆಯಲಿದೆ. ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಪ್ರಮೋದ್ ಸಾವಂತ್ ಎರಡನೇ ಬಾರಿ ಗೋವಾ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಮಾ. 10 ರಂದು ಪ್ರಕಟಗೊಂಡ ಪಂಚರಾಜ್ಯಗಳ ಚುನಾವಣೆ ಫಲಿತಾಂಶದಲ್ಲಿ ಬಿಜೆಪಿ ಗೋವಾದ 40 ಕ್ಷೇತ್ರಗಳ ಪೈಕಿ 20ರಲ್ಲಿ ಗೆದ್ದು ಅಧಿಕಾರಕ್ಕೇರಿತ್ತು. ಪ್ರಮೋದ್ ಸಾವಂತ್ ಅವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಇನ್ನಿತರ ನಾಯಕರು ಭಾಗಿಯಾಗಲಿದ್ದಾರೆ. ● 5ನೇ ಪುಟಕ್ಕೆ



2023ರ ರಾಜ್ಯ ವಿಧಾನಸಭೆ ಚುನಾವಣೆ

ಗೆಲ್ಲುವ ಅಭ್ಯರ್ಥಿಗಳಿಗಾಗಿ ಕಾಂಗ್ರೆಸ್ ಸಮೀಕ್ಷೆ

- ಖಾಸಗಿ ಏಜೆನ್ಸಿ ಮೂಲಕ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪ್ರತ್ಯೇಕ ಸಮೀಕ್ಷೆ
- 130-140 ಸ್ಥಾನ ಪಡೆಯಲು ಕಸರತ್ತು

ಬೆಂಗಳೂರು, ಮಾ. 27– ಪಂಚರಾಜ್ಯ ಚುನಾವಣೆ ಬಳಿಕ ಬಿಜೆಪಿ ರಾಷ್ಟ್ರೀಯ ನಾಯಕರು 2023ರಲ್ಲಿ ಎದುರಾಗಲಿರುವ ಕರ್ನಾಟಕ ವಿಧಾನಸಭಾ ಚುನಾವಣೆ ಮೇಲೆ ದೃಷ್ಟಿ ಹಾಯಿಸಿದ್ದು, ಈ ನಡುವಲ್ಲೇ ಕಾಂಗ್ರೆಸ್ ಕೂಡ ತನ್ನ ಸಿದ್ಧತೆಗಳನ್ನು ಆರಂಭಿಸಿದೆ.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಬ್ಬರೂ ಖಾಸಗಿ ಏಜೆನ್ಸಿಗಳ ಮೂಲಕ ಪ್ರತ್ಯೇಕವಾಗಿ ಸ್ಥಳೀಯ ಸಮೀಕ್ಷೆ ನಡೆಸಲು ಸಜ್ಜಾಗಿದ್ದಾರೆ. ಕರ್ನಾಟಕ ವಿಧಾನಸಭೆಯಲ್ಲಿ 69 ಕಾಂಗ್ರೆಸ್ ಶಾಸಕರಿದ್ದು, 2023ರ ಚುನಾವಣೆ ವೇಳೆ 130–140 ಸ್ಥಾನಗಳ ಗೆಲ್ಲುವ ನಿರೀಕ್ಷೆಯನ್ನು ಕಾಂಗ್ರೆಸ್ ಇಟ್ಟುಕೊಂಡಿದೆ. ಆಕಾಂಕ್ಷಿಗಳಿರುವ ಕಾಂಗ್ರೆಸ್ಸೇತರ ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆಸಲು ಕಾಂಗ್ರೆಸ್ ಯೋಜನೆ ರೂಪಿಸಿದೆ ಎಂದು ಕೆಪಿಸಿಸಿ ಮೂಲಗಳು ಮಾಹಿತಿ ನೀಡಿದೆ.






ಹಲವು ಆಕಾಂಕ್ಷಿಗಳಿದ್ದರೆ, ಅವರಲ್ಲಿ ಉತ್ತಮರನ್ನು ಹುಡುಕಲು ಮತ್ತು ಜನರೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿರುವವರು ಅಂತಿಮವಾಗಿ ಆಯ್ಕೆಯಾಗಲಿದ್ದಾರೆ. ಹೆಚ್ಚಿನ ಮತಗಳನ್ನು ಗಳಿಸಲು ಈ ಸಮೀಕ್ಷೆಯು ನಮಗೆ ಸಹಾಯ ಮಾಡುತ್ತದೆ. ಸಮೀಕ್ಷೆಯು ಕಾಂಗ್ರೆಸ್ ಶಾಸಕರ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುತ್ತದೆ. ಡಿ.ಕೆ.ಶಿವಕುಮಾರ್ ಕೂಡ ಏಪ್ರಿಲ್‌ನಲ್ಲಿ ಖಾಸಗಿ ಏಜೆನ್ಸಿ ಮೂಲಕ ಸಮೀಕ್ಷೆ ಆರಂಭಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ನಾಯಕರ ಪ್ರಕಾರ, ಚುನಾವಣೆಗೆ ಕನಿಷ್ಠ ಆರು ತಿಂಗಳ ಮೊದಲು ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವುದು ಅಗತ್ಯವಿದೆ, ಇದರಿಂದ ಈ ಅಭ್ಯರ್ಥಿಗಳು ತಳಮಟ್ಟದಲ್ಲಿ ಕೆಲಸ ಮಾಡಲು ಮತ್ತು ಮತಗಳನ್ನು ಪಡೆಯಲು ಸಾಕಷ್ಟು ಸಮಯ ಸಿಗುತ್ತದೆ. ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಆಡಳಿತ ಪಕ್ಷವಾಗಿದೆ. ಕೇಂದ್ರ ಸಚಿವರ ಹೊರತಾಗಿ, ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ● 5ನೇ ಪುಟಕ್ಕೆ

ಅಂತರರಾಜ್ಯ ಜಲವಿವಾದ

ಏಪ್ರಿಲ್‌ನಲ್ಲಿ ಕೇಂದ್ರ ಜಲಶಕ್ತಿ ಸಚಿವರ ಭೇಟಿ

ಹುಬ್ಬಳ್ಳಿ, ಮಾ.27– ಅಂತರರಾಜ್ಯ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಕೇಂದ್ರದಿಂದಲೂ ಹಲವಾರು ಅನುಮತಿಗಳನ್ನು ಪಡೆಯಬೇಕಿದೆ. ಈ ಬಗ್ಗೆ ಸಿದ್ಧತೆ ಮಾಡಿಕೊಳ್ಳಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಿದ್ದೇನೆ. ಇದಕ್ಕೆ ಸಂಬಂಧಿಸಿದಂತೆ ಏಪ್ರಿಲ್ ಮೊದಲ ವಾರದಲ್ಲಿ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿಯಾಗಲಿದ್ದೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಅವರು ಇಂದು ಹುಬ್ಬಳ್ಳಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದರು. ಅಂತರರಾಜ್ಯ ಜಲವಿವಾದಗಳ ಶೀಘ್ರವಾಗಿ ಬಗೆಹರಿಸಲು ಎಲ್ಲಾ ರೀತಿಯ ಪ್ರಯತ್ನ ಮಾಡಬೇಕಿದೆ. ಕಾನೂನಾತ್ಮಕ ವಿಚಾರಗಳಲ್ಲಿ ನ್ಯಾಯಾಲಯಗಳಿಂದ ಕೂಡಲೇ ಪರಿಹಾರ ಕಂಡುಕೊಳ್ಳಬೇಕಿದೆ. ರೈಲ್ವೆ ಯೋಜನೆಗಳ ಭೂ ಸ್ವಾಧೀನ ಪ್ರಕ್ರಿಯೆಗಳು ಪೂರ್ಣಗೊಳಿಸಲು ಹೆಚ್ಚಿನ ಪ್ರಾಶಸ್ತ್ಯ ನೀಡಿ ಇತ್ಯರ್ಥ ಮಾಡಲಾಗುವುದು ಎಂದು ತಿಳಿಸಿದರು.

ಯೋಜನಾಬದ್ಧವಾಗಿ ರಾಜ್ಯದ ಅಭಿವೃದ್ಧಿ: ಕೋವಿಡ್ ಕರಿನೆರಳಿನಿಂದ ಹೊರಬಂದಿರುವುದರಿಂದ ಅಭಿವೃದ್ಧಿ ಪರ್ವ ಈಗ ಶುರುವಾಗಿದೆ. ಯೋಜನಾಬದ್ಧವಾಗಿ ರಾಜ್ಯವನ್ನು ಅಭಿವೃದ್ಧಿಗೊಳಿಸಲು ತಳಪಾಯವನ್ನು ಹಾಕಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಬಂಡವಾಳ ಹೂಡಿಕೆಗೆ ಒತ್ತು: ಕೈಗಾರಿಕೆಗೆ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಜಮೀನು ಗುರುತಿಸುವಿಕೆ, ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆ ಆಕರ್ಷಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ಇವುಗಳಲ್ಲಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ ಎಂದರು. ಮಹಿಳೆಯರ ಸಬಲೀಕರಣಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಅದಕ್ಕೆ ರೂಪುರೇಷೆಗಳನ್ನು ನೀಡಲಾಗುತ್ತಿದೆ. ಕೃಷಿ ಸೆಕೆಂಡರಿ ನಿರ್ದೇಶನಾಲಯವನ್ನು ಸ್ಥಾಪಿಸಲು ಆದೇಶ ಮಾಡಲಾಗಿದೆ. ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಾಗುವುದು ಎಂದರು. ಹುಬ್ಬಳ್ಳಿಗೆ ಸಂಬಂಧಿಸಿದಂತೆ ಜಯದೇವ ಹೃದ್ರೋಗ ಆಸ್ಪತ್ರೆ ಸ್ಥಾಪನೆಗೆ ಈಗಾಗಲೇ ಮೇಲ್ವಿಚಾರಣಾ ಮಂಡಳಿಯಲ್ಲಿ ತೀರ್ಮಾನವಾಗಿದೆ. ಅದರನ್ವಯ ಆದಷ್ಟು ಬೇಗ ಸ್ಥಳ ನಿಗದಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಸ್ವಗ್ರಾಮದಲ್ಲಿ ಬಿಹಾರ ಸಿಎಂ ನಿತೀಶ್ ಕುಮಾರ್ ಮೇಲೆ ಹಲ್ಲೆ

ಪಾಟ್ನಾ, ಮಾ. 27– ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರ ಮೇಲೆ ಸ್ವಗ್ರಾಮ ಭಕ್ತಿಯಾರ್ ಪುರದಲ್ಲಿ ವ್ಯಕ್ತಿಯೋರ್ವ ಹಲ್ಲೆ ನಡೆಸಿದ್ದಾನೆ.



ವ್ಯಕ್ತಿಯನ್ನು ಬಂಧಿಸಲಾಗಿದ್ದು, ಸದ್ಯ ಪೊಲೀಸ್ ವಶದಲ್ಲಿದ್ದಾನೆ ಎಂದು ಮೂಲಗಳು ತಿಳಿಸಿವೆ. ಸ್ಥಳೀಯ ಆಸ್ಪತ್ರೆಯ ಆವರಣದಲ್ಲಿರುವ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರ ಶೀಲಭದ್ರ ಯಾಜಿ ಅವರ ಪ್ರತಿಮೆಯ ಮುಂದೆ ಮುಖ್ಯಮಂತ್ರಿ ನಮನ ಸಲ್ಲಿಸಲು ಮುಂದಾದಾಗ ಹಲ್ಲೆ ನಡೆದಿರುವುದು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

ಹಿಂಬದಿಯಿಂದ ವೇಗವಾಗಿ ಬಂದ ವ್ಯಕ್ತಿ ವೇದಿಕೆ ಹತ್ತುತ್ತಿದ್ದ ನಿತೀಶ್ ಕುಮಾರ್ ಬೆನ್ನಿಗೆ ಬಡಿದಿದ್ದಾನೆ. ತಕ್ಷಣ ಭದ್ರತಾ ಸಿಬ್ಬಂದಿ ಆತನನ್ನು ಎಳೆದೊಯ್ದರು. ಮತ್ತೊಂದು ವೀಡಿಯೊದಲ್ಲಿ, ದಾಳಿಕೋರನನ್ನು ಪೊಲೀಸರು ಕೊಂಡೊಯ್ಯುತ್ತಿರುವುದು ಸೆರೆಯಾಗಿದೆ.

ಪತ್ನಿ ಅಗಲಿಕೆ ನೋವಿನಲ್ಲೇ ಪತಿ ಆತ್ಮಹತ್ಯೆ

- ತಬ್ಬಲಿಯಾದ ಇಬ್ಬರು ಮಕ್ಕಳ ಕಂಡು ಮರುಗುತ್ತಿರುವ ಗ್ರಾಮಸ್ಥರು
- ಮೈಸೂರು ತಾಲೂಕು ಹಂಚ್ಯಾ ಗ್ರಾಮದಲ್ಲಿ ಮನಮಿಡಿಯುವ ಘಟನೆ

ಮೈಸೂರು, ಮಾ.27(ಎಸ್‌ಬಿಡಿ)– ಪತ್ನಿ ಸಾವಿನ ನೋವಿನಿಂದ ಹೊರಬರಲಾಗದೆ ಪತಿಯೂ ಆತ್ಮಹತ್ಯೆ ಮಾಡಿಕೊಂಡು ಇಬ್ಬರು ಪುಟ್ಟ ಮಕ್ಕಳು ತಬ್ಬಲಿಯಾಗಿರುವ ಮನಮಿಡಿಯುವ ಘಟನೆ ಮೈಸೂರು ತಾಲೂಕು ಹಂಚ್ಯಾ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ಮಹೇಶ್(36) ಕ್ರಿಮಿನಾಶಕ ಸೇವಿಸಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರ ಪತ್ನಿ ಗಾಯತ್ರಿ 2 ತಿಂಗಳ ಹಿಂದೆ ಬಿಪಿ ಮಾತ್ರೆ ಬದಲಿಗೆ ಬೇರೆ ಮಾತ್ರೆ ಸೇವಿಸಿ, ಸಾವನ್ನಪ್ಪಿದ್ದರು. ಅಪ್ಪ-ಅಮ್ಮನ ಕಳೆದುಕೊಂಡಿರುವ 8 ವರ್ಷದ ಹೆಣ್ಣುಮಗು ಹಾಗೂ 6 ವರ್ಷದ ಗಂಡು ಮಗುವಿನ ಸ್ಥಿತಿ ಕರುಳ ಹಿಂಡುವಂತಿದೆ.



ಗಾಯತ್ರಿ ಮತ್ತು ಮಹೇಶ್

ಒಂದೇ ಗ್ರಾಮದ ಮಹೇಶ್ ಹಾಗೂ ಗಾಯತ್ರಿ 10 ವರ್ಷದ ಹಿಂದೆ ವಿವಾಹವಾಗಿದ್ದರು. ಇಬ್ಬರು ಮುದ್ದಾದ ಮಕ್ಕಳೊಂದಿಗೆ ಸುಂದರ ಜೀವನ ನಡೆಸುತ್ತಿದ್ದ ಈ ದಂಪತಿ ವಿಧಿಯಾಟಕ್ಕೆ ಬಲಿಯಾಗಿದ್ದಾರೆ. ಗಾಯತ್ರಿ ಅವರಿಗೆ ರಕ್ತದೊತ್ತಡ (ಬಿಪಿ)ದ ಸಮಸ್ಯೆಯಿದೆ ಎಂದು ಕೆಲ ತಿಂಗಳು ಮಾತ್ರೆ ಸೇವಿಸಲು ವೈದ್ಯರು ಸೂಚಿಸಿದ್ದರು. ಅದರಂತೆ ನಿತ್ಯ ಮಾತ್ರೆ ತೆಗೆದುಕೊಳ್ಳುತ್ತಿದ್ದ ಗಾಯತ್ರಿ, ಕಳೆದ ● 5ನೇ ಪುಟಕ್ಕೆ

ಬ್ಯಾಡ್ಮಿಂಟನ್: ಸ್ವಿಸ್ ಓಪನ್ ಕಿರೀಟ ಮುಡಿಗೇರಿಸಿಕೊಂಡ ಪಿ.ವಿ.ಸಿಂಧೂ!

ಬಸೆಲ್, ಮಾ.27(ಸ್ವಿಜರ್ಲೆಂಡ್)– ಭಾರತದ ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧೂ ಬಿಡಬ್ಲ್ಯುಎಫ್ ಸ್ವಿಸ್ ಓಪನ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.



ಭಾನುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅಧಿಕಾರಯುತ ಆಟವಾಡಿದ ಸಿಂಧೂ, ಎದುರಾಳಿ ಥಾಯ್ಲೆಂಡ್‌ನ ಅನುಭವಿ ಆಟಗಾರ್ತಿ ಬುಸಾನನ್ ಆಂಗ್‌ಬಮ್ರುಂಗ್ಫನ್ ಅವರನ್ನು 21–16, 21–8 ಅಂತರದ ನೇರ ಗೇಮ್‌ಗಳ ಅಂತರದಲ್ಲಿ ಬಗ್ಗು ಬಡಿದರು. ಪ್ರಸಕ್ತ ಸಾಲಿನಲ್ಲಿ ಸತತ 2ನೇ ಟೂರ್ನಿಯಲ್ಲಿ ಫೈನಲ್ ತಲುಪಿದ ಸಾಧನೆ ಮಾಡಿದ ಸಿಂಧೂ, ಬುಸಾನನ್ ಎದುರಿನ ತಮ್ಮ ಗೆಲುವಿನ ದಾಖಲೆಯನ್ನು 17–1ಕ್ಕೆ ವಿಸ್ತರಿಸಿಕೊಂಡಿದ್ದಾರೆ. ● 4ನೇ ಪುಟಕ್ಕೆ

ಮೈಸೂರಿನ ಕಾಳಿದಾಸ ರಸ್ತೆಯಲ್ಲಿ 'ಮೈಸೂರು ಸಿಲ್ಕ್' ನೂತನ ಮಳಿಗೆ ಆರಂಭ

ಮೈಸೂರು ರೇಷ್ಮೆ ಕಾರ್ಖಾನೆ ಉನ್ನತೀಕರಣ

- ರೇಷ್ಮೆ ಸಚಿವ ಡಾ. ಕೆ.ಸಿ.ನಾರಾಯಣಗೌಡ ಮಾಹಿತಿ
- ಕಾರ್ಖಾನೆಯಲ್ಲಿ ಹೆಚ್ಚುವರಿಯಾಗಿ 150 ಮಗ್ಗಗಳ ಅಳವಡಿಕೆ ಉದ್ದೇಶ
- ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವಾಹನ ವ್ಯವಸ್ಥೆ
- ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಮೈಸೂರು ಸಿಲ್ಕ್ ದೊಡ್ಡ ಮಾರಾಟ ಮಳಿಗೆ ತೆರೆಯಲು ಸಿದ್ಧತೆ
- ದೆಹಲಿ, ಮುಂಬೈನಲ್ಲೂ ಮಳಿಗೆ ತೆರೆಯುವ ಚಿಂತನೆ

> ಸಾಂಪ್ರದಾಯಿಕ ಮೈಸೂರು ಸೀರೆಗಳಲ್ಲದೆ ಕೆಎಸ್‌ಐಸಿಯು ಈಗ ನಾಜೂಕಾದ ವಿನ್ಯಾಸದ ಸಂಗ್ರಹಿತ 'ಕ್ರೇಪ್ ಡಿ ಚೈನ್' ಸೀರೆಗಳು ಹಾಗೂ ಜಾರ್ಜೆಟ್ ಮತ್ತು ಸಾದಾ ಮುದ್ರಿತ ಸೀರೆಗಳನ್ನು, ಟೈ, ಸ್ಕಾರ್ಫ್ ಇತ್ಯಾದಿ ಉತ್ಪನ್ನಗಳನ್ನು ಪ್ರದರ್ಶಿಸುತ್ತಿದೆ. ನವನವೀನ ವಿವಾಹ ಸಂಗ್ರಹ ಸೀರೆಗಳನ್ನು ಪರಿಚಯಿಸಲಾಗಿದೆ. ಕೆಎಸ್‌ಐಸಿಯು ತನ್ನ ಉತ್ಪನ್ನಗಳನ್ನು ಪ್ರದರ್ಶಿತಗೊಳಿಸುತ್ತಿದೆ. ಶೇ.25ರವರೆಗೆ ವಿಶೇಷ ರಿಯಾಯಿತಿ ಸೌಲಭ್ಯವೂ ನೀಡುತ್ತಿದೆ.

> ಮೈಸೂರು ಸಿಲ್ಕ್‌ಗೆ ಉಪಯೋಗಿಸಲ್ಪಡುವ ರೇಷ್ಮೆಯು ಪರಿಶುದ್ಧವಾಗಿದ್ದು, ಜರಿಯೂ ಸಹ ಪರಿಶುದ್ಧ ಚಿನ್ನದ್ದಾಗಿದೆ. ಶೇ.0.65 ಚಿನ್ನ ಮತ್ತು ಶೇ.65ರಷ್ಟು ಬೆಳ್ಳಿಯಿಂದ ತಯಾರಿಸಲ್ಪಟ್ಟಿದೆ.

> ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ನೂತನ ಮಳಿಗೆಯು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ತೆರೆದಿರಲಿದ್ದು, ಕನಿಷ್ಠ ರೂ.11 ಸಾವಿರ ರೂ.ದಿಂದ ಆರಂಭವಾಗಿ ಗರಿಷ್ಠ 3 ಲಕ್ಷ ರೂ.ಗಳವರೆಗಿನ ನಾನಾ ರೀತಿಯ ಸಿಲ್ಕ್ ಸೀರೆಗಳು ಇಲ್ಲಿ ಲಭ್ಯವಿರಲಿದೆ.

ಮೈಸೂರು, ಮಾ.27(ಆರ್‌ಕೆಬಿ)– ಮೈಸೂರು ರೇಷ್ಮೆ ಕಾರ್ಖಾನೆಯನ್ನು ಉನ್ನತೀಕರಣಗೊಳಿಸಲಾಗುವುದು ಎಂದು ರೇಷ್ಮೆ ಇಲಾಖೆ ಸಚಿವ ಡಾ. ಕೆ.ಸಿ. ನಾರಾಯಣಗೌಡ ಇಂದಿಲ್ಲಿ ಹೇಳಿದರು.

ಮೈಸೂರಿನ ಕಾಳಿದಾಸ ರಸ್ತೆಯ ಸಿಎಫ್‌ಟಿಆರ್‌ಐ ರೆಸಿಡೆನ್ಷಿಯಲ್ ಕಾಂಪ್ಲೆಕ್ಸ್ ಎದುರಿನ ಕಟ್ಟಡದಲ್ಲಿ ಕೆಎಸ್‌ಐಸಿ ಮೈಸೂರು ಸಿಲ್ಕ್‌ನ 16ನೇ ಮಾರಾಟ ಮಳಿಗೆಯನ್ನು (ಮೈಸೂರು ನಗರದಲ್ಲಿ 6ನೇ ಮಳಿಗೆ) ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಸಿಲ್ಕ್ ಎಂಬುದು ಮೈಸೂರಿನ ಪರಂಪರೆ. ಮೈಸೂರು ಮಹಾರಾಜರು ಆರಂಭಿಸಿದ್ದನ್ನು ಸರ್ಕಾರ ಮುಂದುವರೆಸಿಕೊಂಡು ಬಂದಿದೆ. ಮೈಸೂರು ಸಿಲ್ಕ್ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು ಮೈಸೂರು ರೇಷ್ಮೆ ಕಾರ್ಖಾನೆಯಲ್ಲಿ ಹಾಲಿ ಇರುವುದು ಹಳೆಯ ಮಾದರಿಯ ಮಗ್ಗಗಳಾಗಿದ್ದು, ಕಾರ್ಖಾನೆಯನ್ನು ಉನ್ನತೀಕರಣಗೊಳಿಸಿ, ಹೆಚ್ಚುವರಿಯಾಗಿ 150 ಮಗ್ಗಗಳನ್ನು ಅಳವಡಿಸುವ ಉದ್ದೇಶ ಹೊಂದಿದ್ದೇವೆ ಎಂದರು.



ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಕೆಎಸ್‌ಐಸಿಯ ನೂತನ ಮೈಸೂರು ಸಿಲ್ಕ್ ಮಾರಾಟ ಮಳಿಗೆಯನ್ನು ಭಾನುವಾರ ಉದ್ಘಾಟಿಸಿದ ನಂತರ ಮೈಸೂರು ರೇಷ್ಮೆ ಸೀರೆಯ ಅಂದವನ್ನು ನೋಡಿ ಆನಂದಿಸುತ್ತಿರುವ ರೇಷ್ಮೆ ಸಚಿವ ಡಾ. ಕೆ.ಸಿ. ನಾರಾಯಣಗೌಡ, ಶಾಸಕ ಎಲ್. ನಾಗೇಂದ್ರ, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ಅಧ್ಯಕ್ಷ ಎಸ್.ಆರ್.ಗೌಡ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ಮಹದೇವಯ್ಯ, ಕೆಎಸ್‌ಐಸಿ ವ್ಯವಸ್ಥಾಪಕ ನಿರ್ದೇಶಕಿ ವಾಸಿ ರೆಡ್ಡಿ ವಿಜಯ ಜ್ಯೋತ್ಸ್ನಾ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ರೇಷ್ಮೆ ಕಾರ್ಖಾನೆಯಲ್ಲಿ ಹೊಸ ಮಾಡೆಲ್ ಮತ್ತು ಡಿಸೈನ್‌ಗಳನ್ನು ಅಳವಡಿಸಿಕೊಂಡು ಉನ್ನತ ದರ್ಜೆಗೇರಿಸಲು ಯೋಜನೆ ರೂಪಿಸಲಾಗಿದೆ. ಸ್ವಯಂಚಾಲಿತ ಇಟಾಲಿಯನ್ ಮಗ್ಗಗಳನ್ನು ಹಾಕಲಾಗುತ್ತದೆ. ಡಿಸೈನ್ ಇನ್ನಿತರ ಕೆಲಸಗಳನ್ನು ಸ್ವಯಂಚಾಲಿತವಾಗಿ ಅದೇ ನಿರ್ವಹಿಸುತ್ತದೆ. ಹೆಚ್ಚುವರಿಯಾಗಿ 150 ಮಗ್ಗಗಳನ್ನು ಅಳವಡಿಸಿ ಮತ್ತೊಂದು ಪಾಳಿ ಆರಂಭಿಸಲು ಉದ್ದೇಶಿಸಲಾಗಿದೆ. ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವ ಮಹಿಳೆಯರನ್ನು ಮನೆಯಿಂದ ಕಾರ್ಖಾನೆಗೆ ಕರೆತಂದು ಮತ್ತೆ ಮನೆಗೆ ವಾಪಸ್ ಕರೆದೊಯ್ಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ರಿಪೇರಿಯಾಗಿ ಬಿದ್ದಿರುವ 175 ಮಗ್ಗಗಳನ್ನು ಸರಿಪಡಿಸಿ, ಅವುಗಳಿಂದಲೂ ಕೆಲಸ ಆರಂಭಿಸುವ ಮೂಲಕ ● 5ನೇ ಪುಟಕ್ಕೆ

ಹಾಸ್ಟೆಲ್ ವಿದ್ಯಾರ್ಥಿಗಳನ್ನು ಪರಿಪೂರ್ಣರನ್ನಾಗಿ ಮಾಡಿ

ಜಿಪಂ ಉಪ ಕಾರ್ಯದರ್ಶಿ ಡಾ. ಪ್ರೇಮ್‌ಕುಮಾರ್ ಸಲಹೆ



ಮೈಸೂರು,ಮಾ.27(ಎಂಟಿವೈ)– ನಿಲಯ ಪಾಲಕರು ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಕಲೆ, ಸಾಹಿತ್ಯ, ಸಂಗೀತವನ್ನು ಹೇಳಿಕೊಟ್ಟು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವುದರೊಂದಿಗೆ ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಜಿ.ಪಂ ಉಪ ಕಾರ್ಯದರ್ಶಿ ಡಾ. ಪ್ರೇಮ್‌ಕುಮಾರ್ ಸಲಹೆ ನೀಡಿದರು.

ಮೈಸೂರು ತಾಲೂಕಿನ ಎಸ್.ಕಲ್ಲಹಳ್ಳಿಯಲ್ಲಿರುವ ಸಮಾಜಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಸ್ಮರಣೆ ಹಾಗೂ ನಿಲಯದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಒಳಿತಿಗೆ ಹಾಗೂ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಿದವರನ್ನು ಪೂರ್ವಾಗ್ರಹ ಪೀಡಿತರಾಗಿ ನೋಡಬಾರದು. ಬುದ್ಧ, ಬಸವಣ್ಣ, ಡಾ.ಅಂಬೇಡ್ಕರ್, ಸಾವಿತ್ರಿಬಾಯಿಫುಲೆ, ನಾರಾಯಣ ಗುರು, ಕನಕದಾಸ, ಪೆರಿಯಾರ್, ಜ್ಯೋತಿಬಾಫುಲೆ, ಅಕ್ಕಮಹಾದೇವಿ, ಅಲ್ಲಮಪ್ರಭು ಅವರುಗಳನ್ನು ನಾವು ದಾರ್ಶನಿಕರಾಗಿ ನೋಡಬೇಕೇ ಹೊರತು, ಯಾವುದೇ ಒಂದು ಜಾತಿಗೆ ಸೀಮಿತವಾಗಿ ನೋಡಬಾರದು ಎಂದರು.

ರಾಷ್ಟ್ರಕವಿ ಕುವೆಂಪು ಹೇಳಿರುವಂತೆ ಪ್ರತಿಯೊಂದು ಮಗುವು ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತದೆ. ಪ್ರತಿಯೊಬ್ಬರೂ ಸಮಾಜಕ್ಕೆ ಗೌರವ ತರುವ ರೀತಿ ನಡೆದುಕೊಳ್ಳಬೇಕು. 10 ರಿಂದ 18 ವಯಸ್ಸಿನಲ್ಲಿ ಹಲವು ಆಸೆ ಮೂಡುವುದು ಸಹಜ. ಅದರಲ್ಲಿ ಒಳ್ಳೆಯದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಸರ್ಕಾರ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. 10 ವರ್ಷ ಕಷ್ಟ ಪಟ್ಟರೆ, 50 ವರ್ಷ ಸುಖವಾಗಿರಬಹುದು. ವಾರ್ಡನ್‌ಗಳು ವಿಶೇಷ ಆಸಕ್ತಿ ವಹಿಸಿ ಉತ್ತಮ ಫಲಿತಾಂಶ ಬರುವಂತೆ ವಿದ್ಯಾರ್ಥಿಗಳನ್ನು ತಯಾರು ಮಾಡಿ ಜಿಲ್ಲೆಗೆ ಮಾದರಿಯಾಗಬೇಕು. ತಂದೆ–ತಾಯಿಗೆ, ಹಾಸ್ಟೆಲ್‌ಗೆ, ವಾರ್ಡನ್‌ಗೆ ಒಳ್ಳೆಯ ಹೆಸರು ಬರುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಬಿ.ಮಾಲತಿ ಮಾತನಾಡಿ, ಭಾರತದ ಸಂವಿಧಾನ ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನವಾಗಿದೆ. ಸಂವಿಧಾನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮಾತ್ರ ಸೀಮಿತವಾಗಿಲ್ಲ. ಅಸ್ಪೃಶ್ಯತೆ ಜೀವಂತವಾಗಿದ್ದ ಕಾಲದಲ್ಲಿ ಅದನ್ನು ಸ್ವತಃ ಅನುಭವಿಸಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಎಲ್ಲಾ ತಳ ಸಮುದಾಯಗಳು, ಹಿಂದುಳಿದವರು, ಕಾರ್ಮಿಕರು, ಮಹಿಳೆಯರು, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಮಾನತೆಯ ಹಕ್ಕನ್ನು ಕೊಟ್ಟಂತಹ ಡಾ.ಅಂಬೇಡ್ಕರ್ ಮಹಾನ್ ಮಾನವತಾವಾದಿಯಾಗಿ ಶಿಕ್ಷಣದಿಂದ ಆಕಾಶದೆತ್ತರಕ್ಕೆ ಬೆಳೆದರು. ಮಕ್ಕಳು ಡಾ.ಅಂಬೇಡ್ಕರ್ ಅವರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ಚೆನ್ನಾಗಿ ಓದಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದರೆ ನಮ್ಮ ಇಲಾಖೆಗೆ ಹೆಮ್ಮೆಯಾಗುತ್ತದೆ. ಆದ್ದರಿಂದ ಎಲ್ಲರು ಶೇ.100ರಷ್ಟು ಫಲಿತಾಂಶ ತರಬೇಕು. ಹಾಸ್ಟೆಲ್‌ಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಸಿದ್ದಲಿಂಗು ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಸದಸ್ಯರಾದ ರಮೇಶ್.ಡಿ, ಕೆಂಪಮ್ಮ, ಶಿವಣ್ಣ ವಾರ್ಡನ್ ಸಂಘದ ಅಧ್ಯಕ್ಷ ರೇವಣ್ಣ, ಉಪಾಧ್ಯಕ್ಷ ಮಹಾಂತೇಶ್ ಮಾಟೋಳಿ, ಪಿಡಿಓ ಗಿರೀಶ್, ವಾರ್ಡನ್ ಚಿಕ್ಕೀರಯ್ಯ ಹಾಗೂ ತಾಲೂಕಿನ ಎಲ್ಲಾ ನಿಲಯ ಪಾಲಕರು ಪಾಲ್ಗೊಂಡಿದ್ದರು.

ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ



ಮೈಸೂರು, ಮಾ.27(ಆರ್‌ಕೆಬಿ)– ಮೈಸೂರಿನ 23ನೇ ವಾರ್ಡ್‌ನಲ್ಲಿ ಹಳೆ ಬಂಡಿಕೇರಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗೆ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಭಾನುವಾರ ಚಾಲನೆ ನೀಡಿದರು.

ಶಾಸಕರ ಶ್ರಮದಿಂದ ರಾಜ್ಯ ಸರ್ಕಾರದಿಂದ ಮುಜರಾಯಿ ಇಲಾಖೆಯಿಂದ ಬಿಡುಗಡೆಯಾದ 35 ಲಕ್ಷ ರೂ. ವಿಶೇಷ ಅನುದಾನದಲ್ಲಿ ಈ ಜೀರ್ಣೋದ್ಧಾರ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ನಗರ ಬಿಜೆಪಿ ಫಲಾನುಭವಿಗಳ ಪ್ರಕೋಷ್ಠದ ಸಂಚಾಲಕರಾದ ಪರಮೇಶ್‌ಗೌಡ, ರಾಜೇಂದ್ರ, ಶ್ರೀನಿವಾಸ್, ಸುದರ್ಶನ್, ಹರ್ಷ, ನಾಗೇಶ್, ರಾಘವನ್, ಚರಣ್, ಸಚಿನ್, ಸನತ್, ಕಿರಣ್, ಎಂ.ಎಂ.ಶರ್ಮಾ, ರಂಗನಾಥ್, ಕೆಂಪರಾಜು, ರಮೇಶ್, ಕಲ್ಕೆರೆ ನಾಗರಾಜ್, ರಚನ, ಮಧುಸೂದನ್, ನಟರಾಜ್, ಸುಬ್ರಹ್ಮಣ್ಯ ಪುರಾಣಿಕ್ ಇನ್ನಿತರರು ಉಪಸ್ಥಿತರಿದ್ದರು.

ನಾನು ಸಚಿವನಾಗಿರೋದೇ ಶಾಸಕ ಸುರೇಶ್‌ಗೌಡಗೆ ಹೊಟ್ಟೆ ಉರಿ

ಸಚಿವ ಡಾ.ಕೆ.ಸಿ.ನಾರಾಯಣ್ ಗೌಡ ಕಿಡಿ

ಮೈಸೂರು, ಮಾ.27(ಆರ್‌ಕೆಬಿ)– ಮಂಡ್ಯದಲ್ಲಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಏನೂ ಕೆಲಸ ಮಾಡುತ್ತಿಲ್ಲ ಎಂಬ ಹೇಳಿಕೆ ನೀಡಿದ ಶಾಸಕ ಸುರೇಶ್‌ಗೌಡ ವಿರುದ್ಧ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣ ಗೌಡ ಕಿಡಿ ಕಾರಿದರು.



ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಸಚಿವನಾಗಿರುವುದನ್ನು ಸಹಿಸದ ಸುರೇಶ್‌ಗೌಡ ಅವರಿಗೆ ನನ್ನನ್ನು ಕಂಡರೆ ಹೊಟ್ಟೆ ಉರಿ. ದೇವೇಗೌಡರಿಗೆ ಹತ್ತಿರ ಆಗೋದಕ್ಕೆಂದೇ ನನ್ನನ್ನ ಬೈಯ್ಯುತ್ತಿದ್ದಾರೆ. ದೇವೇಗೌಡರು ಏನಾದರೂ ಕೊಡಬಹುದು ಎಂದೆನಿಸುತ್ತದೆ. ಹಾಗಾಗಿ ನನ್ನ ಮೇಲೆ ಅನಗತ್ಯವಾಗಿ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಕೆಲಸ ಮಾಡಿಸಿಕೊಳ್ಳಲು ನನ್ನ ಬಳಿ ಬರುವ ಸುರೇಶ್‌ಗೌಡ, ಆದರೆ ನನ್ನ ಏಳಿಗೆ ಕಂಡರೆ ಅವರಿಗೆ ಸಹಿಸಲಾಗುವುದಿಲ್ಲ. ಅವರಿಗೂ ನನ್ನ ರೀತಿ ಸಚಿವನಾಗಬೇಕೆಂಬ ಆಸೆ ಇದೆ ಎನಿಸುತ್ತೆ. ಆದರೆ ಅವರಿಗೆ ಸಚಿವರಾಗಲು ಆಗುತ್ತಿಲ್ಲವಲ್ಲ ಎಂದು ವ್ಯಂಗ್ಯವಾಗಿ ಹೇಳಿದರು. ನಾನು ನನ್ನ ಕ್ಷೇತ್ರಕ್ಕಷ್ಟೇ ಸೀಮಿತನಾಗದೇ ಮಂಡ್ಯ ಜಿಲ್ಲೆಯಲ್ಲಿ ಮಾಡುತ್ತಿರುವ ಅಭಿವೃದ್ಧಿ ಕೆಲಸ ಅವರಿಗೆ ಸಹಿಸಲಾಗುತ್ತಿಲ್ಲ. ಇಡೀ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಸುರೇಶ್‌ಗೌಡರ ನಾಗಮಂಗಲ ಕ್ಷೇತ್ರಕ್ಕೂ ಏತ ನೀರಾವರಿ, ಕುಡಿಯುವ ನೀರಿನ ಕೆಲಸ ಮಾಡಿದ್ದೇವೆ. ಅದನ್ನ ಸುರೇಶ್‌ಗೌಡ ಮೊದಲು ತಿಳಿದು ಮಾತನಾಡಲಿ ಎಂದು ಹರಿಹಾಯ್ದರು.

ಹಿಜಾಬ್ ಕಾಂಗ್ರೆಸ್‌ನ ಕೂಸು: ಹಿಜಾಬ್ ವಿವಾದ ಕುರಿತು ಪ್ರತಿಕ್ರಿಯಿಸಿದ ಸಚಿವ ನಾರಾಯಣಗೌಡ, ಹಿಜಾಬ್ ವಿವಾದ ಸೃಷ್ಟಿಸಿದ್ದೇ ಕಾಂಗ್ರೆಸ್. ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಕರ್ನಾಟಕದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಹಿಜಾಬ್ ವಿವಾದ ಸೃಷ್ಟಿಸಿದೆ. ಇತ್ತ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲಾ ವಿಚಾರದಲ್ಲೂ ರಾಜಕೀಯ ಲಾಭ ಪಡೆಯಲು ಮುಂದಾಗುತ್ತಿದ್ದಾರೆ. ಧಾರ್ಮಿಕ ಕೇಂದ್ರಗಳ ಬಳಿ ವ್ಯಾಪಾರ ವಿಚಾರ ಬಂದಿರೋದು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ. ಕಾಂಗ್ರೆಸ್‌ನವರು ಮಾಡಿರುವ ನಿಯಮಗಳನ್ನು ಮುಂದುವರೆಸಿದ್ದೇವೆ. ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಈ ನಿಯಮ ಬಂದಿರೋದು. ನಾವು ಹೊಸದಾಗಿ ಯಾವುದನ್ನೂ ಮಾಡಿಲ್ಲ. ಸಿದ್ದರಾಮಯ್ಯನವರು ರಾಜಕೀಯ ಮಾಡಲು ಈ ರೀತಿ ಮಾತನಾಡುತ್ತಾರೆ. ಇದನ್ನೆಲ್ಲಾ ಬಿಡಬೇಕು, ಅನವಶ್ಯಕವಾದ ಮಾತುಗಳಿಂದ ಯಾವುದೇ ಲಾಭವಿಲ್ಲ. ಓಟ್ ಬ್ಯಾಂಕ್‌ಗಾಗಿ ಈ ರೀತಿ ವಿವಾದಗಳ ಕಾಂಗ್ರೆಸ್‌ನವರು ಸೃಷ್ಟಿಸುತ್ತಿದ್ದಾರೆ. ಇದೆಲ್ಲ ಒಳ್ಳೆಯ ನಡೆಯಲ್ಲ ಎಂದು ವಾಗ್ದಾಳಿ ನಡೆಸಿದರು.

ನಾಟಕಗಳಿಂದ ಮಾತ್ರ ಕತ್ತಲಿನಿಂದ ಬೆಳಕಿನೆಡೆಗೆ ಹೋಗಲು ಸಾಧ್ಯ

ನಾಟಕ, ವಿಚಾರ ಸಂಕಿರಣ, ಸಂವಾದದಲ್ಲಿ ಅಭಿಪ್ರಾಯ



ಮೈಸೂರು,ಮಾ.27(ಎಂಟಿವೈ)– ನಾಟಕಗಳು ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಕೆಲಸ ಮಾಡಬೇಕು ಎಂದು ನಾಟಕಕಾರ ಪ್ರೊ. ಎಂ.ಎಸ್.ವೇಣುಗೋಪಾಲ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ಭಾನುವಾರ ವಿಶ್ವ ರಂಗಭೂಮಿ ದಿನದ ಅಂಗವಾಗಿ ಆಯೋಜಿಸಿದ್ದ 'ನಾಟಕ, ವಿಚಾರ ಸಂಕಿರಣ, ಸಂವಾದ' ಕಾರ್ಯಕ್ರಮವನ್ನು ಕಂಸಾಳೆ ಬಾರಿಸುವ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಒಂದು ವಿಚಾರ ಅಥವಾ ಆದರ್ಶವನ್ನು ಜನಕ್ಕೆ ಕೊಟ್ಟಾಗ ಮಾತ್ರ ಅನಾಗರಿಕರನ್ನು ನಾಗರಿಕರನ್ನಾಗಿ ಪರಿವರ್ತಿಸಲು ಸಾಧ್ಯ ಎಂದರು.

ನಾಟಕ ಹಾಗೂ ಜೀವನಕ್ಕೆ ಬಹಳ ವ್ಯತ್ಯಾಸವಿದೆ. ನಾಟಕದಲ್ಲಿ ಅಭಿನಯಿಸುವ ವ್ಯಕ್ತಿಗೆ ಪಾತ್ರ, ನಾಟಕದ ಉದ್ದೇಶ, ಅಭಿನಯ, ಹೆಜ್ಜೆ, ನುಡಿಯುವ ನುಡಿಯ ಬಗ್ಗೆ ತಿಳಿದಿರುತ್ತದೆ. ಅದಕ್ಕಾಗಿ ತರಬೇತಿ ಪಡೆಯಲು ಅವಕಾಶವಿರುತ್ತದೆ. ಆದರೆ ಜೀವನಕ್ಕೆ ತರಬೇತಿಯೂ ಇರುವುದಿಲ್ಲ. ನಾಟಕದಂತೆ ವಿವಿಧ ಮಜಲುಗಳ ಬಗ್ಗೆ ಮೊದಲೇ ತಿಳಿದಿರುವುದಿಲ್ಲ. ಈ ನಿಟ್ಟಿನಲ್ಲಿ ಜೀವನವನ್ನು ನಾಟಕದಷ್ಟು ಶ್ರೇಷ್ಠ ಮಾಡುವ ಗುರಿ ನಮ್ಮಲ್ಲಿರಬೇಕು ಎಂದು ಅಭಿಪ್ರಾಯಪಟ್ಟರು.

ವಿಶ್ವಕ್ಕೆ ಸಾವಿರಾರು ವರ್ಷಗಳಾಗಿದ್ದರೂ ಇನ್ನು ಒಂದು ಹೆಜ್ಜೆ ಮುಂದುವರೆದಿಲ್ಲವಲ್ಲ ಎಂಬ ಜಿಜ್ಞಾಸೆ ಕಾಡುತ್ತಿದೆ. ಅದನ್ನೇ ಅನಾಗರಿಕ ಅನಿಸಿಕೆ, ಬುಡಕಟ್ಟು ಜೀವನ ಎಂದು ವಿಶ್ಲೇಷಿಸಬಹುದಾಗಿದೆ ಎಂದರು.

ಮನುಷ್ಯರು ಕೇವಲ ಆಹಾರದಿಂದ ಬದುಕುವುದಿಲ್ಲ. ಹಲವು ವಿಚಾರಧಾರೆಗಳು ಮನುಷ್ಯರನ್ನು ಬೆಳೆಸುತ್ತವೆ. ಉತ್ತಮ ವಿಚಾರ, ಆದರ್ಶ, ಉತ್ತಮ ಉದ್ದೇಶ ಜೀವನ ರೂಪಿಸುತ್ತದೆ. ಇದರಿಂದ ನಾವು ಕತ್ತಲೆಯಿಂದ ಬೆಳಕಿನೆಡೆಗೆ ಸಾಗಬೇಕಾಗಿದೆ. ಅದನ್ನು ರಂಗಭೂಮಿ ಮುನ್ನಡೆಸಲಿದೆ ಎಂಬ ವಿಶ್ವಾಸವಿದೆ. ಈ ಹಿಂದೆ ಅಂದಿನ ನಾಟಕವನ್ನು ನೋಡುವವರ ಸಂಖ್ಯೆ ಹೆಚ್ಚಾಗಿತ್ತು. ಆದರೆ, ಇಂದು ನಾಟಕ ಕ್ಷೇತ್ರದಲ್ಲಿ ನೋಡುಗರು ಮಾತ್ರ ನಾಟಕವನ್ನು ಬದುಕಾಗಿಸುವ ಪ್ರಯತ್ನ ಮಾಡಬೇಕು. ರಂಗಕ್ಷೇತ್ರದಲ್ಲಿರುವ ನಾವೆಲ್ಲಾ ಒಂದೇ ಜಾತಿಯವರು ಹಾಗೂ ಸಹಜರು. ನಮ್ಮ ಉಸಿರಿನಲ್ಲಿ, ಬಸರಿನಲ್ಲಿ, ಕೆಸರಿನಲ್ಲಿ, ಕೊಸರಿನಲ್ಲಿ, ಹೆಸರಿನಲ್ಲಿ ನಾಟಕದ ಜೀವ ಇದೆ. ಯಾವುದೋ ರೂಪದಲ್ಲಿ ತುಡಿಯುತ್ತಿರುತ್ತದೆ ಎಂದು ಅಭಿಪ್ರಾಯಪಟ್ಟರು.

'ಮೈಸೂರು ರಂಗಭೂಮಿ ಅಂದು–ಇಂದು– ಮುಂದು' ವಿಷಯ ಕುರಿತ ವಿಚಾರ ಸಂಕಿರಣದಲ್ಲಿ 'ವೃತ್ತಿ ರಂಗಭೂಮಿ' ಕುರಿತು ರಂಗಚಿಂತಕ ಗೋವಿಂದೇಗೌಡ ವಿಚಾರ ಮಂಡಿಸಿ ಮಾತನಾಡಿ, ಮೈಸೂರಲ್ಲಿ 1680ರಿಂದ ನಾಟಕ ರಂಗ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. 1680 'ಮಿತ್ರವಿಂದ ಗೋವಿಂದ' ನಾಟಕ ರಚನೆಯಾಯಿತು. ಮೈಸೂರು ಅರಸರು ನಾಟಕಕ್ಕೆ ಆದ್ಯತೆ ನೀಡುವುದಕ್ಕೆ ಮುಂದಾದರು. 1682ರಲ್ಲಿ ಚಾಮರಾಜೇಂದ್ರ ನಾಟಕ ಕಂಪನಿ ಆರಂಭಿಸಿದರು. ಆಸ್ಥಾನದಲ್ಲಿದ್ದ ವಿದ್ವಾಂಸರೊಂದಿಗೆ ಚರ್ಚೆ ನಡೆಸಿ ನಾಟಕ ಸಾಹಿತ್ಯ ರಚನೆಗೆ ಸೂಚಿಸಿದರು. ಇದರಿಂದ ಸಂಸ್ಕೃತದಿಂದ ಕನ್ನಡಕ್ಕೆ ಹಲವಾರು ನಾಟಕವನ್ನು ಅನುವಾದ ಮಾಡಿಸಿದರು. ಆ ಸಂದರ್ಭದಲ್ಲಿ ಬಸಪ್ಪಶಾಸ್ತ್ರಿಗಳು, ಶ್ರೀಕಂಠೇಶಗೌಡರು ನಾಟಕಗಳನ್ನು ರೂಪಾಂತರ ಮಾಡಿ ಗಮನ ಸೆಳೆದರು ಎಂದು ವಿವರಿಸಿದರು.

ಕನ್ನಡ ಚಲನಚಿತ್ರ ರಂಗದಲ್ಲಿ ಡಾ.ರಾಜಕುಮಾರ್ ಅವರನ್ನು ವರನಟ ಎನ್ನುವಂತೆ ರಂಗಭೂಮಿ ಕ್ಷೇತ್ರದಲ್ಲಿ ಹಿರಿಯ ರಂಗ ಕಲಾವಿದರಾದ ವರದಾಚಾರ್ಯ ಅವರನ್ನು ವರನಟ ಎಂದು ಕರೆಯಲಾಗುತ್ತದೆ. ರಂಗಸಾಹಿತ್ಯದಲ್ಲಿ 1900–1940ರವರೆಗೆ ವೃತ್ತಿ ರಂಗಭೂಮಿಯಲ್ಲಿ ಸ್ವರ್ಣಯುಗ ಎನ್ನಲಾಗುತ್ತದೆ. 1902ರಲ್ಲಿ ರತ್ನಾವಳಿ ನಾಟಕ ಸಂಸ್ಥೆ ಆರಂಭವಾಯಿತು. ಇದರೊಂದಿಗೆ ಚಾಮರಾಜೇಂದ್ರ ನಾಟಕ ಸಭಾ, ಗುಬ್ಬಿವೀರಣ್ಣ ಕಂಪನಿ, ಚಾಮುಂಡೇಶ್ವರಿ ಕಂಪನಿ, ಹೆಚ್.ಕೆ.ಯೋಗನರಸಿಂಹ ಅವರ ಕನ್ನಡ ಥಿಯೇಟರ್ಸ್, ಡಾ.ಶ್ರೀಕಂಠಮೂರ್ತಿ ಅವರ ಶ್ರೀಕಂಠೇಶ್ವರ ನಾಟಕ ಕಂಪನಿ ಸೇರಿದಂತೆ ಅನೇಕ ನಾಟಕ ಕಂಪನಿ ಮೈಸೂರಲ್ಲಿ ಹೆಸರನ್ನು ಮಾಡಿದವು. ರಂಗನಟನೆ ಪ್ರಸಿದ್ಧಿಯಾಯಿತು. ವರದಾಚಾರ್ಯರು, ಮಳವಳ್ಳಿ ಸುಂದ್ರಮ್ಮ, ಜಿ.ನಾಗೇಶ ರಾಯರು, ಕೊಟ್ಟೂರಪ್ಪ, ಹೆಚ್.ಕೆ.ಯೋಗನರಸಿಂಹ, ಹೊನ್ನಪ್ಪ ಭಾಗವತ್ ಹಾಗೂ ಇನ್ನಿತರ ರಂಗ ದಿಗ್ಗಜರು ರಂಗಭೂಮಿಯನ್ನು ವೈಭವೀಕರಿಸಿದರು ಎಂದು ಹೇಳಿದರು.

ಇದಕ್ಕೂ ಮುನ್ನ ರಂಗಚಿಂತಕ ಡಿ.ನಾಗೇಂದ್ರಕುಮಾರ್ ನೇತೃತ್ವದಲ್ಲಿ ಮಹಿಳೆಯರ ತಂಡ ರಂಗಗೀತೆ ಗಾಯನ ನಡೆಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಂಗಚಿಂತಕಿ ಪ್ರೊ.ಮೀರಾಮೂರ್ತಿ ವಹಿಸಿದ್ದರು. ಇದೇ ವೇಳೆ ಚಾಮರಾಜನಗರದ ವೆಂಕಟರಾಜು 'ಅರೆ ವೃತ್ತಿ ಮತ್ತು ರೆಪರ್ಟರಿ ವಿಷಯ ಕುರಿತು ಮಾತನಾಡಿದರೆ, ರಂಗಚಿಂತಕ ಡಿ.ನಾಗೇಂದ್ರಕುಮಾರ್ 'ಹವ್ಯಾಸಿ ರಂಗಭೂಮಿ' ಕುರಿತು ವಿಷಯ ಮಂಡಿಸಿದರು. ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸರೋಜ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ದೇಸಿರಂಗ ಸಾಂಸ್ಕೃತಿಕ ಕೃಷ್ಣ ಜನಮನ, ಪಿ.ಎಸ್.ದಿನಮಣಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾಳಜಿ ವಹಿಸಿದರೆ ರೋಗಿಗಳಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ

ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಸಲಹೆ



ಮೈಸೂರು,ಮಾ.27(ಎಂಟಿವೈ)– ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳ ಮೇಲೆ ಆಸ್ಪತ್ರೆ ಸಿಬ್ಬಂದಿಗಳು ಕಾಳಜಿ ವಹಿಸಿದಾಗ(ಕೇರ್ ಕಂಪ್ಯಾನಿಯನ್) ಮಾತ್ರ, ರೋಗಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದರೊಂದಿಗೆ ಸದೃಢರನ್ನಾಗಿ ಮಾಡುತ್ತದೆ ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ನೂರಾಹೆಲ್ತ್ ಸ್ವಯಂಸೇವಾ ಸಂಸ್ಥೆಯ ಸಹಯೋಗದಲ್ಲಿ 3 ದಿನಗಳ ಕಾಲ ನಡೆದ ಶುಶ್ರೂಷಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ರೋಗಿಗಳಿಗೆ ಖಾಯಿಲೆಗಳು ಮಾತ್ರ ಇರುವುದಿಲ್ಲ. ಅವರಿಗೆ ಭಾವನೆಗಳು ಇರುತ್ತವೆ. ಎಷ್ಟೋ ರೋಗಿಗಳಿಗೆ ವೈದ್ಯರ ಬಳಿ ಮನಬಿಚ್ಚಿ ಮಾತನಾಡಲು ಆಗುವುದಿಲ್ಲ. ರೋಗಿಗಳಿಗೆ ಕೇವಲ ಶಸ್ತ್ರಚಿಕಿತ್ಸೆ, ಆಂಜಿಯೋಗ್ರಾಂ, ಆಂಜಿಯೋಪ್ಲಾಸ್ಟ್ ಮಾಡಿದರೆ ಅವರ ಆರೋಗ್ಯ ಪರಿಪೂರ್ಣವಾಗುವುದಿಲ್ಲ. ಹಲವು ರೋಗಿಗಳಿಗೆ ಅವರಿಗಿರುವ ಆರೋಗ್ಯ ಸಮಸ್ಯೆಯ ಬಗ್ಗೆ ಹೇಳಲು ಸಾಧ್ಯವಾಗುವುದಿಲ್ಲ. ಇದರಿಂದ ಉತ್ತರ ಸಿಗದಂತಹ ಪ್ರಶ್ನೆಗಳು ರೋಗಿಗಳಲ್ಲಿರುತ್ತವೆ. ಇಂತಹ ಸಂದರ್ಭದಲ್ಲಿ ರೋಗಿಗಳಿಗೆ ಧೈರ್ಯ ತುಂಬುವ ಕೆಲಸವನ್ನು ಶುಶ್ರೂಷಕಿಯರು ಮಾಡಬೇಕಾಗಿರುತ್ತದೆ ಎಂದರು.

ಜಯದೇವ ಆಸ್ಪತ್ರೆಯಲ್ಲಿ ರೋಗಿಗಳಿಗೆ ಇನ್ನಷ್ಟು ಕೇರ್ ಮಾಡುವುದಕ್ಕೆ ಸಂಬಂಧಿಸಿದಂತೆ ಶುಶ್ರೂಷಕಿಯರಿಗೆ ತರಬೇತಿ ನೀಡಲಾಗುತ್ತಿದೆ. ಮೊದಲ ಹಂತದಲ್ಲಿ ಮೈಸೂರು ಮತ್ತು ಗುಲ್ಬರ್ಗದ 20 ಶುಶ್ರೂಷಕರಿಗೆ ತರಬೇತಿ ನೀಡಲಾಗಿದೆ. ರೋಗಿಗಳು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರವೂ ಕೋ–ಆರ್ಡಿನೇಟರ್‌ಗಳು ಫೋನ್ ಮೂಲಕ ಫೀಡ್‌ಬ್ಯಾಕ್ ತೆಗೆದುಕೊಂಡು ರೋಗಿಗಳ ಸಂಪರ್ಕದಲ್ಲಿರಬೇಕು. ಅಗತ್ಯ ಸಲಹೆ ಸೂಚನೆ ನೀಡಬೇಕು. ಇದರಿಂದ ಸಾವಿನ ಪ್ರಮಾಣವು ಕಡಿಮೆಯಾಗುತ್ತದೆ. ಆಸ್ಪತ್ರೆಯ ಬಗ್ಗೆಯೂ ಒಳ್ಳೆಯ ಅಭಿಪ್ರಾಯ ಮೂಡುತ್ತದೆ ಎಂದು ಸಲಹೆ ನೀಡಿದರು.

ರೋಗಿಗಳ ಒಡನಾಡಿ, ಕುಟುಂಬದ ಸದಸ್ಯರಿಗೆ ರೋಗಿಗಳ ಸ್ಥಿತಿಗತಿ ಹಾಗೂ ನೋಡಿಕೊಳ್ಳುವ ಕುರಿತಂತೆ ಮಾಹಿತಿ ನೀಡಬೇಕು. ಆಸ್ಪತ್ರೆಯಲ್ಲಿ ಶುಶ್ರೂಷಕಿಯರಿಂದ ಆತ್ಮಸ್ಥೈರ್ಯದ ಮಾತುಗಳಾಡಿದರೆ ರೋಗಿಗಳಲ್ಲಿರುವ ಆತಂಕ, ಹೆದರಿಕೆ ನಿವಾರಣೆಯಾಗಲಿದೆ. ಆಸ್ಪತ್ರೆಯಲ್ಲಿ ರಿಜಿಸ್ಟರ್ ಆಗಿರುವ ರೋಗಿಗಳ ವ್ಯಾಟ್ಸ್‌ಪ್ ಗ್ರೂಪ್‌ಗೆ 080–45691274ಗೆ ಮಿಸ್ಡ್‌ಕಾಲ್ ಕೊಟ್ಟರೆ ಸಂಪೂರ್ಣ ಮಾಹಿತಿ ಸಿಗುತ್ತದೆ ಎಂದರು.

ಇದೆ ಸಂದರ್ಭದಲ್ಲಿ ಡಾ.ಸಿ.ಎನ್. ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು ಹಾಗೂ ತರಬೇತಿಯಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ, ಕೇರ್ ಕಂಪ್ಯಾನಿಯನ್ ನಿರ್ದೇಶಕ ಡಾ. ಸೀಮಾಮೂರ್ತಿ, ಹೆಚ್.ಜಿ. ಆನಂದ್, ಡಾ.ಶಂಕರಶಿರಾ, ಡಾ. ವೀರೇಶ್ ಪಾಟೀಲ್, ಡಾ.ದೇವರಾಜ್, ಡಾ.ಮಂಜುನಾಥ್, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್, ಪಿಆರ್‌ಓ ವಾಣಿ ಮೋಹನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ



ಮೈಸೂರು, ಮಾ.27(ಎಂಟಿವೈ)– ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಅರಸು ಪತ್ರಿಕೆ 9ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದ 6 ಮಂದಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಕೆವಿ.ಅಯ್ಯಣ್ಣ ಅರಸು ಮಹಿಳಾ ಸಂಘದ ಅಧ್ಯಕ್ಷೆ ಸುಜಯ ಕಾಂತಮ್ಮಣ್ಣಿ ಶ್ರೀ ವೆಂಕಟಗಿರಿ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಪ್ರೊ.ನೀ.ಗಿರಿಗೌಡ, ಲಯನ್ಸ್ ಸಂಸ್ಥೆಯ ವೆಂಕಟೇಶ್, ಅಡ್ವೈಸರ್ ಕನ್ನಡ ಮಾಸ ಪತ್ರಿಕೆ ಸಂಪಾದಕ ಸಿ.ಬಸವರಾಜು, ಅಂಕಣಕಾರ ಲಕ್ಷ್ಮಿ ಕಿಶೋರ್ ಅರಸ್ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ವಿದ್ಯಾಶಂಕರ್ ಅವರಿಗೆ ಮುಕ್ತ ವಿವಿಯಲ್ಲಿ ಹಿಂದುಳಿದ ವರ್ಗಗಳ ಹರಿಕಾರ ಡಿ.ದೇವರಾಜ ಅರಸು ಅವರ ಪ್ರತಿಮೆ ನಿರ್ಮಾಣ ಮಾಡುವಂತೆ ಮನವಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬೆಂಗಳೂರಿನ ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಮರ್‌ನಾಥ್ ರಾಜೇ ಅರಸ್, ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

ಮೇಗಳಪುರದಲ್ಲಿ 'ಶ್ರೀ ಅಪ್ರಮೇಯ ರೆಸಾರ್ಟ್' ಉದ್ಘಾಟನೆ



ಮೈಸೂರು, ಮಾ.27–ಮೈಸೂರು ತಾಲೂಕು, ವರುಣಾ ಹೋಬಳಿ, ಕೀಳನಪುರ ಗ್ರಾಪಂ ವ್ಯಾಪ್ತಿಯ ಮೇಗಳಪುರದಲ್ಲಿ ನೂತನವಾಗಿ ನಿರ್ಮಿಸಿರುವ 'ಶ್ರೀ ಅಪ್ರಮೇಯ ರೆಸಾರ್ಟ್' ಅನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉದ್ಘಾಟಿಸಿದರು.

ಭಾನುವಾರ ಬೆಳಗ್ಗೆ ರೆಸಾರ್ಟ್ ಮುಖ್ಯ ದ್ವಾರದ ಟೇಪು ಕತ್ತರಿಸುವ ಮೂಲಕ ಒಳಗೆ ಪ್ರವೇಶಿಸಿದ ಸಿದ್ದರಾಮಯ್ಯನವರು ದೀಪ ಬೆಳಗಿ, ದೇವರ ಫೋಟೋಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಶುಭ ಹಾರೈಸಿದರು.

ಇದೇ ವೇಳೆ ಜೆ.ಪಿ.ಪ್ಯಾಲೇಸ್ ಹೋಟೆಲ್ ಮಾಲೀಕರಾದ ಸಂಜಯ್ ರಾಜ್ ಮತ್ತು ಅವರ ಪತ್ನಿ ದೇವಿಕಾ ಸಂಜಯ್ ರಾಜ್ ಅವರುಗಳು ರೆಸ್ಟೋರೆಂಟ್ ಉದ್ಘಾಟಿಸಿ, ಶುಭ ಕೋರಿದರು. ಮೇಗಳಾಪುರ ಗ್ರಾಮದ ಮುಖಂಡರು, ಕೀಳನಪುರ ಗ್ರಾಪಂ ಸದಸ್ಯರುಗಳು ಸೇರಿದಂತೆ ಗ್ರಾಮಸ್ಥರು ಈ ವೇಳೆ ಪಾಲ್ಗೊಂಡಿದ್ದರು.

ಉದ್ಯಮಿಗಳಾದ ಎಂ.ಕೆ. ಪೋತರಾಜ್, ಗುರು, ಯುವ ಕಾಂಗ್ರೆಸ್ ಮುಖಂಡ ಸುನಿಲ್ ಬೋಸ್, ಕೀಳನಪುರ ಗ್ರಾಪಂ ಅಧ್ಯಕ್ಷೆ ಸಕ್ಕುಬಾಯಿ, ಉಪಾಧ್ಯಕ್ಷ ಮಹೇಶ್, ಕೀಳನಪುರ ಮುಖಂಡರಾದ ಮಹದೇವಪ್ಪ, ಬಸವರಾಜು, ದುದ್ದಗೆರೆ ಬೀರೇಗೌಡರು, ಲಿಕ್ಕರ್ ಸಂಘದ ಅಧ್ಯಕ್ಷರಾದ ಗುರುಸ್ವಾಮಿ ಅವರುಗಳು ಭಾಗವಹಿಸಿದ್ದರು. ರೆಸಾರ್ಟ್ ಮಾಲೀಕರಾದ ಗೋವಿಂದರಾಜು, ಅವರ ಪತ್ನಿ ಕಾಂತಮಣಿ, ಪುತ್ರಿ ಮನೀತಾಶ್ರೀ, ಪುತ್ರರಾದ ಮಹೇಶ್, ಮಧು ಸೇರಿದಂತೆ ಕುಟುಂಬಸ್ಥರು ಈ ಶುಭ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ರಾಕಿಂಗ್ ಸ್ಟಾರ್ ಯಶ್ ಅಭಿನಯದ ಕೆಜಿಎಫ್–2 ಚಿತ್ರದ ಟ್ರೈಲರ್ ಬಿಡುಗಡೆ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಭಾನುವಾರ ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ 1001 ತೆಂಗಿನಕಾಯಿ ಒಡೆದು ಶುಭ ಕೋರಿದರು. ಚಿತ್ರದಲ್ಲಿ ಅಖಿಲ ಕರ್ನಾಟಕ ರಾಕಿಂಗ್ ಸ್ಟಾರ್ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಮನು ಶೈವ್, ಮಣಿ, ಚೇತನ್, ಆಕಾಶ್, ಚೇತನ್, ಇನ್ನಿತರ ಅಭಿಮಾನಿಗಳನ್ನು ಕಾಣಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.03.2022 ಸೋಮವಾರ, ಮಳೆ ನಕ್ಷತ್ರ: ಉಭಾ 18.03.2022 ರಿಂದ 30.03.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಬಯೋಟೆಕ್ನಾಲಜಿ ಸ್ನಾತಕೋತ್ತರ ವಿಭಾಗದಿಂದ ಟ್ರಾನ್ಸ್‌ಜಿನಿಕ್ಸ್ ಮತ್ತು ಪ್ರೋಟೀನ್ ಥೆರಪಿಯಾಟಿಕ್ಸ್ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಮೈಸೂರು ವಿವಿ ಬಯೋಟೆಕ್ನಾಲಜಿ ಪ್ರಾಧ್ಯಾಪಕ ಡಾ. ಎಸ್. ಉಮೇಶ, ಅಧ್ಯಕ್ಷತೆ: ಜೆಎಸ್‌ಎಸ್ ವಿದ್ಯಾ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ. ಬಿ.ವಿ. ಸಾಂಬಶಿವಯ್ಯ, ಉಪಸ್ಥಿತಿ: ಪ್ರಾಂಶುಪಾಲ ಪ್ರೊ. ಎಂ.ಪಿ. ವಿಜಯಕುಮಾರ್, ಸ್ಥಳ: ಕಾಲೇಜಿನ ಸಭಾಂಗಣ, ಸಮಯ: ಬೆಳಗ್ಗೆ 10ಕ್ಕೆ

■ **ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ:** ಮೈಸೂರಿನ ರಾಮಕೃಷ್ಣ ನಗರದ ನೃಪತುಂಗ ಕನ್ನಡ ಸಂಸ್ಥೆಗಳ ಆಶ್ರಯದಲ್ಲಿ ಜಾಲತಾಣ (ವೆಬ್‌ಸೈಟ್) ಉದ್ಘಾಟನೆ: ಭಾರತೀಯ ಸ್ಟೇಟ್ ಬ್ಯಾಂಕ್ ಮೈಸೂರು ಪ್ರಾದೇಶಿಕ ಕಚೇರಿ ಸಹಾಯಕ ಪ್ರಧಾನ ವ್ಯವಸ್ಥಾಪಕ ಸತೀಶ್. ಎನ್, ಮುಖ್ಯ ಅತಿಥಿ: ವೇಣುಗೋಪಾಲ್ ಕೆ.ವಿ, ಅಧ್ಯಕ್ಷತೆ: ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಪ್ರಕಾಶಕರು ಮತ್ತು ಧರ್ಮದರ್ಶಿ ಡಿ.ಎನ್.ಲೋಕಪ್ಪ ಸ್ಥಳ: ಸಂಸ್ಥೆಯ ಆವರಣ, ರಾಮಕೃಷ್ಣ ನಗರ ಸಮಯ: ಮಧ್ಯಾಹ್ನ 1.30ಕ್ಕೆ

■ **ಸಾತ್ವಿಕಿ ಸೇವಾ ಟ್ರಸ್ಟ್:** ಚಾಮರಾಜನಗರದ ಸಾತ್ವಿಕಿ ಸೇವಾ ಟ್ರಸ್ಟ್‌ನಿಂದ ಮಹಿಳಾ ದಿನಾಚರಣೆ ಮತ್ತು ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ರಂಗಾಯಣ ಶಿವಮೊಗ್ಗ ಕಲಾವಿದರಿಂದ 'ದ ಪೀಪಲ್ ಆಫ್ ಇಂಡಿಯಾ' ನಾಟಕ ಪ್ರದರ್ಶನ, ನಾಟಕ ರಚನೆ: ಡಾ. ರಾಜಪ್ಪ ದಳವಾಯಿ, ನಿರ್ದೇಶನ: ಲಕ್ಷ್ಮಣ್, ಸಂಗೀತ: ಶೋಧನ್ ಬಸ್ರೂರ್, ಮುಖ್ಯ ಅತಿಥಿಗಳು: ಸಿಡಿಪಿಓ ಮಂಜುಳಾ ಪಾಟೀಲ್, ಒಡನಾಡಿ ಸೇವಾ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ನರೇಂದ್ರ ಎಸ್. ಕುಮಾರ್, ಸ್ಥಳ: ಕಲಾ ಮಂದಿರ, ಸಮಯ: ಸಂಜೆ 5.30ಕ್ಕೆ

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿಂದು

■ **ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ** : ಬೆಳಗ್ಗೆ ಶ್ರೀಯವರ ಬ್ರಹ್ಮ ರಥೋತ್ಸವ, ಸಂಜೆ ಶಾಂತ್ಯುತ್ಸವ ಸ್ಥಳ: ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಘೂ ಸಂಜೆ 5ಕ್ಕೆ ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ 'ಸಂಗ್ರಾಮದ ಸ್ಮೃತಿಗಳು' ಮೈಸೂರು ಸಂಸ್ಥಾನದ ಹೋರಾಟದ ನೆನಪುಗಳ ಮಾಲೆ: ಪ್ರಸ್ತುತಿ ದಿವಾಕರ ಹೆಗಡೆ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಪಿ. ಸುರಭಿ, ಡಿ. ಪುರುಷೋತ್ತಮ್, ವ್ಯಾಖ್ಯಾನ: ಕೆ.ಎಲ್. ಪದ್ಮಿನಿ ಹೆಗಡೆ, 7.15 ತ್ಯಾಜ್ಯ ನಿಭಾಯಿಸುವ ರೀತಿ 'ಮನೆ ಬಾಗಿಲಿಗೆ ಸಮಗ್ರ ಮಾಹಿತಿ' ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ ಪ್ರಾಯೋಜಿತ ಕಾರ್ಯಕ್ರಮ, 9.00 'ಯಕ್ಷ ಸಂಪದ' ಯಕ್ಷಗಾನದ ಬಡಗು ತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ: ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ ಮತ್ತು ಪ್ರಸ್ತುತಿ: ದಿವಾಕರ ಹೆಗಡೆ, 9.35 ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯ ಸಂಭ್ರಮ: ತಾಳ, ಲಯ, ರಸಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ: ಹೆಚ್.ಎನ್. ಶಿವಶಂಕರಸ್ವಾಮಿ, ನಿರ್ಮಾಣ: ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು, 12.45 ನಮ್ಮ ಆರೋಗ್ಯ: ಸೈಕೋಸಿಸ್ ಅಥವಾ ಚಿತ್ತ ವಿಕಲತೆ ಕುರಿತು ಡಾ. ಎಂ.ಎನ್. ರಾಜೇಶ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಎ.ಡಿ. ಶ್ರೀನಿವಾಸನ್, 3.00 ಬಾಂಬೆ ಸಹೋದರಿಯರು: ಯುಗಳ ಗಾಯನ, 4.00 ಮಹಿಳಾರಂಗ: ಜೀವನ್ಮುಖಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ, ಕಲಿಕಾ ಕಾರ್ಯಕ್ರಮ: ಕವಿ ನಿರ್ಮಲಾ ಸುರತ್ಕಲ್, ಸಂಗೀತ: ಮೌನೇಶ್‌ಕುಮಾರ್ ಛಾವಣಿ, ಭಾಗವಹಿಸಲಿದ್ದಾರೆ: ಮಂಗಳೂರಿನ ಶಾರದಾ ವಿದ್ಯಾಲಯದ ಮಕ್ಕಳು, 6.50 ಕೃಷಿ ರಂಗ: ಕಿಸಾನ್ ವಾಣಿ: ಕೃಷಿಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಪ್ರಗತಿಪರ ಕೃಷಿಕ ಕರೀಗೌಡ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

ಮೈಸೂರು ವಕೀಲರ ಸಂಘದಿಂದ ಮಹಿಳಾ ದಿನಾಚರಣೆ

ವೃತ್ತಿ ಅಪೇಕ್ಷಿಸುವ ಜ್ಞಾನ, ದಕ್ಷತೆ, ಕಾರ್ಯಕ್ಷಮತೆ ಹೊಂದಬೇಕು

ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಉಮಾ ಅಭಿಮತ

ಮೈಸೂರು,ಮಾ.27(ಪಿಎಂ)–ವಕೀಲ ವೃತ್ತಿಯಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರು ವೃತ್ತಿಪರತೆ ಮೈಗೂಡಿಸಿಕೊಳ್ಳಲು ಹೆಚ್ಚು ಒತ್ತು ನೀಡಬೇಕು. ಯಾರ ಮೇಲೂ ಅವಲಂಬಿತರಾಗದೇ ವೃತ್ತಿ ಅಪೇಕ್ಷಿಸುವ ಜ್ಞಾನ, ದಕ್ಷತೆ, ಕಾರ್ಯಕ್ಷಮತೆ ಹೊಂದಲೇಬೇಕು ಎಂದು ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ.ಜಿ.ಉಮಾ ಹೇಳಿದರು.

ಮೈಸೂರು ವಕೀಲರ ಸಂಘದ ವಿಸ್ತೃತ ಕಟ್ಟಡದ ಕಾನ್ಫರೆನ್ಸ್ ಹಾಲ್‌ನಲ್ಲಿ ಸಂಘದ ವತಿಯಿಂದ ಮೈಸೂರು ಜಿಲ್ಲಾ ಮಹಿಳಾ ವಕೀಲರ ವೇದಿಕೆ, ಲಾಗೈಡ್ ಕನ್ನಡ ಕಾನೂನು ಪತ್ರಿಕೆ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಗೆ ಸಮಾನವಾದ ಅವಕಾಶ ಕೆಲವೊಂದು ಕ್ಷೇತ್ರದಲ್ಲಿ ಕೆಲಮಟ್ಟಿಗೆ ಸಿಕ್ಕಿದೆ. ಇಷ್ಟಕ್ಕೇ ಸಮಾಧಾನ ಎಂದುಕೊಳ್ಳಬಾರದು. ನಾವೆಲ್ಲಾ ವಕೀಲ ವೃತ್ತಿಗೆ ಬಂದಾಗ ಒಬ್ಬರು ಇಬ್ಬರು ಮಹಿಳೆಯರು ಕಷ್ಟಪಟ್ಟು ಇಲ್ಲಿ ಕಾಲೂರುತ್ತಿದ್ದರು. ಈಗ ಇದು ಬದಲಾಗಿದೆ. ಇಂದು ಮಹಿಳೆಯರು ವೈದ್ಯರು, ಪ್ರಾಧ್ಯಾಪಕರು, ಬ್ಯಾಂಕ್ ಉದ್ಯೋಗಿ ಸೇರಿದಂತೆ ಹಲವು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಂತೆ ಆಗಿದೆ. ಅಂತೆಯೇ ವಕೀಲ ವೃತ್ತಿಯಲ್ಲೂ ಮಹಿಳೆಯರು ಮುನ್ನಡೆಯುತ್ತಿದ್ದಾರೆ. ಆದರೆ ಬೇರೆ ವೃತ್ತಿಗಳಿಗೆ ಹೋಲಿಸಿದರೆ ವಕೀಲ ವೃತ್ತಿ ಅಪೇಕ್ಷಿಸುವ ವೃತ್ತಿಪರತೆ ತನ್ನದೇ ಆದ ಭಿನ್ನತೆ ಮತ್ತು ವಿಶಿಷ್ಟತೆ ಹೊಂದಿದೆ ಎಂದು ತಿಳಿಸಿದರು.

ವಕೀಲ ವೃತ್ತಿಯಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರು ದೃಢ ಮನಸ್ಸು ಹೊಂದಿರಬೇಕು. ಕಕ್ಷಿದಾರರಲ್ಲಿ ಆತ್ಮವಿಶ್ವಾಸ ಮೂಡಿಸುವುದೂ ಸೇರಿದಂತೆ ನಾವು ಸಮರ್ಥರಿದ್ದೇವೆ ಎಂಬ ಸಂದೇಶ ರವಾನಿಸಬೇಕು. ಕೋರ್ಟಿನ ಒಳಗೆ ಸಮರ್ಥ ವಾದ ಮಂಡನೆ ಮಾಡುವುದೂ ಸೇರಿದಂತೆ ಎದುರಾಗುವ ಎಲ್ಲಾ ಸವಾಲುಗಳನ್ನು ದಿಟ್ಟವಾಗಿ ಎದುರಿಸುವ ಮನೋಭಾವ ನಮ್ಮದಾಗಬೇಕು ಎಂದರು.

ನಮ್ಮ ಕಾಲದಲ್ಲಿ ಮಹಿಳೆಯರಾಗಿ ನಾವು ಎಷ್ಟು ಕಷ್ಟದಲ್ಲಿ ವಕೀಲ ವೃತ್ತಿ ಪ್ರಾರಂಭ ಮಾಡಿದೆವು ಎಂಬುದು ನಮ್ಮ ಕಾಲಘಟ್ಟದವರಿಗೇ ಗೊತ್ತು. ಇಲ್ಲಿ ಉಳಿದು ಬೆಳೆಯುವುದು ಅಷ್ಟು ಕಷ್ಟವಿತ್ತು. ಇಂದಿನ ತಲೆಮಾರಿನ ಮಹಿಳೆಯರಿಗೆ ಅಂತಹ ಸವಾಲು ಇಲ್ಲ. ಅಂದಮಾತ್ರಕ್ಕೆ ಇಂದು ಎಲ್ಲವೂ ಸುಗಮವಾಗಿದೆ ಎಂದೂ ಹೇಳಲಾಗದು. ಇಂದಿನ ಮಹಿಳಾ ವಕೀಲರು ಅಂದಿಗಿಂತ ಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಮ್ಮ ಕಾಲದಲಲ್ಲಿದ್ದ ಸಮಸ್ಯೆ ಇಂದು ಇರಲಿಕ್ಕಿಲ್ಲ. ಆದರೆ ಬೇರೆ ಬೇರೆ ರೀತಿಯ ಸಮಸ್ಯೆಗಳು ಹುಟ್ಟಿಕೊಂಡಿವೆ. ಇದರ ವಿರುದ್ಧ ದನಿ ಎತ್ತುವುದು ಅಗತ್ಯ ಎಂದು ತಿಳಿಸಿದರು.

ನ್ಯಾಯಾಂಗದಲ್ಲಿ ಸಾರ್ಥಕ ಸೇವೆ ಸಲ್ಲಿಸುವ ಮೂಲಕ ಸಾಧನೆಗೈದ ಮಹಿಳಾ ನ್ಯಾಯವಾದಿ, ನ್ಯಾಯಮೂರ್ತಿ, ನ್ಯಾಯಾಧೀಶರು ಮಹಿಳಾ ವಕೀಲರಿಗೆ ಆದರ್ಶವಾಗಬೇಕು. ನಾನು ಜಿಲ್ಲಾ ನ್ಯಾಯಾಧೀಶೆಯಾಗಿ ಮೈಸೂರಿನಿಂದಲೇ ವೃತ್ತಿ ಆರಂಭಿಸಿದೆ. 2008–11ರ ಈ ಅವಧಿಯಲ್ಲಿ ನಾನು ಸಾಕಷ್ಟು ಕಲಿತ ವಿದ್ಯೆ ಇಂದು ಅತ್ಯಂತ ಆತ್ಮವಿಶ್ವಾಸದಿಂದ ಮುನ್ನಡೆಯಲು ಕಾರಣವಾಗಿದೆ ಎಂದರು. ಯಾವುದೇ ಇಲಾಖೆಯಾಗಲಿ ಮಹಿಳಾ ಅಧಿಕಾರಿಗಳಾದಲ್ಲಿ ಅವರು ಲಂಚ ಮುಕ್ತರು ಎಂಬ ನಂಬಿಕೆ ಇತ್ತು. ಆದರೆ ಇಂದು ಆ ನಂಬಿಕೆ ಉಳಿದಿದೆಯೇ ಎಂದು ಅವಲೋಕಿಸಬೇಕಿದೆ. ಅನಾರೋಗ್ಯಕರ ವಿಚಾರಗಳಲ್ಲಿ ಪುರುಷರೊಂದಿಗೆ ಮಹಿಳೆಯರು ಸ್ಪರ್ಧೆಗೆ ಇಳಿಯುವುದು ಆಗಬಾರದು. ಒಳ್ಳೆಯ ವಿಚಾರದಲ್ಲಿ ಪುರುಷರಿಗೆ ಸಮನಾಗಿ ಕೆಲಸ ಮಾಡೋಣ ಎಂದು ನುಡಿದರು.

ಸಾಮಾನ್ಯವಾಗಿ ಪುರುಷರಲ್ಲಿ ಚಿಕ್ಕ ವಯಸ್ಸಿನಲ್ಲೇ ಹೃದಯಾಘಾತ ಉಂಟಾಗುವ ಸಾಧ್ಯತೆ ಹೆಚ್ಚಿತ್ತು ಆದರೆ ಇಂದು ಈ ಸಮಸ್ಯೆ ಮಹಿಳೆಯರಲ್ಲೂ ಕಾಣಿಸಿಕೊಳ್ಳುವಂತಾಗಿದೆ ಎಂದು ಸಂಶೋಧನೆಯೊಂದು ಹೇಳುತ್ತಿದೆ. ಹಾಗಾಗಿ ನಾವು ನಮ್ಮ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಾಯ್ದುಕೊಳ್ಳಬೇಕು ಎಂದರು.

ದಮನಿತ, ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಕೊಡಿಸುವುದು ನಮ್ಮ ಆದ್ಯತೆ ಆಗಬೇಕು. ಕೌಟುಂಬಿಕ ಹಿಂಸೆ ಸೇರಿದಂತೆ ಮೊದಲಾದ ವಿಚಾರಗಳಿಂದ ಸಂತ್ರಸ್ತರಾಗಿ ಬರುವ ಮಹಿಳೆಯರ ಬಗ್ಗೆ ಗಮನ ನೀಡಬೇಕು. ಇಂತಹ ಪ್ರಕರಣಗಳಲ್ಲಿ ಕೂಡ ತಮಗೆ ಸಿಗುವ ಪರ್ಸೆಂಟೇಜ್ ಬಗ್ಗೆ ಮಹಿಳಾ ವಕೀಲರು ಲೆಕ್ಕಾಚಾರದಲ್ಲಿ ಹಾಕುವ ಬಗ್ಗೆ ಸಣ್ಣ ಪ್ರಮಾಣದ ದೂರು ಇದೆ. ಸಣ್ಣ ಪ್ರಮಾಣದ್ದೇ ಆದರೂ ಇದು ಮನಸ್ಸಿಗೆ ನೋವು ಉಂಟು ಮಾಡುತ್ತದೆ. ನೊಂದ ಮಹಿಳೆಗೆ ಸ್ಪಂದಿಸಿ, ನ್ಯಾಯ ಕೊಡಿಸುವುದು ನಮ್ಮ ಆದ್ಯತೆ ಆಗಬೇಕು ಎಂದು ಹೇಳಿದರು.

ಇದೇ ವೇಳೆ 25 ವರ್ಷ ಸೇವೆ ಸಲ್ಲಿಸಿರುವ 8 ಮಂದಿ ಮಹಿಳಾ ವಕೀಲರನ್ನು ಸನ್ಮಾನಿಸಲಾಯಿತು. ಮಹಾರಾಜ ಕಾಲೇಜು ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮುಖ್ಯ ಭಾಷಣ ಮಾಡಿದರು. ಹೈಕೋರ್ಟ್ ನ್ಯಾಯಮೂರ್ತಿ ಮರಳೂರು ಇಂದ್ರಕುಮಾರ್ ಅರುಣ್, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್, ಮೈಸೂರು ಉಪವಿಭಾಗಾಧಿಕಾರಿ ಕಮಲಬಾಯಿ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹಾದೇವ ಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಜಂಟಿ ಕಾರ್ಯದರ್ಶಿ ಜಿ.ಎಂ.ನಾಗೇಶ್, ಮಹಿಳಾ ಘಟಕದ ಜಂಟಿ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ ಮತ್ತಿತರರು ಹಾಜರಿದ್ದರು.




ಮೈಸೂರು ವಕೀಲರ ಸಂಘದ ವಿಸ್ತೃತ ಕಟ್ಟಡದ ಕಾನ್ಫರೆನ್ಸ್ ಹಾಲ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ.ಜಿ.ಉಮಾ ಮಾತನಾಡಿದರು. ಎಡಚಿತ್ರದಲ್ಲಿ ಇದೇ ಕಾರ್ಯಕ್ರಮದಲ್ಲಿ ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಮರಳೂರು ಇಂದ್ರಕುಮಾರ್ ಅರುಣ್, ಎಂ.ಜಿ.ಉಮಾ ಅವರನ್ನು ಸನ್ಮಾನಿಸಿರುವುದನ್ನು ಕಾಣಬಹುದು.

ಸಾಮಾಜಿಕ ಬದಲಾವಣೆಗೆ ಕಾನೂನು, ವಕೀಲರ ಪಾತ್ರ ಅತ್ಯವಶ್ಯಕ

ಹೈಕೋರ್ಟ್ ನ್ಯಾಯಮೂರ್ತಿ ಮರಳೂರು ಇಂದ್ರಕುಮಾರ್ ಅರುಣ್

ಮೈಸೂರು,ಮಾ.27(ಪಿಎಂ)– ಯಾವುದೇ ಸಮಾಜದಲ್ಲಿ ಒಂದು ಉನ್ನತ ಮಟ್ಟದ ಸಾಮಾಜಿಕ ಬದಲಾವಣೆ ಆಗಬೇಕಾದರೆ ಕಾನೂನು ಮತ್ತು ವಕೀಲರ ಪಾತ್ರ ಅತ್ಯವಶ್ಯಕ ಎಂದು ಹೈಕೋರ್ಟ್ ನ್ಯಾಯಮೂರ್ತಿ ಮರಳೂರು ಇಂದ್ರಕುಮಾರ್ ಅರುಣ್ ಹೇಳಿದರು. ಅನಾದಿ ಕಾಲದಿಂದಲೂ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಶೋಷಣೆಗೆ ಒಳಗಾಗಿದ್ದಾಳೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾನೂನು ಮತ್ತು ವಕೀಲರ ಪಾತ್ರ ನಿಜವಾಗಲೂ ಪ್ರಮುಖ. ಎರಡು ಶತಮಾನಗಳ ಹಿಂದೆ ಸತಿಸಹಗಮನ ಪದ್ಧತಿ ರೂಢಿಯಲ್ಲಿತ್ತು. ಇದನ್ನು ಕಾನೂನು ಮೂಲಕ ತೊಡೆದು ಹಾಕಿದ್ದೇವೆ. ಇಂತಹ ಹಲವು ಉದಾಹರಣೆಗಳಿದ್ದು, ಈ ಹಿನ್ನೆಲೆಯಲ್ಲಿ ಇಂದಿನ ಮಹಿಳೆ ಅಬಲೆ ಆಗದೇ ಸಬಲೆಯಾಗಿದ್ದಾಳೆ ಎಂದರು. ಇಂತಹ ಕಾರ್ಯಕ್ರಮಗಳ ಮೂಲಕ ಯಾವ್ಯಾವ ಕ್ಷೇತ್ರದಲ್ಲಿ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ ಎಂದು ಗುರುತಿಸಿ, ಅದನ್ನು ಸರಿಪಡಿಸಲು ಮುಂದಾಗುವುದು ನಮ್ಮ ಆದ್ಯತೆ ಆಗಬೇಕು ಎಂದು ಸಲಹೆ ನೀಡಿದರು.

ಜಾತಿ ನಿಂದನೆ ಮಾಡಿದವನನ್ನು ಕೂಡಲೇ ಬಂಧಿಸಲು ಆಗ್ರಹ

ಬೆಂಗಳೂರು, ಮಾ.27– ಬಸಲಿಂಗಯ್ಯ ಎಂಬ ವ್ಯಕ್ತಿ ಕುರುಬ ಜಾತಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು, ಈತನನ್ನು ಕೂಡಲೇ ಬಂಧಿಸಬೇಕು, ತಡವಾದರೆ ಆಗುವ ಅನಾಹುತಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಎಚ್ಚರಿಕೆ ನೀಡಿದ್ದಾರೆ.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಕುರಿತು ಖಾಸಗಿ ವಾಹಿನಿಗೆ ಕಲಬುರ್ಗಿಯಿಂದ ಫೋನ್ ಮಾಡಿ ಪ್ರತಿಕ್ರಿಯೆ ನೀಡಿರುವ ಬಸಲಿಂಗಯ್ಯ ಎಂಬ ವ್ಯಕ್ತಿ ಕುರುಬ ಜಾತಿಯನ್ನು ಅವಾಚ್ಯ ಪದಗಳಿಂದ ಪದೇ ಪದೆ ಜಾತಿ ನಿಂದನೆ ಮಾಡಿ ಲಕ್ಷಾಂತರ ಜನರ ಭಾವನೆಗೆ ಧಕ್ಕೆ ತಂದಿದ್ದಾನೆ. ಇಂತಹ ವ್ಯಕ್ತಿಯನ್ನು ಕೂಡಲೇ ಬಂಧಿಸಿ, ಕಾನೂನಾತ್ಮಕ ಶಿಕ್ಷೆ ಕೊಡದಿದ್ದರೆ, ಸಮಾಜ ಸಮಾಜಗಳ ನಡುವೆ ಘರ್ಷಣೆ ಏರ್ಪಟ್ಟು, ರಾಜ್ಯದಲ್ಲಿ ಅಶಾಂತಿ ಉಂಟಾಗುತ್ತದೆ. ಇದಕ್ಕೆ ಅವಕಾಶ ನೀಡದಂತೆ ಸರ್ಕಾರ ತಡಮಾಡದೆ, ಕೂಡಲೇ ಈ ಬಸಲಿಂಗಯ್ಯನನ್ನು ಬಂಧಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಒತ್ತಾಯಿಸಿದೆ.

ನಮ್ಮದು ಪ್ರಜಾತಂತ್ರ ವ್ಯವಸ್ಥೆ. ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಯಾವುದೇ ವಿಷಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಬಹುದು. ಸಿದ್ದರಾಮಯ್ಯ ಅವರ ಹೇಳಿಕೆಗೂ ಪರ ವಿರೋಧ ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರೂ ಸ್ವತಂತ್ರರು. ಆದರೆ ಜಾತಿಯನ್ನು ಕುರಿತು ಅವಹೇಳನ ಮಾಡುವಂತಹದ್ದು ಖಂಡನಾರ್ಹ. ಬಸಲಿಂಗಯ್ಯ ಹೇಳಿಕೆಯಿಂದ ಕುರುಬ ಸಮಾಜ ತೀವ್ರ ಆಕ್ರೋಶಗೊಂಡಿದೆ. ಸಮಾಜದ ಯುವಕರು ರೊಚ್ಚಿಗೆದ್ದು ಕಾನೂನು ಕೈಗೆತ್ತಿಕೊಳ್ಳುವ ಸಂದರ್ಭ ಬರಲು ಅವಕಾಶ ನೀಡದಂತೆ ಆತನನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು. ಇಲ್ಲವಾದಲ್ಲಿ ಇದರಿಂದಾಗುವ ದುಷ್ಪರಿಣಾಮಗಳಿಗೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಎಚ್ಚರಿಕೆ ನೀಡುತ್ತದೆ.

ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಅಗತ್ಯ ಅನುದಾನ ನೀಡಿ

ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಆಗ್ರಹ



ಮೈಸೂರು, ಮಾ.27(ಎಂಟಿವೈ)– ಹಿಂದುಳಿದ ವರ್ಗಗಳಲ್ಲಿ ಒಂದಾಗಿರುವ ಉಪ್ಪಾರ ಸಮುದಾಯ ಏಳಿಗೆಗೆ ನೆಪ ಮಾತ್ರಕ್ಕೆ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದ್ದು, ಕೂಡಲೇ ಅದಕ್ಕೆ ಅಗತ್ಯ ಅನುದಾನ ನೀಡುವ ಮೂಲಕ ಉಪ್ಪಾರ ಜನಾಂಗದ ಶ್ರೇಯೋಭಿವೃದ್ಧಿಗೆ ನೆರವಾಗುವಂತೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಮೈಸೂರು ಜಿಲ್ಲಾ ಉಪ್ಪಾರ ನೌಕರರು ಹಾಗೂ ವೃತ್ತಿಪರರ ಸಂಘವು ಭಾನುವಾರ ಏರ್ಪಡಿಸಿದ್ದ 26ನೇ ವಾರ್ಷಿಕ ಪ್ರತಿಭಾ ಪುರಸ್ಕಾರ, ನಿವೃತ್ತ, ಬಡ್ತಿ ಹೊಂದಿದ ನೌಕರರು, ಸಾಧಕರು ಹಾಗೂ ಸಮಾಜ ಸೇವಕರಿಗೆ ಸನ್ಮಾನ ಹಾಗೂ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನಾಂಗದ ಅಭಿವೃದ್ಧಿಗೆ ಕೇವಲ ನಿಗಮ ಮಂಡಳಿ ರಚಿಸಿದರೆ ಸಾಲದು. ಉಪ್ಪಾರ ಸಮುದಾಯವು ಈ ಹಿಂದೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿದ್ದಾಗ ಹೆಚ್ಚಿನ ಸೌಲಭ್ಯ ದೊರೆಯುತ್ತಿತ್ತು. ಉಪ್ಪಾರ ಅಭಿವೃದ್ಧಿ ನಿಗಮ ರಚನೆಯಾದ ಬಳಿಕ ಅನುದಾನ ಹಾಗೂ ಸೌಲಭ್ಯಗಳ ಕೊರತೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ತಕ್ಕಂತೆ ನಿಗಮಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ನಾನು ಯಾವ ಪಕ್ಷದ ಪರವೂ ಇಲ್ಲ, ವಿರುದ್ಧವೂ ಇಲ್ಲ. ಯಾವುದೇ ಪಕ್ಷದೊಂದಿಗಾದರೂ ಸಮುದಾಯದವರು ಗುರುತಿಸಿಕೊಳ್ಳಬಹುದು. ಚುನಾವಣೆಗಳಲ್ಲಿ ಸ್ಪರ್ಧಿಸುವ ಮೂಲಕ ರಾಜಕೀಯವಾಗಿ ಮುಂದೆ ಬರಬೇಕು ಎಂದು ಸಲಹೆ ನೀಡಿದರು.


ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಉಪ್ಪಾರ ಸಮುದಾಯವು ತೀರಾ ಹಿಂದುಳಿದಿದೆ. ಸಮುದಾಯದಲ್ಲಿ ಶಿಕ್ಷಿತರ ಪ್ರಮಾಣ ಕೇವಲ ಶೇ.45ರಷ್ಟಿದೆ. ಶಿಕ್ಷಣದಲ್ಲಿ ಹಿಂದುಳಿದಿರುವುದರಿಂದ ಎಲ್ಲಾ ಕ್ಷೇತ್ರದಲ್ಲೂ ಹಿಂದುಳಿದಿದೆ. ಇದನ್ನು ಮನಗಂಡು ಶಿಕ್ಷಣ ಪಡೆಯಲು ಎಲ್ಲರೂ ಮುಂದಾಗಬೇಕು. ದೇವರ ಹೆಸರಿನಲ್ಲಿ ದುಂದು ವೆಚ್ಚ ಮಾಡಿ ಮೌಢ್ಯಾಚರಣೆ ಮಾಡುವುದನ್ನು ನಿಲ್ಲಿಸಬೇಕು. ಜಾತ್ರೆ, ಪೂಜೆಗೆ ಮಾಡುವ ವೆಚ್ಚವನ್ನು ಮಕ್ಕಳ ಶಿಕ್ಷಣಕ್ಕೆ ವಿನಿಯೋಗಿಸಬೇಕು. ಬಾಲ್ಯವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿಗೆ ಕಡಿವಾಣ ಹಾಕುವಂತೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ 1,750ಕ್ಕೂ ಹೆಚ್ಚು ಗಿಡ ನೆಟ್ಟಿರುವ ವೆಂಕಟೇಶ್, ಜಯಲಕ್ಷ್ಮೀ ದಂಪತಿಯನ್ನು ಸನ್ಮಾನಿಸಲಾಯಿತು. ಅಲ್ಲದೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 350ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಮೈಸೂರು ಜಿಲ್ಲಾ ಉಪ್ಪಾರ ನೌಕರರ ಸಂಘದ ಮಾಜಿ ಅಧ್ಯಕ್ಷ ದಿವಂಗತ ಆರ್.ಸೋಮಶೇಖರ್ ಅವರ ಕುಟುಂಬದವರಿಗೆ ಭಗೀರಥ ಸಮಾಜ ಸೇವಾ ರತ್ನ ಪ್ರಶಸ್ತಿ, ಕೆ.ಆರ್.ಠಾಣೆಯ ಇನ್‌ಸ್ಪೆಕ್ಟರ್ ಎಂ.ಮಹದೇವಸ್ವಾಮಿ ಅವರಿಗೆ ಭಗೀರಥ ನಾಗರಿಕ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದಕ್ಕೂ ಮುನ್ನ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ್, ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಅಧ್ಯಕ್ಷ ಮಹದೇವಶೆಟ್ಟಿ, ಗೌರವಾಧ್ಯಕ್ಷ ಹನುಮಂತಶೆಟ್ಟಿ, ಕಾರ್ಯಾಧ್ಯಕ್ಷ ವಿ.ಎಸ್. ವಿಷಕಂಠಯ್ಯ, ಮಳವಳ್ಳಿಯ ಅಯ್ಯನ ಸರಗೂರು ಮಠದ ಮಹದೇವಸ್ವಾಮಿ, ಮುಖಂಡರಾದ ಲತಾ ಸಿದ್ಧಶೆಟ್ಟಿ, ಗಂಗಯ್ಯ, ಶಿವಕುಮಾರ್, ಸಿ.ಎ.ಮಹದೇವಶೆಟ್ಟಿ, ವಿಜಯಕುಮಾರ್, ಬಸವರಾಜಪ್ಪ ಇದ್ದರು.

ರಂಗಭೂಮಿ ಎಲ್ಲರನ್ನೂ ಬೆಸೆಯುವ ಮಾಧ್ಯಮ

ವಿಶ್ವರಂಗಭೂಮಿ ದಿನಾಚರಣೆಯಲ್ಲಿ ಬಸವಲಿಂಗಯ್ಯ ಅಭಿಮತ



ಮೈಸೂರು, ಮಾ.27(ಎಸ್‌ಬಿಡಿ)– ರಂಗಭೂಮಿ ಎಲ್ಲರನ್ನೂ ಬೆಸೆಯುವ ಮಾಧ್ಯಮ ಎಂದು ಬೆಂಗಳೂರು ರಾಷ್ಟ್ರೀಯ ನಾಟಕ ಶಾಲೆ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಅಭಿಮತ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ 'ವಿಶ್ವ ರಂಗಭೂಮಿ ದಿನಾಚರಣೆ'ಯಲ್ಲಿ ಮಾತನಾಡಿ, ಹಲವು ಮಾಧ್ಯಮಗಳು ಸುಳ್ಳು ಪ್ರಸಾರ ಮಾಡುತ್ತಿವೆ. ಸುದ್ದಿ ನಿರೂಪಕರು ಚರ್ಚೆ ಬದಲು ತೀರ್ಪು ಪ್ರಕಟಿಸುತ್ತಿದ್ದಾರೆ. ಮೊಬೈಲ್ ಜಗತ್ತನ್ನೇ ಹಾಳು ಮಾಡುತ್ತಿದೆ. ಆದರೆ ರಂಗಭೂಮಿ ಎಂದಿಗೂ ಸಮಾಜವನ್ನು ಒಡೆಯುವುದಿಲ್ಲ ಎಂದು ಹೇಳಿದರು.

ಮಹಾನದಿ, ಮಹಾಕಾವ್ಯದಂತೆ ಮಹಾರಂಗಭೂಮಿ ಪರಿಕಲ್ಪನೆಯೂ ಇದೆ. ಅಮೆರಿಕನ್ ರಂಗಭೂಮಿ ನಿರ್ದೇಶಕ ಪೀಟರ್ ಸೆಲ್ಲರ್ಸ್ 'ಮಹಾರಂಗಭೂಮಿ' ಪದ ಬಳಸಿದ್ದಾರೆ. ಹಲವು ಉಪನದಿಗಳು ಸೇರಿ ಮಹಾನದಿಯಾಗುವಂತೆ ರಂಗಭೂಮಿಯೂ ರೂಪುಗೊಂಡಿದೆ. ಯಾವ ದೇಶದವರಾದರೂ ರಂಗಕರ್ಮಿಗಳೆಲ್ಲಾ ಒಂದೇ. ಭಾರತೀಯ ಸಂಸ್ಕೃತಿಯ 'ವಸುದೈವ ಕುಟುಂಬಕಂ' ಪರಿಕಲ್ಪನೆಯನ್ನು ರಂಗಭೂಮಿಯಲ್ಲಿ ಕಾಣಬಹುದು. ಯಾವ ದೇಶದವರೇ ಆಗಲಿ, ಯಾವ ಪ್ರಭುತ್ವವೇ ಇರಲಿ ರಂಗಕರ್ಮಿಗಳು ಒಂದೇ ಕುಟುಂಬದವರು ಎಂದು ಅಭಿಪ್ರಾಯಿಸಿದರು.

ರಷ್ಯಾ, ಉಕ್ರೇನ್ ವಿರುದ್ಧ ಯುದ್ಧ ನಡೆಸುತ್ತಿದೆ. ಯುದ್ಧದಲ್ಲಿ ಯಾರೂ ಜಯಿಸುವುದಿಲ್ಲ, ಬರೀ ಸಾವು ಎಂಬ ಮಾತಿದೆ. ಹಾಗೆಯೇ ಉಕ್ರೇನ್‌ನ ಹೆಣ್ಣುಮಕ್ಕಳು ಅನಾಥರಾಗುತ್ತಿದ್ದಾರೆ. ಬಲಿಷ್ಠ ರಾಷ್ಟ್ರಗಳು ಸಣ್ಣ ದೇಶಗಳ ಮೇಲೆ ಆಕ್ರಮಣ ನಡೆಸುವುದು ಯಾವ ಧರ್ಮ?. ರಾಜಕಾರಣದಲ್ಲಿ ಧರ್ಮ ಉಳಿದಿದೆಯೇ?. ಯುದ್ಧ ಎನ್ನುವುದು ಜಾಗತಿಕ ಮೇವಾಟು, ದಂಧೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಎಲ್ಲರೂ ಸೇರಿ ದೇಶ ಹಾಗೂ ಸಂಸ್ಕೃತಿ ಉಳಿಸೋಣ ಎಂದರು.

ಎಲ್ಲರೂ ಒಂದಾಗೋಣ: ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ನಟಿ ಸರೋಜಾ ಹೆಗ್ಗಡೆ ಮಾತನಾಡಿ, ನಾನು ಕಲಾವಿದೆಯಾಗಿ ರೂಪುಗೊಳ್ಳಲು ನೆರವಾದ ರಂಗಾಯಣ ಕಟ್ಟಿದ ಬಿ.ವಿ.ಕಾರಂತರಿಂದ ಹಿಡಿದು ಜನಾರ್ಧನ್‌ವರೆಗಿನ ಎಲ್ಲಾ ನಿರ್ದೇಶಕರು, ಸಂಗೀತ ಸಂಯೋಜಕರು, ನಾಟಕ ನಿರ್ದೇಶಕರು, ಸಹ ಕಲಾವಿದರೆಲ್ಲರಿಗೂ ಅಭಿನಂದನೆ ತಿಳಿಸುತ್ತೇನೆ. ರಂಗಭೂಮಿ ಯಾರೊಬ್ಬರ ಸ್ವತ್ತಲ್ಲ, ಎಲ್ಲರಿಗೂ ಸಂಬಂಧಿಸಿದ್ದು. ಯಾರನ್ನೂ ದೂರವಾಗಿಸದೆ ಎಲ್ಲರೂ ಒಂದಾಗಿ ಕೆಲಸ ಮಾಡೋಣ ಎಂದು ಆಶಯ ವ್ಯಕ್ತಪಡಿಸಿದರು. ವಿಜಯಲಕ್ಷ್ಮಿ ಮಂಜುನಾಥ್ ಅವರು 'ವಿಶ್ವ ರಂಗಭೂಮಿ ಸಂದೇಶ' ವಾಚಿಸಿದರು. ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ವೇದಿಕೆ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ನಾಟಕ ಪ್ರದರ್ಶನ: ಸಭಾ ಕಾರ್ಯಕ್ರಮದ ಬಳಿಕ ಮೈಮ್ ರಮೇಶ್ ಮಾರ್ಗದರ್ಶನದಲ್ಲಿ ಜಿಪಿಐಇಆರ್ ರಂಗ ತಂಡದ ಕಲಾವಿದರು ಎಂ.ಪಿ.ಹರಿದತ್ತ ಅರಮನೆನಗರಿ ನಿರ್ದೇಶನದ 'ಕರುಳ ತೆಪ್ಪದ ಮೇಲೆ' ನಾಟಕ ಪ್ರದರ್ಶಿಸಿದರು.

ಸಮಾಜದ ಒಳಿತಿಗೆ ಸದಾ ತುಡಿಯುತ್ತಿದ್ದ ಪ್ರೊ.ಪಿ.ಜಯರಾಮಯ್ಯ

ನುಡಿ ನಮನ ಕಾರ್ಯಕ್ರಮದಲ್ಲಿ ಸ್ಮರಿಸಿದ ಪ್ರೊ.ಕೆ.ಎಸ್.ರಂಗಪ್ಪ



ಮೈಸೂರು, ಮಾ.27(ಆರ್‌ಕೆಬಿ)– ಭೂಗೋಳಶಾಸ್ತ್ರ ಪ್ರಾಧ್ಯಾಪಕರಾಗಿ 36 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ, ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ಶಿಷ್ಯ ವೃಂದವನ್ನು ಹೊಂದಿರುವ ನಿವೃತ್ತ ಪ್ರಾಧ್ಯಾಪಕ ಪ್ರೊ.ಪಿ.ಜಯರಾಮಯ್ಯ ಅವರು ವೃತ್ತಿಯಲ್ಲಿದ್ದಾಗ ಮತ್ತು ವಿಶ್ರಾಂತಿ ಜೀವನದಲ್ಲಿ ಇದ್ದಾಗಲೂ ಸಮಾಜಕ್ಕೆ ಒಳಿತು ಮಾಡಬೇಕು ಎನ್ನುವ ಹಂಬಲ ಹೊಂದಿದ್ದರು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸ್ಮರಿಸಿದರು.

ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಪ್ರೊ.ಪಿ.ಜಯರಾಮಯ್ಯ ಅಭಿಮಾನಿಗಳ ಮತ್ತು ಮೈಸೂರು ವಿವಿ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗ ಆಯೋಜಿಸಿದ್ದ ಪ್ರೊ.ಪಿ.ಜಯರಾಮಯ್ಯ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳ ಪಾಲಿಗೆ ನೆಚ್ಚಿನ ಗುರುಗಳಾಗಿದ್ದ ಪ್ರೊ.ಪಿ. ಜಯರಾಮಯ್ಯ ವೃತ್ತಿ ಜೀವನದಲ್ಲಿ ಹಾಗೂ ಸಾರ್ವಜನಿಕವಾಗಿ ಸೇವೆ ಸಲ್ಲಿಸಿ ಎಲ್ಲರ ವಿಶ್ವಾಸ ಗಳಿಸಿದ್ದರು. ಅನುಯಾಯಿಗಳು ಮತ್ತು ಜನರಿಗೆ ಒಳಿತನ್ನು ಬಯಸಿದ್ದ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳ ಶಾಸ್ತ್ರ ಸೆಮಿನಾರ್ ಹಾಲ್‌ಗೆ ಪ್ರೊ.ಪಿ. ಜಯರಾಮಯ್ಯ ಅವರ ಹೆಸರು ನಾಮಕರಣ ಮಾಡಬೇಕು ಎಂದು ಸಲಹೆ ನೀಡಿದರು.

ನಾನು ಕುಲಪತಿಯಾದ ಬಳಿಕ ಅನೇಕ ಬಾರಿ ನನ್ನನ್ನು ಭೇಟಿ ಮಾಡಿದಾಗಲೆಲ್ಲಾ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ಎನ್ನುವಂತೆ ಹೇಳುತ್ತಿದ್ದರೇ ಹೊರತು ತಮ್ಮ ವೈಯಕ್ತಿಕವಾಗಿ ಏನನ್ನೂ ಕೇಳುತ್ತಿರಲಿಲ್ಲ ಎಂದರು.

ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, ಪ್ರೊ.ಪಿ.ಜಯರಾಮಯ್ಯ ಅವರು ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆ ಇಟ್ಟುಕೊಂಡು ಕೆಲಸ ಮಾಡಿದ್ದರು. ಅಂದಿನ ಪ್ರಾಧ್ಯಾಪಕರಲ್ಲಿ ಇದ್ದ ಬದ್ಧತೆಯನ್ನು ನೋಡಿದರೆ ಇಂದಿನ ತಲೆಮಾರಿನ ಅಧ್ಯಾಪಕರಲ್ಲಿ ಬದ್ಧತೆ ಕಡಿಮೆ ಇದೆ. ಆದರೆ ಪ್ರಾಥಮಿಕ ಶಿಕ್ಷಣದಲ್ಲಿ ಶಿಷ್ಯರನ್ನು ಸಂಪಾದಿಸುವುದು ಸುಲಭ. ಆದರೆ ಸ್ನಾತಕೋತ್ತರ ವಿದ್ಯಾರ್ಥಿಗಳ ವಿಶ್ವಾಸ, ಮನಸ್ಸು ಗೆಲ್ಲುವುದು ಸುಲಭದ ಕೆಲಸವಲ್ಲ. ಅಂಥಾದ್ದರಲ್ಲೂ ಪ್ರೊ.ಪಿಜೆ ಅವರು ಎಲ್ಲರ ವಿಶ್ವಾಸ ಗಳಿಸಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದರು ಎಂದು ಸ್ಮರಿಸಿದರು.

ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಒಂದೇ ಊರಿನವರಾದ ನಾನು ಮತ್ತು ಜಯರಾಮಯ್ಯ ನಡುವೆ ಆರು ವರ್ಷಗಳ ವ್ಯತ್ಯಾಸವಿತ್ತು. ಶೈಕ್ಷಣಿಕವಾಗಿ ಸಲಹೆಗಳನ್ನು ಕೇಳಲು ನಮ್ಮ ತಾಯಿ ಅವರು ಜಯರಾಮಯ್ಯ ಅವರನ್ನು ವಿಚಾರಿಸುತ್ತಿದ್ದರು. ಚಿಕ್ಕವರಾಗಿದ್ದಾಗ ತುಂಬಾ ಕೋಪಿಷ್ಟ. ನಗರದ ದಿನಗಳಲ್ಲಿ ಯಾವ ರೀತಿಯಲ್ಲಿ ತಣ್ಣಗೆ ಮಾಡಿಕೊಂಡು ಮೃದುವಾದರೆಂಬುದು ತಿಳಿದಿಲ್ಲ ಎಂದರು.

ದಿನದ 24 ಗಂಟೆಯೂ ಸೇವೆಯನ್ನೇ ವೃತ್ತಿಯಾಗಿಸಿಕೊಂಡಿದ್ದ ಅವರು, ವೃತ್ತಿ ಮತ್ತು ವೈಯಕ್ತಿಕವಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಯಾರನ್ನೂ ದ್ವೇಷಿಸದ ಅವರನ್ನು ಪ್ರೀತಿಸುತ್ತಿದ್ದವರೇ ಹೆಚ್ಚು. ಸಾರ್ವಜನಿಕವಾಗಿ ಪ್ರಾಮಾಣಿಕತೆ, ಸತ್ಯ ಮತ್ತು ಬದ್ಧತೆ ಇರುವವರಿಗೆ ಸಾವು ಬಹು ಬೇಗನೆ ಬಂದು ಬಿಡುತ್ತದೆ ಎಂದು ಅವರು ಕಂಬನಿ ಮಿಡಿದರು.

ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ, ಪ್ರೊ.ಎಂ.ಕೆ.ಸೂರಪ್ಪ ಮಾತನಾಡಿದರು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಜ್ಯ ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ, ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಪಿ. ಜಯಶ್ರೀ, ಪ್ರಾಧ್ಯಾಪಕ ಪ್ರೊ.ಬಿ.ಚಂದ್ರಶೇಖರ್, ಎಂಎಲ್‌ಸಿ ಮರಿತಿಬ್ಬೇಗೌಡ, ಮಾಜಿ ಸದಸ್ಯ ಮಧು ಜಿ.ಮಾದೇಗೌಡ, ರೊ.ಅಯ್ಯಣ್ಣ, ಪ್ರೊ.ಚಿಕ್ಕಸಿದ್ದೇಗೌಡ, ದೇವರಾಜ್, ವೆಂಕಟೇಶ್, ಡಾ.ಪ್ರದೀಪ್ ಲೀಲಾರಾವ್, ವೆಂಕಟರಾಮು, ಹೇಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಪ್ರೊ.ಪಿ.ಜಯರಾಮಯ್ಯ ಅಭಿಮಾನಿಗಳ ಆಯೋಜಿಸಿದ್ದ ಪ್ರೊ.ಪಿ.ಜಯರಾಮಯ್ಯ ನುಡಿನಮನ ಕಾರ್ಯಕ್ರಮದಲ್ಲಿ ಗಣ್ಯರು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಭೂಮಿಯ ಒಳಗೆ ಲಾವಾ ಇದ್ರೆ ಭೂಮಿಯ ಮೇಲೆ ಏನಿದೆ!
ವಿದ್ಯಾರ್ಥಿ: ಒಪ್ಪೋ ಮತ್ತು ವಿವೋ ಇದೆ.

ಮೈಸೂರು ಮಿತ್ರ

ಸೋಮವಾರ, 28 ಮಾರ್ಚ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಒಳ್ಳೆಯದನ್ನು ಮಾಡುವುದು ಮತ್ತು ಒಳ್ಳೆಯವರಾಗಿರುವುದು, ಇದೇ ಧರ್ಮದ ಸಾರ.

–ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಲ್ಪರ ಸಂಗ ಅಭಿಮಾನ ಭಂಗ.

ನಿಮ್ಮ ಪತ್ರಗಳು

ರೈತರ ಮಕ್ಕಳು ಎಂದರೆ ಯಾಕಿಷ್ಟು ತಾತ್ಸಾರ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರೈತರ ಮಕ್ಕಳಿಗೆ ವಧುವನ್ನು ವಿವಾಹ ಮಾಡಿಕೊಡಲು ಅನೇಕ ಜನರು ಹಿಂಜರಿಯುತ್ತಿದ್ದಾರೆ. ವರನು ಸರ್ಕಾರಿ ಉದ್ಯೋಗದಲ್ಲಿ ಇರಲೇಬೇಕೆಂಬ ಹಟಮಾರಿತನ ಧೋರಣೆ ವಧುವಿನ ಪೋಷಕರ ಮನದಲ್ಲಿ ಆಳವಾಗಿ ಬೇರೂರಿರುವುದು ಇದಕ್ಕೆ ಕಾರಣವಾಗಿದೆ. ಆಧುನಿಕ ಪ್ರಪಂಚದಲ್ಲಿ ತಮ್ಮ ಮಗಳು ನಗರ ಪ್ರದೇಶಗಳಲ್ಲಿ ನೆಲೆಸಿ ಸುಖ, ನೆಮ್ಮದಿಯಾಗಿ ಜೀವನ ನಡೆಸಬೇಕು ಎಂಬುದು ಅವರ ಮಹದಾಸೆಯಾಗಿರುತ್ತದೆ. ರೈತರ ಮಕ್ಕಳೆಂದರೆ ಒಂದು ರೀತಿಯ ಅಸಡ್ಡೆ, ಕೀಳರಿಮೆ, ಮೂಗುಮುರಿಯುವ ಸ್ಥಿತಿ ನಿರ್ಮಾಣಗೊಂಡಿದೆ. ಎಷ್ಟೇ ಆಸ್ತಿವಂತ, ಮುಗ್ಧತೆ, ಬುದ್ಧಿವಂತ ಹಾಗೂ ಗುಣವಂತನಾದರೂ ವಧುವನ್ನು ವಿವಾಹ ಮಾಡಿಕೊಡಲು ಇಷ್ಟಪಡುವುದಿಲ್ಲ, ಆದರೆ ಸರ್ಕಾರಿ ಹುದ್ದೆಯಲ್ಲಿರುವ ವರನಿಗೆ ವಯಸ್ಸಿನ ಅಂತರ ಹೆಚ್ಚಾಗಿದ್ದರೂ, ಪರವಾಗಿಲ್ಲ ಹೆಚ್ಚಿನ ವರದಕ್ಷಿಣೆ, ಉಡುಗೊರೆ, ನಿವೇಶನ, ಇಷ್ಟೇ ಅಲ್ಲದೆ ಅವರು ಕೇಳಿದ ಕಲ್ಯಾಣ ಮಂಟಪದಲ್ಲಿ ಅದ್ಧೂರಿಯಾಗಿ ಆಡಂಬರದಿಂದ ಸಾಲ ಸೋಲ ಮಾಡಿ ಕನ್ಯಾದಾನ ಮಾಡಿಕೊಡುತ್ತಾರೆ, ಮುಂದೊಂದು ದಿನ ಕೆಲವು ಸರ್ಕಾರಿ ನೌಕರರು ಹೆಚ್ಚಿನ ವರದಕ್ಷಿಣೆಯನ್ನು ತರಲು ಚಿತ್ರಹಿಂಸೆ, ಕಿರುಕುಳ ನೀಡಿ ತನ್ನ ಪತ್ನಿಯನ್ನು ತವರುಮನೆಗೆ ಕಳಿಸುತ್ತಿರುವ ಅದೆಷ್ಟೋ ಘಟನೆಗಳು ತಮ್ಮ ಕಣ್ಣ ಮುಂದೆಯೇ ಇದ್ದರೂ, ಅನೇಕ ಘಟನೆಗಳು ನಡೆದರೂ ಅವರ ಅರಿವಿಗೆ ಬರುವುದೇ ಇಲ್ಲ, ಆದರೆ ಅನ್ನದಾತರ ಮಕ್ಕಳು ಕಷ್ಟಪಟ್ಟು ಸ್ವಾಭಿಮಾನದಿಂದ ದುಡಿದು, ಹೆಂಡತಿ ಮತ್ತು ಮಕ್ಕಳನ್ನು ಪ್ರೀತಿಯಿಂದ ಸಾಕಿ ಯಾವುದೇ ತೊಂದರೆ ಇಲ್ಲದೆ ನೋಡಿಕೊಳ್ಳುತ್ತಾರೆ. ಸರ್ಕಾರಿ ಹುದ್ದೆಯ ಕಾರಣದಿಂದ ಗ್ರಾಮೀಣ ಪ್ರದೇಶದಲ್ಲಿರುವ ಅನೇಕ ರೈತರ ಮಕ್ಕಳು ವಯಸ್ಸಿನ ಮಿತಿ ಮಿರುತ್ತಿದ್ದರೆ, ಅವಿವಾಹಿತರಾಗಿಯೇ ವಿವಾಹವೇ ಬೇಡವೆಂದು ಮನನೊಂದು ಹತಾಶೆ, ಜಿಜ್ಞಾಸೆಯಿಂದ ಅನೇಕ ಯುವಕರು ಚಿಂತಾಕ್ರಾಂತರಾಗಿದ್ದಾರೆ. ಇನ್ನಾದರೂ ಹೆಣ್ಣು ಮಕ್ಕಳು ಹಾಗೂ ಪೋಷಕರು ಮನಸ್ಸನ್ನು ಬದಲಾಯಿಸಿ ದೇಶದ ಹಸಿವನ್ನು ನೀಗಿಸಲು ಕಷ್ಟಪಟ್ಟು ದುಡಿಯುವ ನಮ್ಮ ಹೆಮ್ಮೆಯ ರೈತರ ಮಕ್ಕಳಿಗೆ ವಧುವನ್ನು ವಿವಾಹಮಾಡಿಕೊಟ್ಟು ಅವರ ಬಾಳನ್ನು ಬಂಗಾರವಾಗಿಸಬೇಕು ಎಂದು ಕೋರುತ್ತೇವೆ.

– ಪರಶಿವಮೂರ್ತಿ, ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಮೈಸೂರು ವಿವಿ ನೆಲಮಾರ್ಗದ ಬಗ್ಗೆ ಎಚ್ಚರಿಕೆ

ಮಾನ್ಯರೇ,

ನೂರು ವರ್ಷಗಳ ಇತಿಹಾಸವಿರುವ ಮೈಸೂರು ವಿಶ್ವವಿದ್ಯಾನಿಲಯವು ಪಾರಂಪರಿಕ ಹಾಗೂ ನವೀನತೆಯ ಕಟ್ಟಡಗಳಿಂದ ಕಂಗೊಳಿಸುತ್ತಿದೆ. ವಿವಿಯ ಸುತ್ತಲು ಗೇಟ್‌ಗಳು ಮತ್ತು ಪಾರದರ್ಶಕ ಕಾಂಪೌಂಡ್ ನಿರ್ಮಿಸಿ ವಿವಿಯೊಳಗೆ ಯಾವುದೇ ಅಕ್ರಮ ಅನೈತಿಕ ಚಟುವಟಿಕೆ ನಡೆಯದಂತೆ ನಿಗಾ ವಹಿಸಲಾಗಿದೆ; ಆದರೆ, ಲಲಿತಕಲಾ ಕಾಲೇಜು ಆವರಣದಲ್ಲಿನ ಬಲಭಾಗದ ಕಾಂಪೌಂಡ್‌ನಲ್ಲಿ ದೊಡ್ಡದಾದ ನೆಲಮಾರ್ಗವಿದ್ದು, ಇದರಿಂದ ಯಾರು ಬೇಕಾದರು ಎಷ್ಟೊತ್ತಿಗಾದರೂ ವಿವಿಯ ಒಳಗೆ ಅತಿಕ್ರಮ ಪ್ರವೇಶ ಮಾಡಬಹುದಾಗಿದೆ. ಆದ್ದರಿಂದ ಕೂಡಲೇ ಕುಲಪತಿಗಳು ಸಂಬಂಧಪಟ್ಟವರಿಗೆ ಸೂಚಿಸಿ ಆ ದಾರಿಯನ್ನು ಮುಚ್ಚಿಸಬೇಕಿದೆ.



– ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ಗೋ ರಕ್ಷಣೆ ಮಾಡೋಣ

ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳು ಹಾಗೂ ಬೀದಿ ಬೀದಿಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ, ತ್ಯಾಜ್ಯ ವಸ್ತುಗಳು ಮತ್ತು ಪ್ಲಾಸ್ಟಿಕ್‌ನಂತಹ ವಸ್ತುಗಳು ಬಿದ್ದಿರುತ್ತವೆ. ಬೇಸಿಗೆ ಕಾಲವಾದ್ದರಿಂದ ಹಸುಗಳಿಗೆ ಆಹಾರ ಪೂರೈಕೆ ಮಾಡುವುದು ಅಸಾಧ್ಯದ ಮಾತು. ಇದರಿಂದ ಮಾಲೀಕರು ಹಸುಗಳನ್ನು ರಸ್ತೆಗೆ ಬಿಟ್ಟಿರುತ್ತಾರೆ. ಹಸುಗಳು ರಸ್ತೆಯಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಮತ್ತು ಇನ್ನಿತರ ತ್ಯಾಜ್ಯಗಳನ್ನು ತಿಂದು ಅನಾರೋಗ್ಯಕ್ಕೆ ತುತ್ತಾಗಿ ಸಾವನ್ನಪ್ಪುತ್ತಿವೆ. ಗೋಮಾತೆಯ ಎದೆಯಿಂದ ಬರುವ ಸಂಜೀವಿನಿಯನ್ನು ಕುಡಿಯುವ ಮಾನವರು ಅಂತಹ ಗೋವನ್ನು ರಕ್ಷಿಸಬೇಕು. ಎಲ್ಲೆಂದರಲ್ಲಿ ಕಸ, ತ್ಯಾಜ್ಯ ಮತ್ತು ಪ್ಲಾಸ್ಟಿಕ್ ಸುರಿಯುವುದನ್ನು ನಿಲ್ಲಿಸಬೇಕು. ಇದು ನನ್ನ ಮನವಿ.



– ದರ್ಶನ್ ಎಸ್, ಮಹಾರಾಜ ಕಾಲೇಜು, ಮೈಸೂರು.

ಎಸಿಬಿ ದಾಳಿಯಲ್ಲಿ ರಾಜಕೀಯ ಹಸ್ತಕ್ಷೇಪ ಬೇಡ

ಮಾನ್ಯರೆ,

ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಇತ್ತೀಚೆಗೆ ಹಲವಾರು ಸರ್ಕಾರಿ ಅಧಿಕಾರಿಗಳ ಹಾಗೂ ಬ್ರೋಕರ್‌ಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ನಗದು, ಚಿನ್ನ ಬೆಳ್ಳಿ ಆಭರಣಗಳು ಸೇರಿದಂತೆ ಆಸ್ತಿ ಪಾಸ್ತಿಗಳನ್ನು ಅವುಗಳ ದಾಖಲೆ ಸಮೇತ ವಶಪಡಿಸಿಕೊಂಡಿರುವುದರ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿಂದೆಯೂ ಎಸಿಬಿ ಹಲವಾರು ದಾಳಿಗಳನ್ನು ನಡೆಸಿ ಅಕ್ರಮ ಆಸ್ತಿ–ಪಾಸ್ತಿಗಳನ್ನು ಪತ್ತೆ ಹಚ್ಚಿದೆ. ಇತ್ತೀಚಿನ ವರ್ಷಗಳಲ್ಲಿ ಎಸಿಬಿ ಸ್ವಲ್ಪಮಟ್ಟಿಗೆ ಚುರುಕುಗೊಂಡಿದೆ ಎಂದು ಹೇಳಬಹುದು. ಆದರೆ, ಎಸಿಬಿ ಹೂಡುವ ಪ್ರಕರಣಗಳಲ್ಲಿ ಶಿಕ್ಷೆಯಾಗುವುದು ಮಾತ್ರ ಅತ್ಯಂತ ಕಡಿಮೆ ಆರೋಪಿಗಳಿಗೆ. ಬಹುತೇಕ ಆರೋಪಿಗಳು ರಾಜಕೀಯ ಪ್ರಭಾವ ಬಳಸಿಕೊಂಡು, ಶಿಕ್ಷೆಯಿಂದ ಪಾರಾಗುವುದರ ಜೊತೆಗೆ, ಮತ್ತೇ ಆಯಕಟ್ಟಿನ ಸ್ಥಳಗಳಲ್ಲಿ ಬಂದು ಕುಳಿತುಕೊಳ್ಳುವುದು ಸಾಮಾನ್ಯವಾಗಿದೆ. ಈ ಹಿಂದೆ ರಾಜ್ಯದಲ್ಲಿ ಬಲಿಷ್ಠವಾಗಿದ್ದ ಲೋಕಾಯುಕ್ತ ಸಂಸ್ಥೆಗೆ ಪರ್ಯಾಯವಾಗಿ, ಭ್ರಷ್ಟಾಚಾರ ನಿಗ್ರಹ ದಳವನ್ನು ಅಸ್ತಿತ್ವಕ್ಕೆ ತರಲಾಯಿತು.

ಪ್ರಾರಂಭದ ಒಂದೆರಡು ವರ್ಷಗಳ ಕಾಲ ಗುಮ್ಮನೇ ಕುಳಿತಿದ್ದ ಎಸಿಬಿ ನಂತರದ ವರ್ಷಗಳಲ್ಲಿ ಚುರುಕುಗೊಂಡು ತನ್ನ ಕಾರ್ಯಾಚರಣೆಯಲ್ಲಿ ವೇಗ ಪಡೆದುಕೊಂಡು ಹಲವಾರು ಭ್ರಷ್ಟ ಅಧಿಕಾರಿಗಳ ಮತ್ತು ನೌಕರರ ಕಚೇರಿ ಮತ್ತು ಮನೆಗಳ ಮೇಲೆ ದಾಳಿ ನಡೆಸಿ, ಭ್ರಷ್ಟಾಚಾರದ ಕರ್ಮಕಾಂಡವನ್ನು ಬಯಲಿಗೆಳೆಯಿತು. ಕೆಲವು ಅಧಿಕಾರಿಗಳ ಮನೆಯಲ್ಲಿ ವಶಪಡಿಸಿಕೊಂಡಿರುವ ನಗದು ಮತ್ತು ಕೆಜಿಗಟ್ಟಲೆ ಚಿನ್ನಾಭರಣಗಳನ್ನು ನೋಡಿದರೆ ಒಂದು ಕ್ಷಣ ಹೃದಯದ ಬಡಿತವೇ ನಿಂತುಹೋದ ಹಾಗಾಗುತ್ತದೆ. ಎಸಿಬಿ ದಾಖಲಿಸುವ ಇಂತಹ ಪ್ರಕರಣಗಳಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಹಸ್ತಕ್ಷೇಪ ಇರಬಾರದು. ಪ್ರಕರಣ ನ್ಯಾಯಾಲಯದಿಂದ ಹೊರ ಬರುವವರೆಗೆ, ಇಂತಹ ಭ್ರಷ್ಟ ಅಧಿಕಾರಿಗಳನ್ನು ಪುನರ್ನೇಮಕ ಮಾಡಿಕೊಳ್ಳಬಾರದು. ಭ್ರಷ್ಟ ಅಧಿಕಾರಿಗಳನ್ನು ಸರ್ಕಾರವೇ ರಕ್ಷಿಸಿದರೆ ಎಸಿಬಿಯನ್ನು ಲೋಕಾಯುಕ್ತದ ರೀತಿಯಲ್ಲೇ ಮುಚ್ಚುವುದು ಒಳ್ಳೆಯದು.

– ಡಾ. ಕೆ.ವಿ. ವಾಸು, ವಿವೇಕಾನಂದ ನಗರ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಪ್ರೀತಿ... ಮನ ಬೆಳಗುವ ದೀಪ


ಮನುಷ್ಯ ಮೂಲಭೂತವಾಗಿ ಭಾವಜೀವಿ. ಅಷ್ಟೇ ಏಕೆ ಪ್ರಾಣಿ ಪಕ್ಷಿಗಳ ಜೀವಕೋಶದೊಳಗೆ ಭಾವಕೋಶವೂ ಇರುತ್ತದೆ. ಮನುಷ್ಯ ತನ್ನ ಭಾವನೆಗಳನ್ನು ಬಹುಬಗೆಯಲ್ಲಿ ವ್ಯಕ್ತಪಡಿಸುವಂತೆಯೇ ಪ್ರಾಣಿಪಕ್ಷಿಗಳು ಸಹ ತಮ್ಮ ಕೂಗಿನಿಂದ, ನೃತ್ಯದಿಂದ, ಕೃತ್ಯದಿಂದ ತಮ್ಮ ಭಾವನೆಗಳನ್ನು ತೀವ್ರವಾಗಿ ವ್ಯಕ್ತಪಡಿಸುತ್ತವೆ. ಆದರೆ ಮನುಷ್ಯನಂತೆ ಪ್ರೀತಿಯಿಂದ ಸುಕೃತಿಯನ್ನೂ, ದ್ವೇಷದಿಂದ ವಿಕೃತಿಯನ್ನು ಮೆರೆಯಲು ಪ್ರಾಣಿಪಕ್ಷಿಗಳಿಗೆ ಬರುವುದಿಲ್ಲ ಎನ್ನಬಹುದು. ಮನುಷ್ಯನಲ್ಲಿ ಅತಿರೇಕ ಎನ್ನುವಷ್ಟು ಪ್ರೀತಿ ಸೃಜಿಸುತ್ತದೆ, ಪ್ರೀತಿಯ ಪರಾಕಾಷ್ಠೆಯನ್ನು ಮುಟ್ಟಿ ಸಹೃದಯ ಮಾನವ ಎನಿಸಿಕೊಳ್ಳುತ್ತಾನೆ. ಅದೇ ರೀತಿ ಅತಿಯಾದ ದ್ವೇಷವೂ ಸಹ ಮನುಷ್ಯನಲ್ಲಿ ಹುಟ್ಟಿ ಹೆಮ್ಮರವಾಗಿ ಬೆಳೆದು, ವಿಕೃತಿ ಮೆರೆದು ದಾನವ ಎನಿಸಿಕೊಳ್ಳುತ್ತಾನೆ. ಪ್ರೀತಿ ಹಾಗೂ ದ್ವೇಷ ಇವೆರಡು ಮನುಷ್ಯನಲ್ಲಿ ಹುಟ್ಟುವಂತೆ ಅವುಗಳಿಗೆ ಅಂತ್ಯವೂ ಇರುತ್ತದೆ. 'ಪುನರಪಿ ಜನನಂ, ಪುನರಪಿ ಮರಣಂ' ಎಂಬ ಮಾತಿನಂತೆ ಮನುಷ್ಯ ಜನ್ಮತಾಳಿ ಸಾಯುವವರೆವಿಗೂ ಪ್ರೀತಿ–ದ್ವೇಷಗಳು ಹುಟ್ಟುತ್ತಾ, ಸಾಯುತ್ತಾ ಸಾಗುತ್ತವೆ.

ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮೋಹ, ಲೋಭ, ಮದ ಹಾಗೂ ಮತ್ಸರ ಇವುಗಳು ಮನುಷ್ಯನ ಬದುಕಿನಲ್ಲಿ ಸ್ವಾಭಾವಿಕವಾಗಿ ಇರುತ್ತವೆ. ಯಾವುದಕ್ಕೆ ಹೆಚ್ಚು ಆದ್ಯತೆ ಕೊಡುತ್ತಾರೆಯೋ ಅದು ವೃದ್ಧಿಸುತ್ತದೆ. ಮನುಷ್ಯ ನಲುಗುವುದು ಅರಿಷಡ್ವರ್ಗಗಳು ಅತಿರೇಕವನ್ನು ಮುಟ್ಟಿದಾಗ ಎನ್ನಬಹುದು. ಎಲ್ಲವೂ ಇತಿಮಿತಿಯಲ್ಲಿದ್ದರೆ ಮನುಷ್ಯನ ಬದುಕು ಸಹಜವೂ, ಸುಂದರವೂ ಆಗಿರುತ್ತವೆ. ಮರಗಳಲ್ಲಿ ಪ್ರತಿ ವರ್ಷವೂ ಎಲೆಗಳು ಚಿಗುರಿ, ಬೆಳೆದು ನಂತರ ಒಣಗಿ ತರಗೆಲೆಗಳಾಗುವಂತೆ ಪ್ರೀತಿ–ದ್ವೇಷಗಳೂ ಸಹ ಕಾಲಕಾಲಕ್ಕೆ ಚಿಗುರಿ ನಂತರ ಒಣಗಿ ತರಗೆಲೆಗಳಾವುದುಂಟು. ಪ್ರೀತಿ ಅಮರ ಎನ್ನುವುದು ಉತ್ಪ್ರೇಕ್ಷೆಯ ಮಾತಾಗುತ್ತದೆ. ಅದೇ ರೀತಿ ದ್ವೇಷವೂ ಸಾರ್ವಕಾಲಿಕವಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಹುಟ್ಟಿದ ಎಲ್ಲದಕ್ಕೂ ಒಂದು ಅಂತ್ಯ ಎಂಬುದು ಇರುವಂತೆ ಪ್ರೀತಿ ಹಾಗೂ ದ್ವೇಷಕ್ಕೂ ಒಂದು ಅಂತ್ಯ ಎಂಬುದು ಇದ್ದೇ ಇರುತ್ತದೆ.

ಪ್ರೀತಿ ದ್ವೇಷಗಳು ಗರಿಕೆ ಹುಲ್ಲಿನ ಹಾಗೆ ಇರುತ್ತವೆ. ಬೇಸಿಗೆಯಲ್ಲಿ ಒಣಗಿ ಗರಿಕೆ ನಶಿಸಿ ಹೋಯಿತೇನೋ ಎಂದು ಭಾವಿಸುವಷ್ಟರಲ್ಲಿ ಒಂದೆರಡು ದಿನ ಮಳೆಯಾದರೆ ಹಸಿರು ಚಿಗುರಿ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸುತ್ತದೆ. ಭೂಮಿ ಮೇಲೆ ಕಾಣುವ ಗರಿಕೆ ಹಾಳಾದರೂ ಒಳಗಿನ ಬೇರು ತನ್ನ ಜೀವಂತಿಕೆಯನ್ನು ಕಾಪಾಡಿಕೊಂಡಿರುತ್ತದೆ. ಸಕಾಲ ಬಂದಾಗ ತನ್ನ ಇರುವಿಕೆಯನ್ನು ಸಾಬೀತುಪಡಿಸುತ್ತದೆ. ಗರಿಕೆ ಹುಲ್ಲಿನ ಬೇರು ಭೂಮಿಯಲ್ಲಿ ಹುದುಗಿರುವಂತೆ ಮನುಷ್ಯನ ಒಳ ಮನಸ್ಸಿನಲ್ಲಿ ಪ್ರೀತಿ–ದ್ವೇಷಗಳು ಸಹ ಹುದುಗಿರುತ್ತದೆ. ಪೂರಕ ಸಮಯ ಬಂದಾಗ ತನ್ನ ಇರುವಿಕೆಯನ್ನು ಪ್ರಕಟಗೊಳಿಸುತ್ತವೆ.

ಮನುಷ್ಯ ಮೂಲಭೂತವಾಗಿ ಸ್ವಾರ್ಥ ಸ್ವಭಾವವನ್ನು ಹೊಂದಿರುತ್ತಾನೆ. ತನ್ನ ಅಗತ್ಯ ಹಾಗೂ ನಿರೀಕ್ಷೆಗೆ ಅನುಗುಣವಾಗಿ ಇತರರು ನಡೆದುಕೊಂಡರೆ ಅವರನ್ನು ನಿರೀಕ್ಷೆಗೂ ಮೀರಿ ಪ್ರೀತಿಯಿಂದ ಕಾಣುತ್ತಾನೆ. ತನ್ನ ನಿರೀಕ್ಷೆಗೆ ವಿರುದ್ಧವಾಗಿ ನಡೆದುಕೊಂಡರೆ ಅತಿಯಾಗಿ ಪ್ರೀತಿಸಿದವರ ಮೇಲೆಯೇ ಅವನಲ್ಲಿ ದ್ವೇಷದ ಕಿಚ್ಚು ಪುಟಿದೇಳುತ್ತದೆ. ಪ್ರೀತಿಯು ತನಗೂ ಒಳಿತು ಮಾಡಿ, ಅನ್ಯರಿಗೂ ಒಳಿತನ್ನು ಬಯಸುತ್ತದೆ. ಅದೇ ರೀತಿ ದ್ವೇಷ ಹುಟ್ಟಿಕೊಂಡರೆ ಅದು ತನಗೂ ಕೆಡಕನ್ನು ಮಾಡಿಕೊಂಡು, ಅನ್ಯರಿಗೂ ಕೆಡಕು ಉಂಟುಮಾಡುತ್ತದೆ. ಪ್ರೀತಿಯ ಪರಾಕಾಷ್ಠೆಯಿಂದ ಹುಟ್ಟಿದ ಆಸೆ ತಣಿಯದೇ ಹೋದರೆ ಪ್ರೀತಿಯು ಗತಿಸಿ ಕ್ಷಣಮಾತ್ರದಲ್ಲಿ ದ್ವೇಷ ಜನ್ಮ ತಾಳುತ್ತದೆ. ಪ್ರೀತಿಯ ಪರಾಕಾಷ್ಠೆ ತ್ಯಾಗವನ್ನು ಮೈಗೂಡಿಸಿಕೊಳ್ಳುವ ಬದಲು ದ್ವೇಷದ ಕೆನ್ನಾಲಗೆಯನ್ನು ಚಾಚುತ್ತದೆ. ತಾನು ಅತಿಯಾಗಿ ಪ್ರೀತಿಸುತ್ತಿದ್ದ ವ್ಯಕ್ತಿಯಿಂದ ನಿರೀಕ್ಷಿತ ಪ್ರತಿಪ್ರೀತಿ ದೊರಕದೇ ಇದ್ದಾಗ ಬದ್ಧ ಪ್ರೇಮಿ ಎನಿಸಿಕೊಂಡವರೂ ಬದ್ಧವೈರಿಗಳಾಗಿ ಕಾಣಲು ಪ್ರಾರಂಭಿಸುತ್ತಾರೆ. ಅದರಿಂದ ಮನುಷ್ಯನಲ್ಲಿ ಕೇಡಿನ ಸ್ವಭಾವ ಮೇಳೈಸುತ್ತದೆ. ಆ ಕ್ಷಣಕ್ಕೆ ಅವನು ಏನು ಮಾಡುತ್ತಿರುವೆ ಎಂಬ ಅರಿವನ್ನು ಹೊಂದದೆ ಅನಾಹುತವನ್ನು ಸೃಷ್ಟಿಸುತ್ತಾನೆ. ಅದರ ಪರಿಣಾಮ ಭೀಕರವಾಗಿರುತ್ತದೆ. ಇದಕ್ಕೆ ಅನೇಕ ಉದಾಹರಣೆಗಳಿವೆ.

ಜನ್ಮ ನೀಡಿದ ಹೆತ್ತವರನ್ನೇ ನಿರ್ದಾಕ್ಷಿಣ್ಯವಾಗಿ ಹತ ಮಾಡಿಬಿಡುವ, ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿದ ಪ್ರೇಮಿಗೆ ಆಸಿಡ್ ದಾಳಿ ಮಾಡುವ, ತನ್ನ ಒಡಹುಟ್ಟಿದವರ ಒಡಲನ್ನೇ ಬಗೆದುಹಾಕುವ, ತನ್ನ ಜೊತೆ ಹತ್ತಾರು ವರ್ಷ ಸಂಸಾರ ನಡೆಸಿ ತನ್ನ ನಿರೀಕ್ಷೆಯನ್ನು ಪೂರೈಸದ ಸಂಗಾತಿಯ ಕತ್ತು ಕುಯ್ದು ಹಾಕುವ ಕೆಲಸವನ್ನು ಮನುಷ್ಯ ಮಾಡಿಬಿಡುತ್ತಾನೆ.



> ಮನುಷ್ಯ ಮೂಲಭೂತವಾಗಿ ಸ್ವಾರ್ಥ ಸ್ವಭಾವವನ್ನು ಹೊಂದಿರುತ್ತಾನೆ. ತನ್ನ ಅಗತ್ಯ, ಸ್ವಾರ್ಥ ಹಾಗೂ ನಿರೀಕ್ಷೆಗೆ ಅನುಗುಣವಾಗಿ ಇತರರು ನಡೆದುಕೊಂಡರೆ ಅವರನ್ನು ನಿರೀಕ್ಷೆಗೂ ಮೀರಿ ಪ್ರೀತಿಯಿಂದ ಕಾಣುತ್ತಾನೆ. ತನ್ನ ನಿರೀಕ್ಷೆಗೆ ವಿರುದ್ಧವಾಗಿ ನಡೆದುಕೊಂಡರೆ ಅತಿಯಾಗಿ ಪ್ರೀತಿಸಿದವರ ಮೇಲೆಯೇ ಅವನಲ್ಲಿ ದ್ವೇಷದ ಕಿಚ್ಚು ಪುಟಿದೇಳುತ್ತದೆ. ಪ್ರೀತಿಯು ತನಗೂ ಒಳಿತು ಮಾಡಿ, ಅನ್ಯರಿಗೂ ಒಳಿತನ್ನು ಬಯಸುತ್ತದೆ. ಅದೇ ರೀತಿ ದ್ವೇಷ ಹುಟ್ಟಿಕೊಂಡರೆ ಅದು ತನಗೂ ಕೆಡಕನ್ನು ಮಾಡಿಕೊಂಡು, ಅನ್ಯರಿಗೂ ಕೆಡಕು ಉಂಟುಮಾಡುತ್ತದೆ. ಪ್ರೀತಿಯ ಪರಾಕಾಷ್ಠೆಯಿಂದ ಹುಟ್ಟಿದ ಆಸೆ ತಣಿಯದೇ ಹೋದರೆ ಪ್ರೀತಿಯು ಗತಿಸಿ ಕ್ಷಣಮಾತ್ರದಲ್ಲಿ ದ್ವೇಷ ಜನ್ಮ ತಾಳುತ್ತದೆ. ಪ್ರೀತಿಯ ಪರಾಕಾಷ್ಠೆ ತ್ಯಾಗವನ್ನು ಮೈಗೂಡಿಸಿಕೊಳ್ಳುವ ಬದಲು ದ್ವೇಷದ ಕೆನ್ನಾಲಗೆಯನ್ನು ಚಾಚುತ್ತದೆ. ತಾನು ಅತಿಯಾಗಿ ಪ್ರೀತಿಸುತ್ತಿದ್ದ ವ್ಯಕ್ತಿಯಿಂದ ನಿರೀಕ್ಷಿತ ಪ್ರತಿಪ್ರೀತಿ ದೊರಕದೇ ಇದ್ದಾಗ ಬದ್ಧಪ್ರೇಮಿ ಎನಿಸಿಕೊಂಡವರು ಬದ್ಧ ವೈರಿಗಳಾಗಿ ಕಾಣಲು ಪ್ರಾರಂಭಿಸುತ್ತಾನೆ. ಅದರಿಂದ ಮನುಷ್ಯನಲ್ಲಿ ಕೇಡಿನ ಸ್ವಭಾವ ಮೇಳೈಸುತ್ತದೆ. ಆ ಕ್ಷಣಕ್ಕೆ ಅವನು ಏನು ಮಾಡುತ್ತಿರುವೆ ಎಂಬ ಅರಿವನ್ನು ಹೊಂದದೆ ಅನಾಹುತವನ್ನು ಸೃಷ್ಟಿಸುತ್ತಾನೆ. ಅದರ ಪರಿಣಾಮ ಭೀಕರವಾಗಿರುತ್ತದೆ.

ಪ್ರೀತಿಗಿಂತ ದ್ವೇಷಕ್ಕೆ ಆಯುಷ್ಯ ಜಾಸ್ತಿ, ಅದಕ್ಕೆ ಪೂರಕವಾದ ಅನೇಕ ಗೀತೆಗಳು ರಚಿತಗೊಂಡಿವೆ. 'ಹಾವಿನ ದ್ವೇಷ ಹನ್ನೆರಡು ವರುಷ, ನನ್ನ ರೋಷ ನೂರು ವರುಷ' ಎಂಬ ಗೀತೆಯ ಸಾರದಂತೆ ತಾನು ವಿಷಕಾರಿ ಹಾವಿಗಿಂತಲೂ ಅಪಾಯಕಾರಿ ಎಂಬುದನ್ನು ಮನುಷ್ಯ ತನ್ನ ದುಷ್ಕೃತ್ಯಗಳಿಂದ ಸಾಬೀತುಪಡಿಸುತ್ತಲೇ ಇದ್ದಾನೆ.

ಇಂದು ಜಾಗತಿಕ ಮಟ್ಟದಲ್ಲಿ ದೇಶ ದೇಶಗಳ ನಡುವೆ ಪ್ರೀತಿ ಮೂಡಲು ಅನೇಕ ಸಕಾರಣಗಳಿದ್ದರೂ, ಒಂದಕ್ಕೊಂದು ಅವಲಂಬಿತ ರಾಷ್ಟ್ರವಾಗಿದ್ದರೂ ಸಹ ಪ್ರತಿಷ್ಠೆಗೆ ಬಿದ್ದು ದ್ವೇಷದ ಪರಾಕಾಷ್ಠೆಯಿಂದ ಯುದ್ಧವನ್ನು ಸಾರಿ ಹತ್ತಾರು ದಿನಗಳಿಂದ ಸಾವಿರಾರು ಜೀವಗಳ ಮಾರಣ ಹೋಮ ನಡೆಸಲಾಗುತ್ತಿದೆ. ಪ್ರೀತಿಯಿಂದ ಸುಲಭವಾಗಿ ಗೆಲ್ಲಬಹುದಾದುದ್ದನ್ನು ದ್ವೇಷದಿಂದ ಸಾಧಿಸಲು ಹೊರಟಿರುವುದು ಇಂದಿನ ನಾಗರಿಕ ಪ್ರಪಂಚ ತಲೆತಗ್ಗಿಸುವಂತಿದೆ.

ಮನುಷ್ಯನಿಗೆ ಪ್ರತಿಷ್ಠೆ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ತನ್ನ ಪ್ರತಿಷ್ಠೆಗೆ ಧಕ್ಕೆ ಬಂದರೆ ಅದನ್ನು ಸುಲಭವಾಗಿ ತೆಗೆದುಕೊಳ್ಳದೆ, ತನ್ನ ಬಗ್ಗೆ ಅತಿಯಾದ ದುರಭಿಮಾನ ಹೊಂದಿ ಏನು ಬೇಕಾದರೂ ಕೆಡಕು ಮಾಡಲು ಮುಂದಾಗುತ್ತಾನೆ. ಒಳಿತು ಮಾಡಿದವರಿಗೂ ಕೆಡಕು ಮಾಡಲು ಸಹ ಮನುಷ್ಯ ಹಿಂಜರಿಯುವುದಿಲ್ಲ. ಕ್ಷುಲ್ಲಕ ಕಾರಣಗಳಿಗೆ ತನಗೆ ಆದ ಅಪಮಾನವನ್ನು ಸಹಿಸದೆ, ಪ್ರೀತಿಗೆ ತಿಲಾಂಜಲಿ ಹೇಳಿ ಜಿದ್ದಾಜಿದ್ದಿಯಿಂದ ದ್ವೇಷದ ಮೂಲಕವೇ ಸೇಡು ತೀರಿಸಿಕೊಳ್ಳಲು ನಿರ್ಧರಿಸಿ ತನ್ನ ವಿಕೃತ ಸ್ವಭಾವವನ್ನು ಅನಾವರಣಗೊಳಿಸಿಕೊಳ್ಳುತ್ತಾನೆ.

ಮನುಷ್ಯನ ಬದುಕಿನಲ್ಲಿ ತನ್ನ ಸಂಗಾತಿಯೊಂದಿಗೆ, ಒಡಹುಟ್ಟಿದವರೊಂದಿಗೆ ಪ್ರೀತಿ ಹಾಗೂ ದ್ವೇಷ ಹುಟ್ಟುತ್ತಾ, ಸಾಯುತ್ತಾ ಇರುತ್ತದೆ. ಸಹಕಾರ, ಸೋಲುವಿಕೆ, ನಿಸ್ವಾರ್ಥ, ಅನ್ಯರ ಅಂಕುಡೊಂಕುಗಳನ್ನು ಒಪ್ಪಿಕೊಳ್ಳುವ ಮನೋಭಾವ, ಪರಸ್ಪರ ಗೌರವಿಸಿಕೊಳ್ಳುವುದರಿಂದ ಮಾತ್ರ ಪ್ರೀತಿ ಬಹುಕಾಲ ಜೀವಿಸಲು ಸಾಧ್ಯ. ಕೆಲವರು ತ್ಯಾಗದಿಂದ ಪ್ರೀತಿಯನ್ನು ನವೀಕರಣ ಮಾಡಿಕೊಂಡು ಅದಕ್ಕೆ ದೀರ್ಘಾಯುಷ್ಯವನ್ನು ನೀಡಿದರೆ, ಕೆಲವರು ಸ್ವಾರ್ಥದಿಂದ ಸ್ವಲ್ಪವೂ ರಾಜಿಯಾಗದೆ ಪ್ರೀತಿಗೆ ಕೊಳ್ಳಿ ಇಟ್ಟು ಕೊಲೆ ಮಾಡಿ ದ್ವೇಷಕ್ಕೆ ಜನ್ಮ ನೀಡಿಬಿಡುತ್ತಾರೆ. ಜನ್ಮ ನೀಡಿದವರಿಗೂ ಆಜನ್ಮ ದ್ವೇಷ ಸಾಧಿಸುವ ಅನೇಕ ವಿಕೃತ ಮನಸ್ಸಿನವರು ಇದ್ದಾರೆ. ಅಷ್ಟೇ ಏಕೆ ತಾವು ಜನ್ಮ ನೀಡಿದ ಮಕ್ಕಳ ಮೇಲೆ ದ್ವೇಷ ಸಾಧಿಸುವ ಹೆತ್ತವರೂ ಸಹ ಇದ್ದಾರೆ. ಅಪ್ಪಅಮ್ಮನ ಆಯುಷ್ಯ ವೃದ್ಧಿಸಲಿ ಎಂದು ಹೋಮಹವನಗಳನ್ನು ಮಾಡಿಸುವ ಮಕ್ಕಳು ಒಂದು ಕಡೆ ಇದ್ದರೆ, ಅವರ ಅಕಾಲಿಕ ಮರಣವನ್ನು ಎದುರು ನೋಡುವ ದುರುಳ ಮಕ್ಕಳೂ ಸಹ ಇದ್ದಾರೆ. ಎಲ್ಲವೂ ಸ್ವಾರ್ಥ ಪ್ರಪಂಚದಲ್ಲಿ ಸಾಧ್ಯ ಎಂಬುದನ್ನು ನಿರೂಪಿಸುವ ಅನೇಕ ಕೃತ್ಯಗಳು ವರದಿಯಾಗುವುದನ್ನು ಕಾಣಬಹುದು.

ಜೇಡ ಪ್ರಭೇದವೊಂದು ತಾನು ಸಂಗಾತಿಯೊಂದಿಗೆ ಸಮಾಗಮ ನಡೆಸಿದ ನಂತರ ಅದನ್ನೇ ಭಕ್ಷಿಸುತ್ತದೆ ಎಂದು ಹೇಳಲಾಗುತ್ತದೆ. ತನಗೆ ಸುಖ ಸಂತೋಷ ನೀಡಿದವರಿಗೆ ಸುಖ ಸಂತೋಷ ಬಯಸದೆ ಕೆಟ್ಟದ್ದನ್ನು ಬಯಸುವ ಮಾನಸಿಕ ಸ್ಥಿತಿ ಅನೇಕರಿಗೆ ಇದೆ. ಅನ್ಯರು ಸಂತೋಷದಿಂದ ಬದುಕುವುದನ್ನು ಸಹಿಸದೆ ಅವರಿಗೆ ಅನ್ಯಾಯ ಎಸಗುವ ವಿಘ್ನಸಂತೋಷಿಗಳು ಸಹ ಇದ್ದಾರೆ. ಮನುಷ್ಯ ಸಹಜವಾಗಿ ಬದುಕುವ ಮನೋಭಾವ ರೂಢಿಸಿಕೊಳ್ಳಲು ಶಿಕ್ಷಣ, ಸಂಸ್ಕಾರ ಎಂಬ ಅಭ್ಯಾಸ ಮಾಡುತ್ತಾನೆ. ಆದರೆ ತನ್ನ ದುರಾಸೆ ಈಡೇರದೇ ಇದ್ದಾಗ ತನಗೆ ಸದ್ಗತಿ ನೀಡಿದವರಿಗೆ ದುರ್ಗತಿ ತೋರಿಸುವ ಕ್ಷುದ್ರ ಬುದ್ಧಿಯನ್ನೂ ಹೊಂದಿರುತ್ತಾನೆ.


ಮನುಷ್ಯ ದ್ವೇಷವನ್ನು ವೃದ್ಧಿಸಿಕೊಳ್ಳುವಷ್ಟು ಸುಲಭವಾಗಿ ಪ್ರೀತಿಯನ್ನು ವೃದ್ಧಿಸಿಕೊಳ್ಳಲು ಬಯಸುವುದಿಲ್ಲ. ದ್ವೇಷ ಅನ್ಯರ ಮಡಿಲನ್ನು ಸುಡುವಂತೆ ತನ್ನ ಒಡಲನ್ನು ಸುಡುತ್ತದೆ ಎಂಬುದು ತಿಳಿದಿದ್ದರೂ ದ್ವೇಷ ಸಾಧನೆಗೆ ಹಾತೊರೆಯುವುದು ಮಾನವನಲ್ಲಿ ದಾನವ ಗುಣ ಜಾಗೃತವಾಗಿರುತ್ತದೆ ಎಂಬುದನ್ನು ನಿರೂಪಿಸುತ್ತದೆ. ದ್ವೇಷಕ್ಕೆ ಅಂತ್ಯ ಹಾಡಿ ಪ್ರೀತಿಗೆ ನಾಂದಿ ಹಾಡುವ ಅನೇಕ ಸಂದರ್ಭಗಳು ಒದಗಿ ಬಂದರೂ ಅದಕ್ಕೆ ಆಸ್ಪದ ಕೊಡದೆ ದ್ವೇಷದ ಕಿಚ್ಚಿಗೆ ತುಪ್ಪ ಸುರಿದುಕೊಳ್ಳುತ್ತಾ ಧಗಧಗನೇ ಉರಿಯುವಂತೆ ಮಾಡುವುದನ್ನು ನೋಡಬಹುದು. ಪ್ರೀತಿಗೆ ಒಂದು ನೀತಿ ಎಂಬುದಿರುತ್ತದೆ. ಆದರೆ ದ್ವೇಷಕ್ಕೆ ಅನೀತಿಯೇ ಅಸ್ತ್ರ ಪ್ರೀತಿಗೆ ಒಳಪಟ್ಟು ಸಮಾಧಾನ ಹೊಂದುವ ಬದಲು ದ್ವೇಷದ ಅಸಮಾಧಾನದ ಹೊಗೆಯಲ್ಲಿ ಉಸಿರಾಡುತ್ತಾ ತನ್ನ ಸ್ವಸ್ಥ ಮನಸ್ಸನ್ನು ಹಾಳು ಮಾಡಿಕೊಳ್ಳುವ ಜಾಯಮಾನ ಅನೇಕರಿಗಿದೆ.

ಕತ್ತಲೆಯಿಂದ ಕತ್ತಲೆ ಹೊಡೆದೋಡಿಸಲು ಸಾಧ್ಯವಿಲ್ಲ, ಬೆಳಕಿನಿಂದ ಮಾತ್ರ ಸಾಧ್ಯ. ಹಾಗೆಯೇ ದ್ವೇಷದಿಂದ ದ್ವೇಷವನ್ನು ಓಡಿಸಲು ಸಾಧ್ಯವಿಲ್ಲ, ಪ್ರೀತಿಯಿಂದ ಮಾತ್ರ ಸಾಧ್ಯ ಎಂದು ಅಮೇರಿಕಾದ ಖ್ಯಾತ ನಾಯಕ ಮಾರ್ಟಿನ ಲೂಥರ್ ಕಿಂಗ್ ಹೇಳಿದ್ದಾರೆ. ಪ್ರೀತಿಗೆ ಜಗತ್ತನ್ನು ಗೆಲ್ಲಲು ಸಾಧ್ಯವಿದೆ. ಅದಕ್ಕೆ ಮೊದಲು ಸೋಲುವ ಮನೋಭಾವ ರೂಢಿಸಿಕೊಳ್ಳಬೇಕು. ಸೋತು ಗೆಲ್ಲುವ ಮನೋಭಾವ ಮನುಜನದ್ದಾಗಬೇಕು. ಗೆದ್ದು ಬೀಗುವುದಕ್ಕಿಂತ ಸೋತು ಸಂತೋಷಿಸುವುದು ಮಾನವ ಧರ್ಮವಾಗಬೇಕು. ಸ್ವಾರ್ಥ ಸ್ವಭಾವವನ್ನು ಬಿಡಬೇಕು. ಹುಟ್ಟಿದ ದ್ವೇಷ ಅಕಾಲಿಕವಾಗಿ ಮೃತ್ಯುಕಾಣಲಿ, ಹುಟ್ಟಿದ ಪ್ರೀತಿ ದೀರ್ಘಾಯುಷ್ಯವನ್ನು ಹೊಂದಲಿ ಎಂದು ಆಶಿಸೋಣ. ಏನಂತೀರಿ?

ಬೆಳ್ಳಿ ಕಿರಣ : ಸುಡುವ ಕೊಳ್ಳಿ ದ್ವೇಷ, ಬೆಳಗುವ ದೀಪ ಪ್ರೀತಿ

ಕೆಜಿಎಫ್–2 ಟ್ರೈಲರ್ ಅದ್ದೂರಿ ಬಿಡುಗಡೆ

● ಕೆಲವೇ ನಿಮಿಷಗಳಲ್ಲಿ ಲಕ್ಷಾಂತರ ಜನರ ವೀಕ್ಷಣೆ ● ಶಿವಣ್ಣ ನನ್ನ ಅಣ್ಣ: ನಾಯಕ ಯಶ್



ಬೆಂಗಳೂರು, ಮಾ. 27– ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಕೆಜಿಎಫ್ 2 ಟ್ರೈಲರ್ ಇಂದು ಬೆಂಗಳೂರಿನಲ್ಲಿ ಅದ್ದೂರಿಯಾಗಿ ಬಿಡುಗಡೆ ಆಗಿದೆ. ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅವರು ಟ್ರೈಲರ್ ಬಿಡುಗಡೆ ಮಾಡಿದ್ದು, ಬಿಡುಗಡೆ ಆದ ಕೆಲವೇ ನಿಮಿಷದಲ್ಲಿ ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿದರು. ಕನ್ನಡ ಸೇರಿದಂತೆ ಐದು ಭಾಷೆಯಲ್ಲಿ ಏಕಕಾಲದಲ್ಲಿ ಟ್ರೈಲರ್ ರಿಲೀಸ್ ಆಗಿದ್ದು, ರಾಕಿ ಅಭಿಮಾನಿಗಳು ಫುಲ್ ಖುಷ್ ಆಗಿದ್ದಾರೆ.

ಟ್ರೈಲರ್ ಲಾಂಚ್ ಬಳಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಯಶ್, ಮೊದಲು ನಮ್ಮೂರಿಗೆ ಸ್ವಾಗತ. ನಾನು ನನ್ನ ಜೀವನದಲ್ಲಿ ಯಾವತ್ತು ನರ್ವಸ್ ಆಗಿಲ್ಲ. ಆದರೆ ಇವತ್ತು ಯಾವ ರೀತಿ ಫೀಲಿಂಗ್ ಆಗುತ್ತಿದೆ ಎಂದು ನನಗೆ ಅರ್ಥ ವಾಗುತ್ತಿಲ್ಲ. ಈ ಭಾವನೆಯನ್ನು ಯಾವ ರೀತಿ ಹೇಳಿಕೊಳ್ಳಬೇಕು ಅಂತ ಗೊತ್ತಾಗುತ್ತಿಲ್ಲ ವಿ ಮಿಸ್ ಯೂ ಅಪ್ಪು ಸರ್ ಎಂದು ತಮ್ಮ ಮಾತು ಆರಂಭಿಸಿದರು.

ಶಿವಣ್ಣ ನಮ್ಮ ಅಣ್ಣ, ಅವರು ಅಳುವುದನ್ನು ನೋಡಲಾಗುತ್ತಿಲ್ಲ. ಇಲ್ಲಿವರೆಗೂ ನಾನು ಅಪ್ಪು ಅವರ ಬಗ್ಗೆ ಮಾತನಾಡಿಲ್ಲ. ಆದರೆ ಇಂದು ನಾನು ಅವರ ಬಗ್ಗೆ ಮಾತನಾಡಲು ಇಷ್ಟಪಡುತ್ತೇನೆ. ಅವರು ನಮ್ಮೆಲ್ಲರ ಜೊತೆಯಲ್ಲೇ ಇರುತ್ತಾರೆ. ಅವರು ಎಲ್ಲರ ನಡುವೆ ಜೀವಂತವಾಗಿ ಇರುತ್ತಾರೆ ಎಂದು ಸ್ಮರಿಸಿದರು.

ಅಪ್ಪು ಅವರ ಆದರ್ಶ ನಮ್ಮ ಜೊತೆ ಇರುತ್ತದೆ. ಅವರು ಬದುಕಿದ್ದಾಗಲೂ ನಾನು ಅವರ ಬಗ್ಗೆ ಕೇಳಿದ್ದೆ. ಅವರ ಜೊತೆ ಎಷ್ಟೋ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೆ. ಆ ಖುಷಿ ನನಗೆ ಇದೆ ಎಂದು ಅಪ್ಪು ಬಗ್ಗೆ ಭಾವುಕರಾಗಿ ಮಾತನಾಡಿದರು.

ಟ್ರೈಲರ್ ಬಿಡುಗಡೆ ಮಾಡಿದ ಶಿವರಾಜ್ ಕುಮಾರ್ ಕುರಿತು ಮಾತ ನಾಡಿದ ಅವರು, ಥ್ಯಾಂಕ್ಸ್ ಶಿವಣ್ಣ ನಿಮ್ಮ ರೀತಿ ಕನ್ನಡ ಸಿನಿಮಾಗಳಿಗೆ ಯಾರೂ ಪ್ರೋತ್ಸಾಹ ಕೊಡುವುದಿಲ್ಲ. ನಮ್ಮ ಕನ್ನಡ ಸಿನಿಮಾಗಳ ಪ್ರತಿ ಹೆಜ್ಜೆಯಲ್ಲಿಯೂ ನೀವು ಜೊತೆಗೆ ಇದ್ದೀರಾ. ವಿಜಿ ಸರ್ ನಿಮ್ಮನ್ನು ಕಾರ್ಯಕ್ರಮಕ್ಕೆ ಕರೆದಿದ್ದಾರೆ ಎಂದು ನನಗೆ ಗೊತ್ತಿರಲಿಲ್ಲ. ಒಂದು ವೇಳೆ ಗೊತ್ತಿದ್ದರೆ ನಾನು ಅವರ ಜೊತೆ ಬರುತ್ತಿದ್ದೆ. ವಿಜಿ ಅವರು ಕರೆಯಲು ಹೋದಾಗ ಫೋನ್ ಮಾಡಿದ್ದರೆ ಬರುತ್ತಿದ್ದೆ ಎಂದು ಶಿವಣ್ಣ ಹೇಳಿದ್ದಾರೆ. ಅದು ನಿಮ್ಮ ದೊಡ್ಡತನ. ನೀವು ಹಾಕಿಕೊಟ್ಟ ದಾರಿಯಲ್ಲಿ ನಾವು ನಡೆದುಕೊಂಡು ಹೋಗುತ್ತಿದ್ದೇವೆ. ನಿಮ್ಮ ಜೊತೆ ಇರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ ಎಂದು ಶಿವಣ್ಣನನ್ನು ಹೊಗಳಿದರು.

ನಾನು ನನ್ನ ಇಂಡಸ್ಟ್ರಿಯನ್ನು ತುಂಬಾ ಹಚ್ಚಿಕೊಂಡಿದ್ದೇನೆ ನಮ್ಮ ಸಿನಿಮಾ ಮತ್ತು ನಮ್ಮ ಇಂಡಸ್ಟ್ರಿ ಉತ್ತುಂಗಕ್ಕೆ ಹೋಗಬೇಕು ಎಂದು ನಾನು ಇಷ್ಟಪಡುತ್ತೇನೆ ನನಗೆ ಇದರಲ್ಲಿ ಕ್ರೆಡಿಟ್ ಬೇಡ. ಇದು ನಮ್ಮ ಕನ್ನಡ ಜನರ ಕನಸು ಆಗಿತ್ತು. ಆದರೆ ಈ ವೇದಿಕೆಯಲ್ಲಿ ಒಂದೇ ಸಮಯದಲ್ಲಿ ಚಿತ್ರರಂಗದ ಲೆಜೆಂಡ್‌ಗಳನ್ನು ನೋಡುತ್ತಿರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ. ಬೇರೆ ಭಾಷೆ ತಾರೆಯರೂ ಕೂಡ ನಮ್ಮ ಇಂಡಸ್ಟ್ರಿ ಬಗ್ಗೆ ಹೆಚ್ಚು ಪ್ರೀತಿ ತೋರಿಸಿ ಇಲ್ಲಿಗೆ ಬಂದಿರುವುದು ತುಂಬಾ ಸಂತೋಷವಾಗುತ್ತಿದೆ. ಕೆಜಿಎಫ್ 1 ಮುಗಿದ ಮೇಲೆ ನಾವು ನಮ್ಮ ಇಂಡಸ್ಟ್ರಿಗೋಸ್ಕರ ಏನಾದರೂ ಮಾಡಿದ್ದೇವೆ ಎಂದು ಸಂತೋಷವಾಗುತ್ತಿದೆ ಎಂದರು.

ನಿಜವಾಗಿ ಈ ಕ್ರೆಡಿಟ್ ಹೋಗಬೇಕಾಗಿರುವುದು ಈ ಚಿತ್ರದ ನಿರ್ದೇಶಕರಾದ ಪ್ರಶಾಂತ್ ಅವರಿಗೆ. ನನಗೆ ಕೆಜಿಎಫ್ ಸಿನಿಮಾದ ಭಾಗವಾಗಿರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ. ಟ್ರೈಲರ್ ನೋಡಿ ತುಂಬಾ ಸಂತೋಷವಾಗುತ್ತಿದೆ ಎಂದರು.

ರಾಜ್ಯದಲ್ಲಿ ಕೊರೊನಾ ತೀವ್ರ ಇಳಿಕೆ: 64 ಹೊಸ ಪ್ರಕರಣ ಪತ್ತೆ, 62 ಗುಣಮುಖ, ಒಬ್ಬರು ಸಾವು

ಬೆಂಗಳೂರು, ಮಾ. 27– ರಾಜ್ಯದಲ್ಲಿ ಕೊರೊನಾ ತೀವ್ರಗತಿಯಲ್ಲಿ ಇಳಿಕೆಯಾಗಿದ್ದು, ಕಳೆದ 24 ಗಂಟೆಗಳಲ್ಲಿ ಅತ್ಯಂತ ಕಡಿಮೆ 64 ಹೊಸ ಪ್ರಕರಣ ಪತ್ತೆಯಾಗಿದೆ. ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 39,45,311ಕ್ಕೆ ಏರಿಕೆಯಾಗಿದೆ.



62 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಇದರೊಂದಿಗೆ ಗುಣಮುಖರಾದವರ ಒಟ್ಟು ಸಂಖ್ಯೆ 39,03442 ಆಗಿದೆ. ರಾಜ್ಯದಲ್ಲಿ ಸದ್ಯ 1,777 ಸಕ್ರಿಯ ಪ್ರಕರಣಗಳಿರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ಸೋಂಕಿನಿಂದ ಇಂದು ಒಬ್ಬರು ಮೃತಪಟ್ಟಿದ್ದು, ಒಟ್ಟಾರೇ ಮೃತರ ಸಂಖ್ಯೆ 40,050ಕ್ಕೆ ಏರಿಕೆಯಾಗಿದೆ. ಸೋಂಕಿನ ಪ್ರಮಾಣ ಶೇಕಡಾ 0.24 ರಷ್ಟಿದ್ದು, ಮರಣ ಪ್ರಮಾಣ ಶೇ. 1.56 ರಷ್ಟಿದೆ. ಬೆಂಗಳೂರಿನಲ್ಲಿ 51 ಹೊಸ ಪ್ರಕರಣ ಪತ್ತೆಯಾಗಿದ್ದು, 53 ಮಂದಿ ಸೋಂಕಿತರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಒಬ್ಬರು ಸಾವನ್ನಪ್ಪಿದ್ದಾರೆ.

ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ದಕ್ಷಿಣ ಕನ್ನಡ, ಮಂಡ್ಯ, ಮೈಸೂರು, ರಾಮನಗರ, ಕಲುಬರಗಿ, ತುಮಕೂರು ಹೊರತುಪಡಿಸಿದರೆ ಉಳಿದೆಲ್ಲಾ ಕಡೆ ಶೂನ್ಯ ಪ್ರಕರಣ ವರದಿಯಾಗಿದೆ.

ಒಂದನೇ ಪುಟದಿಂದ

ಕಿರೀಟ ಮುಡಿಗೇರಿಸಿಕೊಂಡ ಪಿ.ವಿ.ಸಿಂಧೂ!

4ನೇ ಶ್ರೇಯಾಂಕಿತ ಆಟಗಾರ್ತಿ ಬುಸಾನನ್ ಎದುರು ಸಿಂಧೂ, 2019 ರಲ್ಲಿ ಸೇಂಟ್ ಯಾಕೊಬ್ ಶಾಲ್‌ನಲ್ಲಿ ನಡೆದ ಪಂದ್ಯದಲ್ಲಿ ಏಕೈಕ ಸೋಲನುಭವಿಸಿದ್ದರು.

ಇನ್ನು ಇದೇ ಟೂರ್ನಿಯಲ್ಲಿ ಸಿಂಧೂ ಕಳೆದ ವರ್ಷ ರನ್ನರ್ಸ್ ಅಪ್ ಸ್ಥಾನ ಪಡೆದಿದ್ದರು. ಅಂದು ವಿಶ್ವದ ಮಾಜಿ ನಂ.1 ಆಟಗಾರ್ತಿ ಸ್ಪೇನ್‌ನ ಕ್ಯಾರೊಲಿನಾ ಮರಿನ್ ಎದುರು ಸಿಂಧೂ ನಿರಾಶೆ ಅನುಭವಿಸಿದ್ದರು. ಇನ್ನು 2019ರಲ್ಲಿ ಸಿಂಧೂ, ಇದೇ ಅಂಗಣದಲ್ಲಿ ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದ ಸಾಧನೆ ಮಾಡಿದ್ದರು.

ಈ ವರ್ಷ ಸಿಂಧೂ ಗೆದ್ದ ಎರಡನೇ ಟೂರ್ನಿ ಇದಾಗಿದೆ. ಕಳೆದ ಜನವರಿಯಲ್ಲಿ ಆಡಿದ ಸೈಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಟ್ರೋಫಿ ಗೆದ್ದಿದ್ದರು. ಸೂಪರ್ 300 ಟೂರ್ನಿಗಳು ಬ್ಯಾಡ್ಮಿಂಟನ್ ವಿಶ್ವ ಒಕ್ಕೂಟ (ಬಿಡಬ್ಲ್ಯುಎಫ್) ಆಯೋಜಿಸುವ ಎರಡನೇ ಮಹತ್ವದ ಟೂರ್ನಿ ಆಗಿದೆ. 26 ವರ್ಷದ ಆಟಗಾರ್ತಿ ತಮ್ಮ ವೃತ್ತಿ ಬದುಕಿನಲ್ಲಿ ಈವರೆಗೆ 11 ಬಿಡಬ್ಲ್ಯುಎಫ್ ಮಹಿಳಾ ಸಿಂಗಲ್ಸ್ ಟ್ರೋಫಿಗಳನ್ನು ಗೆದ್ದಿದ್ದಾರೆ. ಅಲ್ಲದೆ ರಿಯೋ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸಾಧನೆ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಭಾವನೆ ಬಿಂಬಿಸುವ ವಸ್ತ್ರಕ್ಕೆ ಅವಕಾಶವಿಲ್ಲ

ಆತಂಕವಿಲ್ಲದೆ, ಮುಕ್ತವಾಗಿ, ಧೈರ್ಯವಾಗಿ ಬರೆಯಬೇಕು" ಎಂದು ಕರೆ ನೀಡಿದರು.

ಪರೀಕ್ಷೆ ಬರೆಯುವವರ ವಿವರ: 8,73,846 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ಇದರಲ್ಲಿ 4,52,732 ವಿದ್ಯಾರ್ಥಿಗಳು, 4,21,110 ವಿದ್ಯಾರ್ಥಿನಿಯರು ಮತ್ತು 4 ತೃತೀಯ ಲಿಂಗಿಗಳು. 3,444 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. 45,289 ಪರೀಕ್ಷಾ ಕೊಠಡಿಗಳು, 3,444 ಮುಖ್ಯ ಅಧೀಕ್ಷಕರು, 377 ಉಪ ಮುಖ್ಯ ಅಧೀಕ್ಷಕರು, 49,817 ಕೊಠಡಿ ಮೇಲ್ವಿಚಾರಕರನ್ನು ಪರೀಕ್ಷಾ ಕಾರ್ಯಗಳಿಗಾಗಿ ನಿಯೋಜನೆ ಮಾಡಲಾಗಿದೆ.

ಮರು ಪರೀಕ್ಷೆ ಮಾಡುವುದಿಲ್ಲ: ಯಾವುದೇ ಉದ್ದೇಶದಿಂದ ಪರೀಕ್ಷೆಗೆ ಗೈರು ಹಾಜರಿ ಆದವರಿಗೆ ಮರು ಪರೀಕ್ಷೆ ಮಾಡುವುದಿಲ್ಲ. ಬದಲಿಗೆ ಪೂರಕ ಪರೀಕ್ಷೆ ಬರೆಯ ಬಹುದು ಎಂದು ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ. ಈ ಮೂಲಕ ಪರೀಕ್ಷಾ ಕೇಂದ್ರದೊಳಗೆ ಹಿಜಾಬ್ ಧರಿಸಲು ಅವಕಾಶ ಕೋರಿ ಪ್ರತಿಭಟನೆ ನಡೆಸಲು ಪರೀಕ್ಷೆಗೆ ಗೈರಾದರೆ ಅಂತಹ ವಿದ್ಯಾರ್ಥಿಗಳಿಗೆ ಮತ್ತೆ ಪರೀಕ್ಷೆ ನಡೆಸುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಶಿಕ್ಷಣ ಇಲಾಖೆಯಿಂದ ಆದೇಶ: ಇನ್ನು ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಸಮವಸ್ತ್ರವನ್ನು ಧರಿಸಿ ಪರೀಕ್ಷಾ ಕೇಂದ್ರಕ್ಕೆ ಹಾಜರಾಗುವ ಕುರಿತು ವಿ. ಶ್ರೀನಿವಾಸಮೂರ್ತಿ ಸರ್ಕಾರದ ಅಧೀನ ಕಾರ್ಯದರ್ಶಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರು ಆದೇಶ ಹೊರಡಿಸಿದ್ದಾರೆ.

ಅಭ್ಯರ್ಥಿಗಳಿಗಾಗಿ ಕಾಂಗ್ರೆಸ್ ಸಮೀಕ್ಷೆ

ಪ್ರಧಾನಿ ಕೂಡ ಕರ್ನಾಟಕದತ್ತ ತೀವ್ರ ಗಮನ ಹರಿಸುವ ಸಾಧ್ಯತೆಯಿದೆ. ಈ ಬಾರಿ ಕಠಿಣ ಸ್ಪರ್ಧೆಯಿದ್ದರೂ, ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ತರಲು ಬಿಜೆಪಿ ಮುಖಂಡರು ಕಾರ್ಯತಂತ್ರ ರೂಪಿಸುತ್ತಾರೆ. ಹೀಗಾಗಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಗೆಲ್ಲಬಲ್ಲ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಾಂಗ್ರೆಸ್ ಸರಣಿ ಸಮೀಕ್ಷೆಗಳನ್ನು ನಡೆಸಲು ಮುಂದಾಗಿದೆ. ಚುನಾವಣೆ ಹಿನ್ನೆಲೆಯಲ್ಲಿ ಡಿಜಿಟಲ್ ಸದಸ್ಯತ್ವ ಅಭಿಯಾನವನ್ನು ಆರಂಭಿಸಿರುವ ಕರ್ನಾಟಕ ಕಾಂಗ್ರೆಸ್ ಮಾರ್ಚ್ ಅಂತ್ಯದೊಳಗೆ 50 ಲಕ್ಷ ಸದಸ್ಯರನ್ನು ಸೇರ್ಪಡೆಗೊಳಿಸಲು ಗುರಿ ಇಟ್ಟುಕೊಂಡಿದೆ.

ಈ ನಡುವೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಡ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದು, ಡಿಜಿಟಲ್ ಸದಸ್ಯತ್ವ ಅಭಿಯಾನದ ಮೇಲೆ ಕಣ್ಣಾವಲಿರಿಸಲಿದ್ದಾರೆ. ಆದರೆ, ಇದರಿಂದ ಅಂತಹ ದೊಡ್ಡ ಪರಿಣಾಮಗಳು ಕಂಡು ಬರುವುದಿಲ್ಲ ಎಂದು ಪಕ್ಷದ ಮೂಲಗಳು ಮಾಹಿತಿ ನೀಡಿವೆ. ಈಗಾಗಲೇ ಹೆಚ್ಚೆಚ್ಚು ಸದಸ್ಯರನ್ನು ಸೇರ್ಪಡೆಗೊಳಿಸುವ ಪಕ್ಷದ ಕಾರ್ಯಕರ್ತರಿಗೆ ಭರ್ಜರಿ ಉಡುಗೊರೆಗಳನ್ನೂ ನೀಡಲಾಗುತ್ತಿದೆ. ಡಿಜಿಟಲ್ ಸದಸ್ಯತ್ವ ಅಭಿಯಾನದ ಮೂಲಕ 10ಕ್ಕಿಂತ ಹೆಚ್ಚು ಸದಸ್ಯರನ್ನು ಸೇರ್ಪಡೆಗೊಳಿಸುವ ಕಾರ್ಯಕರ್ತರು ದ್ವಿತೀಯ ಸದಸ್ಯತ್ವಕ್ಕೆ ಅರ್ಹರಾಗಿದ್ದಾರೆ ಮತ್ತು ಮತ ಚಲಾಯಿಸಲು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಅವರಿಗೆ ಅವಕಾಶ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಪಕ್ಷವು ಮೊಬೈಲ್ ಅಪ್ಲಿಕೇಶನ್ ಅನ್ನೂ ಕೂಡ ಅಭಿವೃದ್ಧಿಪಡಿಸುತ್ತಿದೆ, ಅದರ ಮೂಲಕ ದ್ವಿತೀಯ ಸದಸ್ಯತ್ವವನ್ನು ಪಡೆದವರು ಪ್ರತಿಕ್ರಿಯೆಯನ್ನು ನೀಡಬಹುದು ಮತ್ತು 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದು ಸ್ಪರ್ಧಿಸಲು ಬಯಸುವ ಅಭ್ಯರ್ಥಿಗಳಿಗೆ ಮತ ಹಾಕಬಹುದು ಎಂದು ತಿಳಿದು ಬಂದಿದೆ.

ಪ್ರಮೋದ್ ಸಾವಂತ್ ಪ್ರಮಾಣವಚನ

ಪಣಜಿಯಲ್ಲಿರುವ ಡಾ.ಶ್ಯಾಮಪ್ರಸಾದ್ ಮುಖರ್ಜಿ ಸ್ಟೇಡಿಯಮ್ ನಲ್ಲಿ ಬೆಳಿಗ್ಗೆ 11 ಗಂಟೆಗೆ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಸರ್ಕಾರದ ವಕ್ತಾರರ ಪ್ರಕಾರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಪ್ರಧಾನಿ ಮೋದಿ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ. 10,000ಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದು ಪದಗ್ರಹಣದ ಕಾರ್ಯಕ್ರಮವನ್ನು ನೇರಪ್ರಸಾರ ಮಾಡಲಾಗುತ್ತದೆ. ಪ್ರಮೋದ್ ಸಾವಂತ್ ಅವರೊಂದಿಗೆ ಪ್ರಮಾಣ ವಚನ ಸ್ವೀಕರಿಸುವ ಸಚಿವರ ಬಗ್ಗೆ ಬಿಜೆಪಿ ಈ ವರೆಗೂ ಮಾಹಿತಿ ಬಿಟ್ಟುಕೊಟ್ಟಿಲ್ಲ. ಈ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿರುವ ಸಾವಂತ್, "ಸೋಮವಾರ ನಿಮಗೇ ತಿಳಿಯಲಿದೆ" ಎಂದಷ್ಟೇ ಹೇಳಿದ್ದಾರೆ.

ಪತ್ನಿ ಅಗಲಿಕೆ ನೋವಿನಲ್ಲೇ ಪತಿ ಆತ್ಮಹತ್ಯೆ

ಜನವರಿಯಲ್ಲಿ ಬಿಪಿ ಮಾತ್ರೆ ಬದಲಿಗೆ ಅದರ ಜೊತೆಯಿದ್ದ ಬೇರೆ ಯಾವುದೋ ಮಾತ್ರೆ ಸೇವಿಸಿದ್ದರು. ಪರಿಣಾಮ ಆರೋಗ್ಯದಲ್ಲಿ ವ್ಯತ್ಯಯವಾಗಿ ಅಸ್ವಸ್ಥರಾಗಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆಯೇ ಉಸಿರು ಚೆಲ್ಲಿದರು. ಪ್ರೀತಿಯ ಪತ್ನಿಯ ಅಗಲಿಕೆಯಿಂದ ಆಘಾತಕ್ಕೊಳಗಾದ ಮಹೇಶ್, ತಾಯಿ ಇಲ್ಲದ ತನ್ನ ಮಕ್ಕಳ ರೋಧನೆ ಕಂಡು ಜರ್ಜರಿತರಾಗಿದ್ದರು. ನೋವು ಸಹಿಸಲಾಗದೆ ಎರಡ್ಮೂರು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರಾದರೂ ಕುಟುಂಬದವರು, ಗ್ರಾಮಸ್ಥರು ತಡೆದು, ಸಮಾಧಾನ ಪಡಿಸುವ ಪ್ರಯತ್ನ ಮಾಡಿದ್ದರು. ಆದರೆ ಯಾರು ಎಷ್ಟೇ ಸಂತೈಸಿದರೂ ಪತ್ನಿಯ ಸಾವಿನ ನೋವಿನಿಂದ ಮಹೇಶ್ ಹೊರಬಂದಿರಲಿಲ್ಲ. ಸದಾ ಪತ್ನಿ ನೆನಪಿನಲ್ಲೇ ಕೊರಗುತ್ತಿದ್ದರು.

ದುರ್ವಿಧಿ ಇಂದು ಮಹೇಶ್ ಅವರನ್ನು ಯಾರಿಂದಲೂ ಕಾಪಾಡಲು ಸಾಧ್ಯವಾಗಿಲ್ಲ. ಇಂದು ತೋಟಕ್ಕೆ ತೆರಳಿ ಬೆಳೆಗೆ ಬಳಸುವ ಅಪಾಯಕಾರಿ ಕಾಳುಗಳನ್ನು ಸೇವಿಸಿದ್ದಾರೆ. ಬಳಿಕ ತನ್ನ ಸಹೋದರನಿಗೆ ಕರೆ ಮಾಡಿ, 'ಮಕ್ಕಳನ್ನು ಚೆನ್ನಾಗಿ ನೋಡಿಕೋ, ನಾನು ಬದುಕುವುದಿಲ್ಲ' ಎಂದು ಹೇಳಿದ್ದಾರೆ. ತಕ್ಷಣ ಎಲ್ಲೆಡೆ ಹುಡುಕಾಡಿ ತೋಟದಲ್ಲಿ ಒದ್ದಾಡುತ್ತಿದ್ದ ಮಹೇಶ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಗಿಲು ಮುಟ್ಟಿದ ಆಕ್ರಂದನ: ಪತ್ನಿ ಸಾವಿನ ಕೊರಗಿನಲ್ಲೇ ಮೃತಪಟ್ಟ ಮಹೇಶ್ ಅವರನ್ನು ನೆನೆದು ಇಡೀ ಗ್ರಾಮವೇ ಕಣ್ಣೀರಿಟ್ಟಿತು. ತಬ್ಬಲಿಗಳಾದ ಮಕ್ಕಳ ಸ್ಥಿತಿಯನ್ನು ಕಂಡ ಸಂಬಂಧಿಕರು, ಸ್ನೇಹಿತರ ಆಕ್ರಂದನ ಮುಗಿಲುಮುಟ್ಟಿತ್ತು. ಅಪ್ಪ-ಅಮ್ಮನ ಕಳೆದುಕೊಂಡು ದಿಕ್ಕುತೋಚದಂತೆ ಕಣ್ಣೀರಿಡುತ್ತಿದ್ದ ಮಕ್ಕಳನ್ನು ಮಹೇಶ್ ಪೋಷಕರು, ಸಹೋದರರು ಹಾಗೂ ಸಂಬಂಧಿಕರು ಸಂತೈಸುವ ಪ್ರಯತ್ನ ಮಾಡುತ್ತಿದ್ದ ದೃಶ್ಯ ಮನಕಲಕಿತು.

ಮೈಸೂರು ರೇಷ್ಮೆ ಕಾರ್ಖಾನೆ ಉನ್ನತೀಕರಣ

ಮೈಸೂರು ಸಿಲ್ಕ್‌ಗೆ ಮತ್ತಷ್ಟು ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದರು. ಕಾರ್ಖಾನೆಯಲ್ಲಿ ಸೀರೆಗಳ ಉತ್ಪಾದನೆ ಹಾಗೂ ದಾಸ್ತಾನು ಕಡಿಮೆ ಇದ್ದು, ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಕಾರ್ಖಾನೆ ಉನ್ನತೀಕರಣಗೊಳಿಸಿ, ಮಾರುಕಟ್ಟೆಯನ್ನೂ ಕೂಡ ಉನ್ನತ ದರ್ಜೆಗೇರಿಸಲು ಪ್ರಯತ್ನಿಸಲಾಗುತ್ತಿದ್ದು, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒಂದು ದೊಡ್ಡ ಮಾರಾಟ ಮಳಿಗೆ ತೆರೆಯಲು ಸಿದ್ಧತೆ ನಡೆದಿದೆ. ಅಲ್ಲದೇ ದೆಹಲಿ ಹಾಗೂ ಮುಂಬೈನಲ್ಲೂ ಮೈಸೂರು ಸಿಲ್ಕ್ ಮಾರಾಟ ಮಳಿಗೆ ತೆರೆಯುವ ಚಿಂತನೆ ಇದೆ ಎಂದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಪಾಲಿಕೆ ಸದಸ್ಯರಾದ ಭಾಗ್ಯ ರಮೇಶ್, ಎಸ್‌ಬಿಎಂ ಮಂಜು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ಅಧ್ಯಕ್ಷ ಎಸ್.ಆರ್.ಗೌಡ, ವ್ಯವಸ್ಥಾಪಕ ನಿರ್ದೇಶಕಿ ವಾಸಿ ರೆಡ್ಡಿ ವಿಜಯ ಜ್ಯೋತ್ಸಾ, ಪ್ರಧಾನ ವ್ಯವಸ್ಥಾಪಕ (ಮಾರುಕಟ್ಟೆ) ಎಸ್.ಭಾನುಪ್ರಕಾಶ್, ಇತರ ವಿಭಾಗಗಳ ವ್ಯವಸ್ಥಾಪಕ ನಿರ್ದೇಶಕರಾದ ಸತೀಶ್, ಚಕ್ರವರ್ತಿ, ಮೈಸೂರಿನ ವ್ಯವಸ್ಥಾಪಕ ಸಿದ್ದಲಿಂಗಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಎಂ.ಪಾರ್ಥಸಾರಥಿ ಇನ್ನಿತರರಿದ್ದರು.

ಎರಡು ಕೋಮಿನ ಘರ್ಷಣೆಯಿಂದ

18 ವರ್ಷದಿಂದ ಬಾಗಿಲು ಮುಚ್ಚಿದ್ದ ದೇವಸ್ಥಾನ ತೆರೆಯಲು ಸಿದ್ಧತೆ

ಶಾಸಕ ರವೀಂದ್ರ ಶ್ರೀಕಂಠಯ್ಯ ಯಶಸ್ವಿ ಸಂಧಾನ



ಶ್ರೀರಂಗಪಟ್ಟಣ, ಮಾ.27(ವಿನಯ್‌ಕಾರೇಕುರ)– ತಾಲೂಕಿನ ಜಕ್ಕನಹಳ್ಳಿ ಗ್ರಾಮದಲ್ಲಿ ಎರಡು ಕೋಮಿನ ಸಂಘರ್ಷದಿಂದ ಕಳೆದ 18 ವರ್ಷಗಳಿಂದ ಮುಚ್ಚಿದ್ದ ಶ್ರೀ ಚಾಮುಂಡೇಶ್ವರಿ ದೇವಾಲಯದ ಬಾಗಿಲು ತೆರೆಸಲು ಗ್ರಾಮಸ್ಥರೊಂದಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ನಡೆಸಿದ ರಾಜಿ ಸಂಧಾನ ಬಹುತೇಕ ಯಶಸ್ವಿಯಾಗಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗ್ರಾಮದ ಎರಡು ಕೋಮಿನ ಮುಖಂಡರು ಹಾಗೂ ಗ್ರಾಮಸ್ಥರ ಸಭೆ ಕರೆಯಲಾಗಿತ್ತು. ಎರಡೂ ಗುಂಪುಗಳ ಸಮಸ್ಯೆಗಳನ್ನು ಆಲಿಸಿ, ಯುಗಾದಿ ಹಬ್ಬದ ನಂತರ ಗ್ರಾಮಸ್ಥರೆಲ್ಲರೂ ಜೊತೆಗೂಡಿ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಕರಣವನ್ನು ಹಿಂಪಡೆದು ಗ್ರಾಮದಲ್ಲಿ ಶಾಂತಿ, ನೆಮ್ಮದಿಯಿಂದ ಜೀವನ ನಡೆಸುವಂತೆ ಶಾಸಕರು ಹೇಳಿದರು. ಈ ವಿಚಾರವಾಗಿ ಗ್ರಾಮದಲ್ಲಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮತ್ತೊಂದು ಸಭೆ ನಡೆಸಿ ಈಗಾಗಲೇ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರ ಮೇಲೆ ದಾಖಲಾಗಿರುವ ದೂರು, ಜೊತೆಗೆ 144 ಸೆಕ್ಷನ್ ರದ್ದು ಪಡಿಸಲು ಪ್ರಯತ್ನಿಸುವುದಾಗಿ ಶಾಸಕರು ಭರವಸೆ ನೀಡಿದರು.

2004ರಲ್ಲಿ ಗ್ರಾಮದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ವಿಷಯದಲ್ಲಿ ಎರಡು ಕೋಮಿನ ನಡುವೆ ಜಗಳ ಏರ್ಪಟ್ಟು, ಪರಸ್ಪರ ದೂರು ದಾಖಲಾಗುವ ಜೊತೆಗೆ ದೇವಾಲಯದ ಬಾಗಿಲು ಮುಚ್ಚಲಾಗಿತ್ತು. ಅಲ್ಲದೇ ಕಳೆದ 18 ವರ್ಷಗಳಿಂದಲೂ ದೇವಾಲಯದ ಸುತ್ತಮುತ್ತಲಿನ ಪ್ರದೇಶದಲ್ಲಿ 144 ಸೆಕ್ಷನ್ ಜಾರಿಯಲ್ಲಿದ್ದು, ಗ್ರಾಮದಲ್ಲಿ ಯಾವುದೇ ಸಣ್ಣಪುಟ್ಟ ಜಗಳ ನಡೆದರೂ ಸಹ ದೂರು ದಾಖಲಾಗಿ ಸಮಸ್ಯೆ ಎದುರಿಸುವಂತಾಗಿತ್ತು. ಇದೀಗ ಶಾಸಕ ರವೀಂದ್ರ ಶ್ರೀಕಂಠಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಮಸ್ಯೆ ಬಗೆಹರಿದಿರುವುದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಗಿದೆ.

ಕಿಕ್ಕೇರಿಯಲ್ಲಿ ಕೋಟೆ ಮಾರಿಕಾಂಬ ದೇವಿ ಹಬ್ಬ



ಕಿಕ್ಕೇರಿ, ಮಾ.27– ಪಟ್ಟಣದಲ್ಲಿ ಕೋಟೆ ಮಾರಿಕಾಂಬ ದೇವಿ ಹಬ್ಬ ಸಡಗರದಿಂದ ಜರುಗಿತು.

ಪಾಳೇಗಾರರ ಕಾಲದಲ್ಲಿ ನಿರ್ಮಿತವಾದ ಕೋಟೆ ಗಣಪತಿ, ಆಂಜನೇಯ ಗುಡಿಗೆ ಹೊಂದಿಕೊಂಡಿರುವ ಪುರಾತನ ಮಾರಮ್ಮ ಗುಡಿ ತನ್ನದೆ ಆದ ಮಹಿಮೆಯನ್ನು ಹೊಂದಿದ್ದು, ವಿವಿಧೆಡೆಯಿಂದ ಅಧಿಕವಾಗಿ ಭಕ್ತರು ಆಗಮಿಸಿದ್ದರು. ದೇವಿಗೆ ಎಣ್ಣೆ ಮಜ್ಜನ, ಎಳನೀರು ಅಭಿಷೇಕ ನೆರವೇರಿಸಿ, ಬೇವಿನ ಸೊಪ್ಪಿನಿಂದ ತಂಪು ಮಾಡಿದರು. ಬೆಳಗ್ಗಿನಿಂದಲೂ ಮಹಿಳೆಯರು, ಮಕ್ಕಳು ಗುಡಿಗೆ ಆಗಮಿಸಿ ದೇವಿಗೆ ಎಣ್ಣೆ ಮಜ್ಜನ, ಅರಿಶಿನ ಹಾಕುತ್ತ, ಬೇವಿನ ಸೊಪ್ಪನ್ನು ಮುಡಿಗೆ ಅರ್ಪಿಸಿ ಭಕ್ತಿ ಮೆರೆದರು.

ಕಳೆದ ಎರಡು ವರ್ಷದಿಂದ ಕೊರೊನಾದಿಂದ ಹಬ್ಬಕ್ಕೆ ಬ್ರೇಕ್ ಹಾಕಿದ್ದ ಕಾರಣ, ಈ ಬಾರಿ ಗ್ರಾಮದಲ್ಲಿ ಹಬ್ಬದ ಸಂಭ್ರಮಕ್ಕೆ ಮಕ್ಕಳು, ಮಹಿಳೆಯರು ಖುಷಿಯಾಗಿದ್ದರು. ರೋಗರುಜಿನ ರಕ್ಷಕಿ ದೇವಿ ಎಂದೇ ಕರೆಯುವ ಕೋಟೆ ಮಾರಮ್ಮನಿಗೆ ಗ್ರಾಮವಲ್ಲದೆ ಹೋಬಳಿಯ ಸುತ್ತಮುತ್ತಲಿನಿಂದ ನೂರಾರು ಭಕ್ತರು ಆಗಮಿಸಿದ್ದರು. ಗಣಪತಿ ದೇವರಿಗೆ ಮೊದಲ ಪೂಜೆ ಸಲ್ಲಿಸಿ ನಂತರ ದೇವಿಗೆ ಜಲಾಭಿಷೇಕ ನೆರವೇರಿಸಲಾಯಿತು.

ದೇವಿಗೆ ತಂಬಿಟ್ಟಿನ ಆರತಿ, ಹೂವಿನ ಆರತಿ ಬೆಳಗಿದ ಮಹಿಳೆಯರು ಹಣ್ಣು ಕಾಯಿ ಅರ್ಪಿಸಿ ದೀಪ, ಧೂಪದಾರತಿ ಬೆಳಗಿದರು. ಅವರೆಕಾಳು ಸಾರು, ಮುದ್ದೆ, ಅನ್ನದ ತಳಿಗೆಯನ್ನು ದೇವಿಗೆ ತಯಾರಿಸಿ ನೈವೇದ್ಯವಾಗಿ ಸಮರ್ಪಿಸಲಾಯಿತು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ನಾಗಮಂಗಲ, ಮಾ.27(ಮಹೇಶ್)– ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ತಾಲೂಕಿನಲ್ಲಿ ನಡೆದಿದೆ.

ತಾಲೂಕಿನ ಗದ್ದೆಭೂವನಹಳ್ಳಿ ಗ್ರಾಮದ ಚನ್ನಬಸಪ್ಪ ಹಾಗೂ ಬ್ರಹ್ಮದೇವರಹಳ್ಳಿಯ ಕೃಷ್ಣಪ್ಪ ಮೃತಪಟ್ಟರು. ಶನಿವಾರ ರಾತ್ರಿ ಎಂಟು ಗಂಟೆಯ ಸಮಯದಲ್ಲಿ ಪಟ್ಟಣದ ಮಧು ಡಾಬಾ ಬಳಿ ನಡೆದು ಹೋಗುತ್ತಿದ್ದ ಗದ್ದೆ ಭೂವನಹಳ್ಳಿ ಗ್ರಾಮದ ಚನ್ನಬಸಪ್ಪ ಅವರಿಗೆ ಟಿವಿಎಸ್ ದ್ವಿಚಕ್ರ ವಾಹನ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಚನ್ನಬಸಪ್ಪ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದು, ಪ್ರಕರಣ ನಾಗಮಂಗಲ ಪಟ್ಟಣ ಠಾಣೆಯಲ್ಲಿ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಭಾನುವಾರ ಮುಂಜಾನೆ ವಾಯುವಿಹಾರಕ್ಕೆ ಹೋಗುತ್ತಿದ್ದ ತಾಲೂಕು ಪಂಚಾಯಿತಿಯ ನೌಕರ ಬ್ರಹ್ಮದೇವರಹಳ್ಳಿಯ ಕೃಷ್ಣಪ್ಪ ಅವರಿಗೆ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಇದರಿಂದ ಆಯತಪ್ಪಿ ಕೆಳಬಿದ್ದ ಕೃಷ್ಣಪ್ಪ ಅವರ ಮೇಲೆ ಕ್ಯಾಂಟರ್ ಹರಿದು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಪ್ರಕರಣ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಶನೇಶ್ವರಸ್ವಾಮಿಯ 27ನೇ ವರ್ಷದ ರಥೋತ್ಸವ

ಶ್ರೀರಂಗಪಟ್ಟಣ, ಮಾ.27(ವಿನಯ್‌ಕಾರೇಕುರ)–ಪಟ್ಟಣದ ರಾಂಪಾಲ್ ರಸ್ತೆಯ ಪೊಲೀಸ್ ವಸತಿ ನಿಲಯಗಳ ಬಳಿ ಇರುವ ಶ್ರೀ ಶನೇಶ್ವರಸ್ವಾಮಿಯ 27ನೇ ವರ್ಷದ ರಥೋತ್ಸವ ಜರುಗಿತು.

ರಥೋತ್ಸವದ ಅಂಗವಾಗಿ ದೇವರ ಗುಡ್ಡಪ್ಪ ರವಿಕುಮಾರ್ ನೇತೃತ್ವದಲ್ಲಿ, ಶನೇಶ್ವರ ಭಕ್ತ ಮಂಡಳಿಯಿಂದ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ನಂತರ ಶನೇಶ್ವರ ಉತ್ಸವಮೂರ್ತಿಯನ್ನು ಅಲಂಕೃತ ರಥದಲ್ಲಿ ಕೂರಿಸಲಾಯಿತು. ಬಳಿಕ ಸಾಂಸ್ಕೃತಿಕ ಕಲಾತಂಡಗಳು, ಮಂಗಳ ವಾದ್ಯದೊಂದಿಗೆ ಪಟ್ಟಣದ ಮುಖ್ಯ ಬೀದಿಯಲ್ಲಿ ರಥೋತ್ಸವ ಸಾಗಿತು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ವೇಳೆಗೆ ಶನಿಪ್ರಭಾವ ಅಥವಾ ರಾಜಾ ವಿಕ್ರಮ ಎಂಬ ಭಕ್ತಿ ಪ್ರಧಾನ ಪೌರಾಣಿಕ ನಾಟಕ ಪ್ರದರ್ಶನ ನಡೆಯಿತು.

ಧೈರ್ಯದಿಂದ ಪರೀಕ್ಷೆ ಬರೆಯಲು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸಲಹೆ



ಮಂಡ್ಯ, ಮಾ.27– ನಾಳೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಲಿದ್ದು, ಮಂಡ್ಯ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು ಭಯಪಡದೆ ಪ್ರಸಕ್ತ ವರ್ಷದಿಂದ ಕೊರೊನಾ ಛಾಯೆಯಿಂದ ಅಲ್ಪ ಮಟ್ಟಿಗೆ ಸಮಾಜ ಹೊರಬಂದಿದ್ದು, ಸೂಚಿಸಿದ ನಿಯಮಗಳನ್ನು ಅನುಸರಿಸಿ ಧೈರ್ಯವಾಗಿ ಪರೀಕ್ಷೆ ಬರೆಯುವಂತೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸಲಹೆ ನೀಡಿದ್ದಾರೆ.

ಪರೀಕ್ಷೆ ಹಿನ್ನೆಲೆಯಲ್ಲಿ ಯಾರೂ ಸಹ ಆತಂಕ ಪಡುವ ಅಗತ್ಯವಿಲ್ಲ. ಪರೀಕ್ಷೆ ಎಂದರೆ ಯುದ್ಧವಲ್ಲ. ಅದೊಂದು ಮುಂದಿನ ಹಂತಕ್ಕೆ ಪ್ರವೇಶ ಮಾಡಲು ಇರುವ ಘಟ್ಟ, ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಇದ್ದರೆ ಸಾಕು. ಆತ್ಮವಿಶ್ವಾಸ ನಿಮ್ಮನ್ನು ಅರ್ಧ ಗೆಲ್ಲಿಸಿಬಿಡುತ್ತದೆ. ಹೀಗಾಗಿ ಜಿಲ್ಲೆಯ ಸಮಸ್ತ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಹಿಂಜರಿಕೆ, ಕೀಳರಿಮೆ ಇಲ್ಲದೆ ವಿಶ್ವಾಸದಿಂದ ಪರೀಕ್ಷೆ ಬರೆಯುವಂತೆ ಧೈರ್ಯ ತುಂಬಿದ್ದಾರೆ.

ಪೋಷಕರು ಹಾಗೂ ಶಿಕ್ಷಕರು ಮಕ್ಕಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು. ಮೊದಲ ದಿನದ ಪರೀಕ್ಷೆ ವೇಳೆ ಮಕ್ಕಳಿಗೆ ನಿಗದಿಯಾದ ಕೊಠಡಿಯನ್ನು ತೋರಿಸಿಕೊಡುವ ಕೆಲಸವೂ ಆಗಬೇಕಿದೆ. ಎಲ್ಲೂ ಸಹ ಗೊಂದಲಕ್ಕೆ ಅವಕಾಶ ಆಗದಂತೆ ನೋಡಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲು ಹೇಳಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 21155 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆಯುತ್ತಿದ್ದಾರೆ. ಈಗಾಗಲೇ ನಿಷೇಧಾಜ್ಞೆ ಸಹ ಜಾರಿಯಲ್ಲಿದ್ದು, ಕಟ್ಟುನಿಟ್ಟಿನ ಪಾಲನೆ ಆಗಬೇಕಿದೆ. ರಾಜ್ಯದ ಶೈಕ್ಷಣಿಕ ಸಾಧನೆಯಲ್ಲಿ ಜಿಲ್ಲೆಗೆ ಉತ್ತಮ ಸ್ಥಾನ ಸಿಗಲಿ ಎಂದರಲ್ಲದೆ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಉತ್ತಮವಾಗಿ ಬರೆಯುವ ಮೂಲಕ ಶೈಕ್ಷಣಿಕ ಸಾಧನೆಯಲ್ಲಿ ರಾಜ್ಯದಲ್ಲಿಯೇ ಉತ್ತಮ ದರ್ಜೆಯನ್ನು ಪಡೆದು, ಸಾಧನೆಯನ್ನು ಮಾಡಲಿ ಎಂದು ಹಾರೈಸಿದ್ದಾರೆ.

ಕಾವೇರಿ ನೀರು ಕೊಡಗಿನವರ ಬಳಕೆಗೆ ಲಭಿಸುತ್ತಿಲ್ಲ

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ವಿಷಾದ



ಸುಂಟಿಕೊಪ್ಪ,ಮಾ.27–ಕೊಡಗಿನ ಕಾವೇರಿ ಜಲಾನಯನ ಪ್ರದೇಶದಿಂದ ಪ್ರತಿ ವರ್ಷ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ 350 ಟಿಎಂಸಿ ನೀರು ಬೇಸಾಯಕ್ಕೆ ಬಳಕೆಯಾಗುತ್ತದೆ. ಆದರೆ ಕೊಡಗಿನ ನೀರು ಸ್ಥಳೀಯರ ಬಳಕೆಗೆ ಲಭಿಸುತ್ತಿಲ್ಲ ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ವಿಷಾದಿಸಿದರು.

ಕೊಡಗರಹಳ್ಳಿ, ಕಂಬಿಬಾಣೆ, ಚಿಕ್ಲಿಹೊಳೆ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕೊರೊನಾದಿಂದ ಕಳೆದ 3 ವರ್ಷಗಳಲ್ಲಿ ಈ ರಸ್ತೆ ಕಾಮಗಾರಿ ನಡೆಸಲು ಸಾಧ್ಯವಾಗಲಿಲ್ಲ. ಈಗ 2 ಕೋಟಿ ರೂ. ಅನುದಾನ ಸರ್ಕಾರದಿಂದ ಬಿಡುಗಡೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಇನ್ನು 2 ಕೋಟಿ ರೂ. ಬಿಡುಗಡೆಗೆ ನೀರಾವರಿ ಸಚಿವ ಗೋವಿಂದ ಕಾರಜೋಳ ಹಸಿರು ನಿಶಾನೆ ತೋರಿದ್ದಾರೆ. ಕೊಡಗಿನ ಅಭಿವೃದ್ಧಿಗೆ ಹೆಚ್ಚಿನ ಒತ್ತು ಸರ್ಕಾರ ನೀಡುತ್ತಿದೆ. 4 ಮೀಟರ್ ಅಗಲದ ಕಾಂಕ್ರಿಟ್ ರಸ್ತೆ ಹಾಗೂ ಡಾಂಬರ್ ರಸ್ತೆ ನಿರ್ಮಾಣ ಆಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಂಬಿಬಾಣೆ ಗ್ರಾಪಂ ಅಧ್ಯಕ್ಷೆ ಮಧುನಾಗಪ್ಪ, ಉಪಾಧ್ಯಕ್ಷೆ ಅಶ್ವಿನಿ, ಹೊಸಕೋಟೆ ಗ್ರಾಪಂ ಅಧ್ಯಕ್ಷ ರಮೇಶ, ಉಪಾಧ್ಯಕ್ಷ ಜೋಸೆಫ್, ಪಿಡ್ಲ್ಯೂಡಿ ಇಂಜಿನಿಯರ್ ಮಹೇಂದ್ರ ಕುಮಾರ್, ಕಿರಣ್, ಮಾಜಿ ಗ್ರಾಪಂ ಅಧ್ಯಕ್ಷ ಶಶಿಕಾಂತರೈ, ಬಿಜೆಪಿ ಸೋಮವಾರಪೇಟೆ ತಾಲೂಕು ಕ್ಷೇತ್ರ ಸಮಿತಿ ಅಧ್ಯಕ್ಷ ಎಂ.ಎನ್.ಕೊಮಾರಪ್ಪ, ಲ್ಯಾಂಪ್ ಸೊಸೈಟಿ ಅಧ್ಯಕ್ಷ ಆರ್.ಕೆ.ಚಂದ್ರು, ಸುಂಟಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ದಾಸಂಡ ರಮೇಶ್ ಚಂಗಪ್ಪ ಮತ್ತಿತರರಿದ್ದರು.

ಕೊಡಗಿನ ಸಹಕಾರಿ ಸಂಘಗಳು ಅಭಿವೃದ್ಧಿಯಲ್ಲಿದ್ದರೆ ಹೊರಗಿನ ಸಂಘಗಳು ನುಂಗಣ್ಣಗಳಾಗಿವೆ

ಶಾಸಕ ಕೆ.ಜಿ.ಬೋಪಯ್ಯ ಆರೋಪ



ನಾಪೋಕ್ಲು, ಮಾ.27(ದುಗ್ಗಳ)– ಕೊಡಗಿನ ಸಹಕಾರ ಸಂಘಗಳು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಕಡಿಮೆ ಇಲ್ಲದಂತೆ ರೈತರಿಗೆ ಅಗತ್ಯ ಸಾಲ–ಸೌಲಭ್ಯ ನೀಡುತ್ತಾ ಅಭಿವೃದ್ಧಿಯತ್ತ ಸಾಗುತ್ತಿದ್ದರೆ, ಹೊರಗಿನ ಸಹಕಾರ ಸಂಘಗಳು ನುಂಗಣ್ಣಗಳಾಗಿವೆ ಎಂದು ಶಾಸಕ ಕೆಜಿ. ಬೋಪಯ್ಯ ಆರೋಪಿಸಿದರು.

ಸಮೀಪದ ಕಕ್ಕಬ್ಬೆ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಸಭಾ ಭವನ ಹಾಗೂ ಸರ್ಕಾರದ ಅನುದಾನದಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ 87 ಲಕ್ಷ ವೆಚ್ಚದ ತಡೆಗೋಡೆ ಮತ್ತು ಕಾಂಕ್ರಿಟ್ ರಸ್ತೆಯ ಕಾಮಗಾರಿ, ಇಂಟರ್‌ಲಾಕ್ ಹಾಸು ಉದ್ಘಾಟಿಸಿ ಮಾತನಾಡಿದರು.

ಕೊಡಗು ಜಿಲ್ಲೆಯ ಎಲ್ಲಾ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಹೊರಗಿನ ಸಹಕಾರ ಸಂಘಗಳು ನುಂಗಣ್ಣಗಳಾಗಿವೆ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ರೈತರಿಗೆ 3 ಲಕ್ಷ ರೂ.ವರೆಗೂ ಬಡ್ಡಿ ರಹಿತ ಸಾಲ ನೀಡಿ ಬಡವರಿಗೆ ನೆರವಾಗಿದ್ದರು. ಸದ್ಯ ಕೊಡಗಿನ ಡಿಸಿಸಿ ಬ್ಯಾಂಕ್ ರಾಜ್ಯ ದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಇದರ ಅಧ್ಯಕ್ಷ ಬಾಂಡ್ ಗಣಪತಿ ಅವರಿಗೆ 'ಸಹಕಾರ ರತ್ನ' ಪ್ರಶಸ್ತಿ ಬಂದಿರುವುದು ಸಂತೋಷ ತಂದಿದೆ. ಮುಂದೆಯೂ ಇನ್ನು ಹಲವು ಪ್ರಶಸ್ತಿ ಬರಲಿ ಎಂದು ಆಶಿಸಿದರು. ವೈದ್ಯನಾಥನ್ ವರದಿ ಬಗ್ಗೆ ಮಾತನಾಡಿದ ಶಾಸಕರು, ವರದಿಯನ್ನು ನಾವು ಒಪ್ಪಿಕೊಂಡಿದ್ದು, ಕೆಲವು ಅಧಿಕಾರಿಗಳ ಸ್ವಾರ್ಥದಿಂದ ವರದಿ ಅನುಷ್ಠಾನ ಗೊಳ್ಳಲು ತಡವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂಟರ್‌ಲಾಕ್ ಹಾಸು ಆವರಣ ಉದ್ಘಾಟಿಸಿದ ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಮಾತನಾಡಿ, ನಮ್ಮ ಸರ್ಕಾರ ಗ್ರಾಮದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಹೇಳಿದರು.

ಸಭಾಭವನವನ್ನು ಉದ್ಘಾಟಿಸಿದ ವಿಧಾನಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ ಮಾತನಾಡಿ, ಜಿಲ್ಲೆಯ ಅಭಿವೃದ್ಧಿಗೆ ನಾವೆಲ್ಲರೂ ಒಂದಾಗಿ ಹೋರಾಟ ಮಾಡಿರುವುದರಿಂದ ಇಂದು ಜಿಲ್ಲೆಯ ರಸ್ತೆಗಳು ಅಭಿವೃದ್ಧಿಯತ್ತ ಸಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸೌಲಭ್ಯ, ವಿದ್ಯುತ್ ಸೇರಿದಂತೆ ಮೂಲಸೌಕರ್ಯ ಒದಗಿಸಲು ಶ್ರಮಿಸುತ್ತಿರುವುದಾಗಿ ತಿಳಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ಉಪಾಧ್ಯಕ್ಷ ಕೇಟೋಳಿರ ಹರೀಶ್ ಪೂವಯ್ಯ, ಗ್ರಾಪಂ ಅಧ್ಯಕ್ಷ ಸಂಪನ್ನ ಅಯ್ಯಪ್ಪ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕಲಿಯಾಟಂಡ ರಘು ತಮ್ಮಯ್ಯ ವಹಿಸಿದ್ದರು. ಉಪಾಧ್ಯಕ್ಷ ಬಡಕಡ ಸುರೇಶ್ ಬೆಳ್ಯಪ್ಪ, ನಿರ್ದೇಶಕರಾದ ಅಲ್ಲಾರಂಡ ಎಸ್.ಅಯ್ಯಪ್ಪ ಸನ್ನು, ಕಲ್ಯಾಟಂಡ ಬೋಪಣ್ಣ, ನಿಡುಮಂಡ ಸಿ.ಪೂವಯ್ಯ, ಕೋಡಿಮಣಿಯಂಡ.ಎಂ, ನಾಣಯ್ಯ, ಪರದಂಡ ಪ್ರಮೀಳ, ನಂಬುಡುಮಂಡ ಸಿ.ಸುನೀತಾ, ಎ.ಎನ್.ಲಕ್ಷ್ಮಣ, ಕೋಲೆಯಂಡ ಅಶೋಕ, ಕುಡಿಯರ ಕೆ.ಗಿರೀಶ್, ಎಂ.ಡಿ.ಅಯ್ಯಪ್ಪ ಕಾರ್ಯನಿರ್ವಾಹಣಾಧಿಕಾರಿ ಎಸ್.ಮಂಜುಳಾ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮಹನೀಯರ ಜಯಂತಿ ಜಾತಿಗೆ ಸೀಮಿತವಾಗಬಾರದು



ಮಡಿಕೇರಿ ಮಾ.27– ದಾರ್ಶನಿಕರ ಜಯಂತಿಗಳ ಆಚರಣೆ ಕೇವಲ ಆಯಾ ಜಾತಿಗಳಿಗೆ ಸೀಮಿತವಾಗಬಾರದು, ಪ್ರತಿಯೊಂದು ಸಮುದಾಯದವರು ಸೇರಿ ಆಚರಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಕರೆ ನೀಡಿದ್ದಾರೆ.

ಕೊಡಗು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಡಗು ಜಿಲ್ಲಾ ಬಲಿಜ ಸಮಾಜ ಹಾಗೂ ಮಡಿಕೇರಿ ತಾಲೂಕು ಬಲಿಜ ಸಮಾಜದ ಸಂಯುಕ್ತಾಶ್ರಯದಲ್ಲಿ ಮಡಿಕೇರಿಯ ಪತ್ರಿಕಾ ಭವನದಲ್ಲಿ ನಡೆದ ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ 296ನೇ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಸಮುದಾಯದವರು ಒಗ್ಗೂಡಿ ದಾರ್ಶನಿಕರ ಜಯಂತಿಗಳನ್ನು ಆಚರಿಸುವ ಮೂಲಕ ಅವರ ಆದರ್ಶಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಬಲಿಜ ಸಮಾಜದ ಪ್ರಮುಖ ಹಾಗೂ ಹಿರಿಯ ಚಿಂತಕ ಟಿ.ಪಿ.ರಮೇಶ್ ಮಾತನಾಡಿ, ಪ್ರಸ್ತುತ ಬಲಿಜ ಸಮಾಜವನ್ನು '2ಎ' ವ್ಯಾಪ್ತಿಗೆ ಸೇರಿಸಿ ಅಗತ್ಯ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿದರು. ಮಡಿಕೇರಿ ತಾಲೂಕು ಬಲಿಜ ಸಮಾಜದ ಅಧ್ಯಕ್ಷೆ ಮೀನಾಕ್ಷಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ ಕುರಿತು ಶಿಕ್ಷಕಿ ಟಿ.ಎಲ್.ಸುಮಾ ಅರಿವು ಮೂಡಿಸಿದರು.

ಸಂಬಾರ ಮಂಡಳಿಯ ನಿವೃತ್ತ ಅಧಿಕಾರಿ ತೋಟಪನಿ, ನಗರಸಭಾ ಮಾಜಿ ಸದಸ್ಯ ಟಿ.ಹೆಚ್. ಉದಯ ಕುಮಾರ್, ಸಮಾಜದ ಸಂಘಟನಾ ಕಾರ್ಯದರ್ಶಿ ನಾಗೇಶ್ ನಾಯ್ಡು, ನಿರ್ದೇಶಕರಾದ ಟಿ.ಎಸ್.ವೆಂಕಟೇಶ್, ಪದ್ಮಾವತಿ ಮನುಕುಮಾರ್, ಟಿ.ವಿ.ಸಂಜಯ್, ಟಿ.ಆರ್.ಯಶವಂತ್, ಎಸ್.ಆರ್.ಜ್ಯೋತಿ ಸುಬ್ರಮಣಿ, ಕುಶಾಲನಗರ ಅಭಿವೃದ್ಧಿ ಪ್ರಾಧಿಕಾರದ ಯೋಜನಾಧಿಕಾರಿ ಟಿ.ಎನ್.ಪ್ರವೀಣ್, ವಾರ್ತಾ ಇಲಾಖೆಯ ಅಧಿಕಾರಿ ಮಂಜುನಾಥ್, ಅಂಗನವಾಡಿ ಕಾರ್ಯಕರ್ತೆ ಆಶಾಲತಾ ಹಾಗೂ ಬಲಿಜ ಸಮಾಜದ ಬಂಧುಗಳು ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಶ್ರೀ ಮುತ್ತಪ್ಪ, ತಿರುವಪ್ಪನ ಕೋಲ



ವಿರಾಜಪೇಟೆ, ಮಾ.27–ವಿರಾಜಪೇಟೆಯ ಅರಸುನಗರದ ಶ್ರೀ ಮುತ್ತಪ್ಪ ಹಾಗೂ ತಿರುವಪ್ಪನ(ಕೋಲ) ತೆರೆ ಮಹೋತ್ಸವವು ಎರಡು ದಿನಗಳ ಕಾಲ ವಿಜೃಂಭಣೆಯಿಂದ ಜರುಗಿತು. ಶನಿವಾರ ಸಂಜೆ 6.30ಕ್ಕೆ ಮುತ್ತಪ್ಪನ ವೆಳ್ಳಾಟದೊಂದಿಗೆ ಪ್ರಾರಂಭಗೊಂಡು ನಂತರ ಗುಳಿಗನ ವೆಳ್ಳಾಟ ನಡೆದು ಭಾನುವಾರ ಮುಂಜಾನೆ 3.30ಕ್ಕೆ ಗುಳಿಗನ ತೆರೆ ನಂತರ ಮುತ್ತಪ್ಪ ಹಾಗೂ ತಿರುವಪ್ಪನ ಕೋಲ ನಡೆಯಿತು. ಇದಕ್ಕೂ ಮೊದಲು ಸಭಾ ಕಾರ್ಯಕ್ರಮ ಜರುಗಿತು. ಸ್ಥಳೀಯ ಜ್ಯೋತಿಷಿ ದಿವಾಕರ್ ಭಟ್ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತ ಮಂಡಳಿ ಸದಾನಂದ, ಪ್ರದೀಪ್, ಹರೀಶ್ ಗುರು, ಕಸ್ತೂರಿ, ಧರ್ಮಸ್ಥಳ ಗ್ರಾಮಭಿವೃದ್ಧಿಯ ಶ್ರೇಯಾ, ಪಪಂ ಮಾಜಿ ಸದಸ್ಯೆ ಶೋಭಾ ಹಾಗೂ ಇತರರು ಉಪಸ್ಥಿತರಿದ್ದರು.

ಪಡ್ನಾ-ಲಿಖ್ನಾ ಅಭಿಯಾನದಲ್ಲಿ ಭಾರೀ ಗೋಲ್ಮಾಲ್

ವಯಸ್ಕರ ಬದಲು ಪರೀಕ್ಷೆ ಬರೆದ್ರು ಶಾಲಾ ಮಕ್ಕಳು!



ಮುಖ್ಯ ಅಡುಗೆಯವರುಮೂಲ ಸಾಕ್ಷರ ಪರೀಕ್ಷೆ ಬರೆಯುತ್ತಿರುವುದು.

ಕೊಳ್ಳೇಗಾಲ, ಮಾ.27(ನಾಗೇಂದ್ರಸ್ವಾಮಿ)– ಸಾಕ್ಷರತೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಪಡ್ನಾ–ಲಿಖ್ನಾ ಅಭಿಯಾನದಡಿ ಭಾನುವಾರ ನಡೆದ ಪರೀಕ್ಷೆಯಲ್ಲಿ ಭಾರೀ ಗೋಲ್ಮಾಲ್ ನಡೆದಿದ್ದು, ಜಿಲ್ಲಾ ಸಾಕ್ಷರ ಇಲಾಖೆ ಜಿಲ್ಲೆಯ ಹನೂರು, ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಯಳಂದೂರು ಸೇರಿದಂತೆ ಹಲವೆಡೆ ಪರೀಕ್ಷಾ ನಿಯಮ ಮೀರಿ ಮಕ್ಕಳಿಂದ ಹಾಗೂ ಬೇರೆಯರಿಂದ ಪರೀಕ್ಷೆ ಬರೆಸಿ ವಿವಾದಕ್ಕೀಡಾಗಿದೆ.

ಹನೂರು ತಾಲೂಕಿನ ಹಲವೆಡೆ ಹಾಗೂ ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರ ಹೊರತುಪಡಿಸಿ ಉಳಿದ ಬಹುತೇಕ ಕಡೆಗಳಲ್ಲಿ ಯುವಕರು, ಶಾಲಾ ವಿದ್ಯಾರ್ಥಿಗಳಿಂದ ಪರೀಕ್ಷೆ ಬರೆಸುವ ಮೂಲಕ ಸಾಕ್ಷರತಾ ಇಲಾಖೆ ನಾನಾ ಸಂಶಯಗಳನ್ನು ಹುಟ್ಟು ಹಾಕಿದೆ. ಜೊತೆಗೆ, ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ ಎಂದು ರಾಜ್ಯದೆಲ್ಲೆಡೆ ಲಕ್ಷಾಂತರ ಮಂದಿಯ ನಕಲಿಪಟ್ಟಿ ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಸಲಾಗಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ.

ಪಡ್ನಾ ಲಿಖ್ನಾ ಗೋಲ್‌ಮಾಲ್: ದೇಶದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಳಕ್ಕೆ ಕೇಂದ್ರ ಸರ್ಕಾರದಿಂದ ಪಡ್ನಾ ಲಿಖ್ನಾ ಅಭಿಯಾನ ನಡೆಸಲಾಗಿದೆ. ಈ ಅಭಿಯಾನದಡಿ ಅಕ್ಷರಭ್ಯಾಸ ಮಾಡಿದವರಿಗೆ ಅವರ ಕಲಿಕಾ ಸಾಮರ್ಥ್ಯ ಅರಿಯಲು ಇಂದು ದೇಶಾದ್ಯಂತ ಕಲಿಕಾ ಸಾಧನಾ ಪರೀಕ್ಷೆ ನಡೆಸಲಾಗಿದೆ ಅದರಂತೆ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಭಾನುವಾರ 130 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪರೀಕ್ಷೆ ನಡೆಸಲಾಗಿದೆ. ಆದರೆ, ಜಿಲ್ಲೆಯ ಬಹುತೇಕ ಕಡೆಗೆ ಅಕ್ಷರಾಭ್ಯಾಸ ಮಾಡಿಸಲಾದ ಅನಕ್ಷರಸ್ಥರ ಬದಲು ಶಾಲಾ ಮಕ್ಕಳನ್ನು ಕರೆತಂದು ಪರೀಕ್ಷೆ ಬರೆಸಲಾಗಿದೆ. ಅಕ್ಷರ ಕಲಿಸದೇ ಇದ್ದರೂ ಕಲಿಸಲಾಗಿದೆ ಎಂದು ದಾಖಲೆ ಸೃಷ್ಟಿಸಿ ಅವರ ಹೆಸರಿನಲ್ಲಿ ಪರೀಕ್ಷೆ ಬರೆಸಲಾಗಿದೆ. ಒಲ್ಲದ ಮನಸ್ಸಿನಿಂದಲೇ ಶಿಕ್ಷಕರು ಈ ಪರೀಕ್ಷೆ ನಡೆಸಿದ್ದಾರೆ.

ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ರು: ಕೊಳ್ಳೇಗಾಲ ತಾಲೂಕಿನ ಹಲವೆಡೆ ಮಕ್ಕಳೇ ಪರೀಕ್ಷೆ ಬರೆಯುವಾಗ ಮಾಧ್ಯಮಗಳ ಕ್ಯಾಮೆರ ಕಣ್ಣಿಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದು, ನಡೆದಿರುವ ಅಕ್ರಮಗಳಿಗೆ ಸಾಕ್ಷಿಯಾಗಿದೆ. ಕ್ಯಾಮೆರಾ ಕಂಡೊಡನೆ ಮಕ್ಕಳು ಎದ್ದೆನೋ ಬಿದ್ದೆನೋ ಎಂಬಂತೆ ಓಡಿಹೋಗಿದ್ದಾರೆ. ಮತ್ತೆ ಕೆಲವು ಕಡೆ ಅಡುಗೆ ಸಿಬ್ಬಂದಿಯಿಂದ ವಿದ್ಯಾವಂತ ಯುವಕರಿಂದ ಪರೀಕ್ಷೆ ಬರೆಸಲಾಗಿದೆ. ಮತ್ತೆ ಕೆಲವು ಪರೀಕ್ಷಾ ಕೇಂದ್ರಗಳಿಗೆ ಮಧ್ಯಾಹ್ನವಾದರೂ ಪ್ರಶ್ನೆ ಪತ್ರಿಕೆಗಳನ್ನೇ ಸರಬರಾಜು ಮಾಡದಿರುವುದು ಕಂಡು ಬಂದಿದೆ.

ವಾಟ್ಸಾಪ್ ಗ್ರೂಪ್‌ನಲ್ಲಿ ಅಧ್ವಾನ ಬೆಳಕಿಗೆ: ತಾಲೂಕಿನ ಕಟ್ನವಾಡಿಯಲ್ಲಿ 4 ಗಂಟೆಯಾದರೂ ಪ್ರಶ್ನೆ ಪತ್ರಿಕೆ ಬಂದಿರಲಿಲ್ಲ ಎಂದು ಪರೀಕ್ಷೆ ಸಿಬ್ಬಂದಿಗಳೇ ಗ್ರೂಪ್‌ನಲ್ಲಿ ಚರ್ಚಿಸಿರುವುದು ಬೆಳಕಿಗೆ ಬಂದಿದೆ. ಕೊಳ್ಳೇಗಾಲ ತಾಲೂಕಿನ ಕುಂತೂರುಮೋಳೆಯಲ್ಲಿ 10 ಗಂಟೆಯಾದರೂ ನಾಮಿನಲ್ ರೋಲ್ (ಪರೀಕ್ಷಾರ್ಥಿಗಳ ವಿವರ) ಬಂದಿಲ್ಲ ಎಂದು ಚರ್ಚಿಸಲಾಗಿದೆ. ಕೃಷ್ಣಾಪುರದಲ್ಲೂ ಸಹಾ ನಾಮಿನಲ್ ರೋಲ್ ಬಂದಿಲ್ಲ ಎಂದು ಪರೀಕ್ಷಾ ಸಿಬ್ಬಂದಿಗಳೇ ವರದಿ ಸಲ್ಲಿಸಿರುವುದು, ಯಾವುದೇ ತಯಾರಿ ಇಲ್ಲದೇ ತರಾತುರಿಯಲ್ಲಿ ಪರೀಕ್ಷೆ ನಡೆಸಿದರೆ ಎಂತಹ ಅಧ್ವಾನವಾಗಲಿದೆ ಎಂಬುದಕ್ಕೆ ಈ ಪರೀಕ್ಷೆಯ ಕನ್ನಡಿಯಾಗಿದೆ ಎಂದು ಕೆಲವು ಶಿಕ್ಷಕರೇ ಚರ್ಚಿಸಿರುವುದು ಬೆಳಕಿಗೆ ಬಂದಿದೆ.

3 ಪಾಳಿಯಲ್ಲಿ ಪರೀಕ್ಷೆ: ಜಿಲ್ಲೆಯಲ್ಲಿ 2020–21ನೇ ಸಾಲಿನ ಪಡ್ನಾ–ಲಿಖ್ನಾ ಸಾಕ್ಷರತಾ ಕಾರ್ಯಕ್ರಮದಡಿ ಓದು ಬರಹ ಕಲಿತ ವಯಸ್ಕರಿಗೆ ಭಾನುವಾರ ಪರೀಕ್ಷೆ ಆಯೋಜಿಸಲಾಗಿತ್ತು. ಅದರಂತೆಯೇ ಬೆಳಗ್ಗೆ 8.30 ರಿಂದ 10.30, 11.30ರಿಂದ ಮಧ್ಯಾಹ್ನ 1.30 ಹಾಗೂ ಮಧ್ಯಾಹ್ನ 3.30ರಿಂದ 5.30ರವರೆಗೆ 3 ಪಾಳಿಯಲ್ಲಿ ಪರೀಕ್ಷೆ ನಡೆದಿದೆ. ಇದರಲ್ಲಿ ವಿದ್ಯಾವಂತರು, ಓದು ಬರಹಬಲ್ಲ ಸ್ಥಳೀಯರು ಪರೀಕ್ಷೆಗೆ ಹಾಜರಾಗಿದ್ದು ಅಚ್ಚರಿಯಾಗಿದೆ.

3ವರ್ಷದಿಂದ ಪ್ರೇರಕರು, ಕಲಿಕಾ ಕ್ರಮ ನಡೆಸಿಲ್ಲ!: ಲೋಕ ಶಿಕ್ಷಣ ಸಮಿತಿಯಿಂದ ವಯಸ್ಕ ಶಿಕ್ಷಣ ಕಾರ್ಯಕ್ರಮದಡಿ ಅನಕ್ಷರಸ್ಥರಿಗೆ ಅಕ್ಷರ ಕಲಿಸಲು ಮಹತ್ವಾಕಾಂಕ್ಷೆಯ ಈ ಯೋಜನೆ ಜಾರಿಯಾಗಿದೆ. ಆದರೆ, ಅದನ್ನು 3 ವರ್ಷಗಳಿಂದ ಸಮರ್ಪಕವಾಗಿ ನಡೆಸಿಲ್ಲ. ಹಲವು ವರ್ಷಗಳ ಹಿಂದೆ ಸಂಜೆ ತರಗತಿ, ಕಲಿಕಾ ಕ್ರಮಗಳು ನಡೆಯುತ್ತಿದ್ದವು. ಬಳಿಕ ಕೊರೊನಾ ಹಿನ್ನಲೆ ಒಂದಷ್ಟು ಕಾಲ ಸ್ಥಗಿತವಾಗಿತ್ತು. ಬಳಿಕ ಗ್ರಾಮ ಮಟ್ಟದಲ್ಲಿ ಜವಾಬ್ದಾರಿ ಹೊತ್ತವರು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

> ಪರೀಕ್ಷಾ ಕೇಂದ್ರಗಳಲ್ಲಿ ಮಧ್ಯಾಹ್ನವಾದರೂ ಪ್ರಶ್ನೆ ಪತ್ರಿಕೆ ಬಂದಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಯಾರಿಗೂ ನಾನು ಕರೆ ಮಾಡಿ ಮಕ್ಕಳಿಂದ ಪರೀಕ್ಷೆ ಬರೆಸಿ ಎಂದು ಹೇಳಿಲ್ಲ. ಶಾಗ್ಯದಲ್ಲಿ ಅಡುಗೆ ಸಿಬ್ಬಂದಿ ಹಾಗೂ ಕೆಲ ಕಡೆ ಮಕ್ಕಳು ಪರೀಕ್ಷೆ ಬರೆದ ವಿಚಾರಕ್ಕೆ ಸಂಬಂಧಿಸಿದಂತೆ ಡಯಟ್ ಪ್ರಾಂಶುಪಾಲರನ್ನು ಕೇಳಿ ಪ್ರತಿಕ್ರಿಯೆ ನೀಡುವೆ
>
> - ಪ್ರಕಾಶ್, ಜಿಲ್ಲಾ ಸಾಕ್ಷರತಾ ಕಾರ್ಯಕ್ರಮಾಧಿಕಾರಿ.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಜಿಲ್ಲೆಯಲ್ಲಿ ಸಕಲ ಸಿದ್ಧತೆ

ಚಾಮರಾಜನಗರ, ಮಾ.27– ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾ. 28ರಿಂದ ಏ. 11ರವರೆಗೆ ನಡೆಯಲಿದ್ದು, ಜಿಲ್ಲೆಯಲ್ಲಿ ಇದಕ್ಕಾಗಿ ಎಲ್ಲಾ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ 6304 ಬಾಲಕರು, 5967 ಬಾಲಕಿಯರು ಸೇರಿದಂತೆ ಒಟ್ಟು 12271 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಚಾಮರಾಜನಗರ ತಾಲೂಕಿನಲ್ಲಿ 4098 ವಿದ್ಯಾರ್ಥಿಗಳು, ಗುಂಡ್ಲುಪೇಟೆ 2617 ವಿದ್ಯಾರ್ಥಿಗಳು, ಹನೂರು 2293 ವಿದ್ಯಾರ್ಥಿಗಳು, ಕೊಳ್ಳೇಗಾಲ 2232 ವಿದ್ಯಾರ್ಥಿಗಳು, ಯಳಂದೂರು 1031 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಒಟ್ಟು 58 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಸರಬರಾಜು ಮಾಡಲು 21 ಮಾರ್ಗಗಳನ್ನು ಒಳಗೊಂಡ ಮಾರ್ಗ ನಕ್ಷೆಯನ್ನು ತಯಾರಿಸಲಾಗಿದೆ. ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಅಭಿರಕ್ಷಕರನ್ನು ನೇಮಕ ಮಾಡಲಾಗಿದೆ.

ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ತಮ್ಮ ಪ್ರವೇಶ ಪತ್ರವನ್ನು ತೋರಿಸಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಎಲ್ಲಾ ಮಕ್ಕಳು ನಿರ್ಭಯವಾಗಿ, ಆತ್ಮವಿಶ್ವಾಸದಿಂದ ಪರೀಕ್ಷೆಗೆ ಹಾಜರಾಗಿ ಉತ್ತಮ ಫಲಿತಾಂಶ ಪಡೆಯುವಂತೆ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಪ್ರಕಟಣೆಯಲ್ಲಿ ಶುಭ ಕೋರಿದ್ದಾರೆ.

ಸೇತುವೆಗಳ ಮೇಲ್ದರ್ಜೆಯಿಂದ ಸಾರ್ವಜನಿಕರಿಗೆ ಅನುಕೂಲ



ಹನೂರು, ಮಾ.27(ಸೋಮು)– ಪಟ್ಟಣದ ಸುತ್ತಮುತ್ತ ಹಾಗೂ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿರುವ ಸೇತುವೆಗಳನ್ನು ಮೇಲ್ದರ್ಜೆಗೇರಿಸುತ್ತಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಶಾಸಕ ಆರ್.ನರೇಂದ್ರ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಹೊರವಲಯದ ಹನೂರು–ಬಂಡಳ್ಳಿ ಮುಖ್ಯ ರಸ್ತೆ ಹಾಗೂ ಹನೂರು ಲೊಕ್ಕನಹಳ್ಳಿ ಮುಖ್ಯ ರಸ್ತೆಯಲ್ಲಿರುವ ತಟ್ಟೆಹಳ್ಳ ಹಾಗೂ ಸ್ವಾಮಿ ಹಳ್ಳಕ್ಕೆ 3 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಮಳೆಗಾಲದ ಸಂದರ್ಭದಲ್ಲಿ ಹನೂರು ಬಂಡಳ್ಳಿ ಮುಖ್ಯ ರಸ್ತೆ ಸೇರಿದಂತೆ ಇನ್ನಿತರೆಡೆ ಹಳ್ಳದ ನೀರು ಹೆಚ್ಚಾಗಿ ಹರಿಯುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಗುತ್ತಿತ್ತು. ಗಂಟೆಗಟ್ಟಲೆ ಕಾದು ನಂತರ ತೆರಳಬೇಕಾದ ದುಸ್ಥಿತಿ ನಿರ್ಮಾಣವಾಗಿತ್ತು ಇದನ್ನು ಮನಗಂಡು ಕಳೆದ 4 ವರ್ಷಗಳಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಸರ್ಕಾರ ಇತ್ತೀಚೆಗೆ ಅನುದಾನವನ್ನು ಬಿಡುಗಡೆ ಮಾಡಿದ್ದು ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದರು.

ಕೆ.ಶಿಪ್ ರಸ್ತೆ ಕಾಮಗಾರಿ ಸಹ ನಡೆಯುತ್ತಿದ್ದು, ಕೊಳ್ಳೇಗಾಲ ಹನೂರು ಮುಖ್ಯರಸ್ತೆಯಲ್ಲಿ ಪಟ್ಟಣವನ್ನು ಸಂಪರ್ಕಿಸಲಿರುವ ಕೊಳ್ಳೇಗಾಲ–ಹನೂರು ಮುಖ್ಯರಸ್ತೆಯಲ್ಲಿರುವ ಸ್ವಾಮಿ ಹಳ್ಳ ಹಾಗೂ ತಟ್ಟೆ ಹಳ್ಳಕ್ಕೆ ಉತ್ತಮ ದರ್ಜೆಯ ಸೇತುವೆ ನಿರ್ಮಾಣವಾಗುತ್ತಿದೆ. ಕ್ಷೇತ್ರ ವ್ಯಾಪ್ತಿಯ ಜಡೆ– ತಡೆ ಹಳ್ಳ, ಮಸ್ಕಿತಿ ಹಳ್ಳ ಸೇತುವೆ ಕಾಮಗಾರಿಗಳಿಗೆ ಟೆಂಡರ್ ಆಗಿದೆ ಪಟ್ಟಣದ ಚಲುವನಾರಾಯಣ ಸ್ವಾಮಿ ದೇವಸ್ಥಾನದ ಹತ್ತಿರ ಸೇತುವೆ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಇತ್ತೀಚೆಗೆ ಸಂಭವಿಸಿದ ಕೆಎಸ್‌ಆರ್‌ಟಿಸಿ ಬಸ್ ಅಪಘಾತದಿಂದ ಹಳ್ಳಕ್ಕೆ ತಡೆಗೋಡೆ ಮತ್ತು ನೇರ ರಸ್ತೆ ನಿರ್ಮಾಣ ಸಂಬಂಧ ಪಿಡಬ್ಲ್ಯೂಡಿ ಇಲಾಖೆ ಸಚಿವರ ಗಮನವನ್ನು ಸದನದಲ್ಲಿ ಶೂನ್ಯ ವೇಳೆ ಸೆಳೆದಿದ್ದೇನೆ. ಈ ಸಂಬಂಧ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಒಟ್ಟಾರೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಶೀಘ್ರದಲ್ಲಿ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದರು.

ಈ ವೇಳೆ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಗಿರೀಶ್‌ಕುಮಾರ್, ಸದಸ್ಯ ಸಂಪತ್ ಕುಮಾರ್, ಸುದೇಶ್ ಸೇರಿದಂತೆ ಮುಖಂಡರು, ಸಾರ್ವಜನಿಕರು ಇದ್ದರು.

ಸತಿಪತಿಗಳು 2 ದೇಹ ಒಂದು ಮನಸ್ಸು ಎಂಬಂತೆ ಜೀವನ ನಡೆಸಿ

● ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ ● ಹೊಸ ಜೀವನಕ್ಕೆ ಕಾಲಿಟ್ಟ 7 ಜೋಡಿ



ಸರಗೂರು, ಮಾ.27(ನಾಗೇಶ್)– ಸತಿಪತಿಗಳು 2 ದೇಹ ಒಂದು ಮನಸ್ಸು ಎಂಬಂತೆ ಜೀವನ ನಡೆಸಿದರೆ ಮಾತ್ರ ಸುಗಮ ಜೀವನ ಸಾಗಿಸಲು ಸಾಧ್ಯ. ಈ ನಿಟ್ಟಿನಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ವಧು–ವರರು ಕಾರ್ಯ ಪ್ರವೃತ್ತರಾಗುವಂತೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ ನೀಡಿದರು.

ಪಟ್ಟಣದ ಬಿಡುಗಲು ಪಡುವಲು ಶ್ರೀವಿರಕ್ತ ಮಠದಲ್ಲಿ ಭಾನುವಾರ ನಡೆದ ವೀರಶೈವ ಲಿಂಗಾಯತ ವಧೂ–ವರರ ಉಚಿತ ಸಾಮೂಹಿಕ ವಿವಾಹ ಹಾಗೂ ಶ್ರೀವೀರಭದ್ರೇಶ್ವರ ದೇವಸ್ಥಾನದ ಪ್ರವೇಶೋತ್ಸವ ಮತ್ತು ವಿಗ್ರಹ ಪ್ರತಿಷ್ಠಾಪನೆ ಮತ್ತು ಧಾರ್ಮಿಕ ಸಭೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಬರುವ ಕಷ್ಟ ಸುಖಗಳನ್ನು ಸಮಾನವಾಗಿ ಸ್ವೀಕರಿಸುವ ಮೂಲಕ ಅನ್ಯೋನ್ಯವಾಗಿ ಇರಬೇಕು. ಸಂಸಾರಕ್ಕೆ ಯಾವುದೇ ಅಡ್ಡಿಯಾಗದಂತೆ ಎಚ್ಚರಿಕೆ ವಹಿಸಿ ಜೀವನ ಸಾಗಿಸಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಸಾಮೂಹಿಕ ವಿವಾಹದಿಂದ ಆರ್ಥಿಕ ಮುಗ್ಗಟ್ಟು ಸುಧಾರಿಸಲಿದ್ದು, ನವ ದಂಪತಿಗಳು ಉತ್ತಮ ಜೀವನ ಕಟ್ಟಿಕೊಳ್ಳಬಹುದು ಎಂದ ಅವರು, ಸುತ್ತೂರು ಶ್ರೀಗಳು ಜಾತಿ ಮತ ಭೇದವಿಲ್ಲದೇ ಬಡ ಮಕ್ಕಳಿಗೆ ಅನ್ನ, ವಿದ್ಯಾ, ವಸತಿ ದಾಸೋಹ ನೀಡುತ್ತಿದ್ದಾರೆ. ಹಾಗೇಯೇ ಇಲ್ಲಿನ ಪಡವಲು ಮಠದ ಮಹದೇವಸ್ವಾಮೀಜಿ ಕೂಡ ಕಳೆದ 6 ವರ್ಷಗಳಿಂದ ಸಾಮೂಹಿಕ ವಿವಾಹ, ಹುಣ್ಣಿಮೆ ಪೂಜೆ ಸೇರಿದಂತೆ ಅನೇಕ ಕಾರ್ಯಕ್ರಮ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.

ಸಮಾಜ ಸೇವಕ ಯು.ಎಸ್.ಶೇಖರ್ ಮಾತನಾಡಿ, ಭಕ್ತರಿಗಾಗಿ ಶ್ರೀವೀರಭದ್ರೇಶ್ವರ ದೇವಾಲಯವನ್ನು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ್ದೇನೆ. ಭಗವಂತ ಕೊಟ್ಟಿರುವುದರಲ್ಲಿ ಅಲ್ಪ ಪ್ರಮಾಣವನ್ನು ಭಗವಂತನಿಗೆ ನೀಡಿದ್ದೇನೆ ಎಂದರು.

ಇದೇ ವೇಳೆ ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ ಧ್ವಜಾರೋಹಣ ಮಾಡಿದರು. ನೀಲಕಂಠಸ್ವಾಮಿ ಮಠದ ಸಿದ್ಧಮಲ್ಲ ಸ್ವಾಮೀಜಿ ಕಳಶಾರೋಹಣ ನೆರವೇರಿಸಿದರು. ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ ಧರ್ಮ ಸಂದೇಶ ಸಾರಿದರು. ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ, ಮಾದಹಳ್ಳಿ ಮಠದ ಸಾಂಬಸದಾಶಿವ ಸ್ವಾಮೀಜಿ ಆಶೀರ್ವಚನ ನೀಡಿದರು. ಇದೇ ಸಂದರ್ಭ ವೀರಭದ್ರೇಶ್ವರ ದೇವಸ್ಥಾನದ ನಿರ್ಮಾತೃ ಶರಣೆ ಮಹದೇವಮ್ಮ, ಯು.ಎಸ್.ಶೇಖರ್ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಮಠಾಧೀಶರಿಂದ ದಾಂಪತ್ಯ ಜೀವನಕ್ಕೆ ಕಾಲಿಟ್ಟ 7 ಜೋಡಿ ನವ ವಧು–ವರರಿಗೆ ಮಾಂಗಲ್ಯ ವಿತರಣೆ ನಡೆಯಿತು. ಇದಕ್ಕೂ ಮುನ್ನಾ ವೀರಭದ್ರೇಶ್ವರ ಆಲಯ ಪ್ರವೇಶ, ವಿವಿಧ ಭಜನಾ ತಂಡಗಳಿಂದ ಭಜನೆ, ಗಂಗಾಪೂಜೆ, ಹೋಮ ಹವನಗಳು ನಡೆದವು. ನಂತರ ಲಿಂಗದೀಕ್ಷಾ ಕಾರ್ಯಕ್ರಮ ಜರುಗಿತು. ನಂತರ ವಿಗ್ರಹ ಪ್ರತಿಷ್ಠಾಪನೆ, ಶ್ರೀಕಾಳ ಒಡೆಯ ಗುರುಗಳ ಗದ್ದಿಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ ನಡೆಯಿತು.

ಈ ವೇಳೆ ಎಂಎಲ್‌ಸಿಗಳಾದ ಆಯನೂರು ಮಂಜುನಾಥ್, ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ, ಜೆಡಿಎಸ್ ಮುಖಂಡ ಜಯಪ್ರಕಾಶ್, ಕಾಂಗ್ರೆಸ್ ಮುಖಂಡ ಗಣೇಶ್ ಪ್ರಸಾದ್, ಪಪಂ ಅಧ್ಯಕ್ಷೆ ರಾಧಿಕಾ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜು, ಎಸ್.ಎನ್.ಮೋಹನ್ ಕುಮಾರ್, ಶ್ರೀಕಂಠಸ್ವಾಮಿ, ಬಿಡಗಲು ಪಾಪಣ್ಣ, ಮಾದಪ್ಪ, ಸುನಂದರಾಜು, ಬಸವರಾಜಪ್ಪ, ಗಣಪತಿ, ಚಿಕ್ಕವೀರನಾಯಕ, ಮಹೇಂದ್ರ ಪಟ್ಟಣ ಪಂಚಾಯಿತಿ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಶಿವಕುಮಾರ್ ಸೇರಿದಂತೆ ವಿವಿಧ ಮಠಾಧೀಶರು, ವೀರಶೈವ ಸಮಾಜದ ಮುಖಂಡರು ಹಾಜರಿದ್ದರು.

ಇದೇ ವೇಳೆ 7 ಜೊತೆ ನವ ವಧು–ವರರು ನವ ಜೀವನಕ್ಕೆ ಕಾಲಿಟ್ಟರು, ಇದಕ್ಕೂ ಮುನ್ನ ಶ್ರೀಕಾಳ ಒಡೆಯ ಗುರುಗಳ ಗದ್ದುಗೆ ಹಾಗೂ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಯಿತು. ಎಲ್ಲಾ ಭಕ್ತರಿಗೆ ಅನ್ನದಾಸೋಹ ಏರ್ಪಡಿಸಲಾಗಿತ್ತು

ನಂ.ಗೂಡು ಗಾಣಿಗರ ಸಂಘದ ಅಧ್ಯಕ್ಷ, ಕಾರ್ಯಾಧ್ಯಕ್ಷರ ಅವಿರೋಧ ಆಯ್ಕೆ



ನಂಜನಗೂಡು, ಮಾ.27– ತಾಲೂಕಿನ ಗಾಣಿಗರ ಸಂಘದ ಅಧ್ಯಕ್ಷರಾಗಿ ಎಂ.ಬಿ. ಬಸವರಾಜು, ಕಾರ್ಯಾಧ್ಯಕ್ಷರಾಗಿ ಉಮೇಶ್‌ಮೋದಿ ಅವಿರೋಧವಾಗಿ ಆಯ್ಕೆಯಾದರು.

ನಗರದ ಗಾಣಿಗರ ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಅಧ್ಯಕ್ಷ, ಕಾರ್ಯಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷ ಎಂ.ಬಿ. ಬಸವರಾಜು ಮಾತನಾಡಿ, ಗಾಣಿಗ ಸಮಾಜ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದ ಸಮಾಜವಾಗಿದೆ. ನಮ್ಮ ಸಮುದಾಯದ ಉತ್ತೇಜನಕ್ಕಾಗಿ ಸರ್ಕಾರಗಳು ಯಾವುದೇ ಕಾರ್ಯಕ್ರಮ ಜಾರಿಗೊಳಿಸದೆ ಕಡೆಗಣಿಸಿದೆ. ಆದ್ದರಿಂದ ಸಮುದಾಯದ ಏಳಿಗೆಗಾಗಿ ಸರ್ಕಾರದ ಸವಲತ್ತುಗಳನ್ನು ಪಡೆಯುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತನಾಗುತ್ತೇನೆ. ಜೊತೆಗೆ ತಾಲೂಕಿನಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದ ಗಮನ ಸೆಳೆಯುವುದಲ್ಲದೆ ಸಮುದಾಯದ ಶೈಕ್ಷಣಿಕ ಮಟ್ಟ ಹೆಚ್ಚಳಕ್ಕೆ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ನಿಕಟಪೂರ್ವ ಅಧ್ಯಕ್ಷ ನಂಜಪ್ಪಶೆಟ್ಟಿ, ಹೆಚ್.ಎಂ.ಶಂಕರ್, ಮಾದಶೆಟ್ಟಿ, ವೆಂಕಟೇಶ್, ಆರ್.ಮಹೇಶ್, ಗೋಪಾಲ್, ಚಿಕ್ಕಸ್ವಾಮಿ, ಸಿದ್ದೇಶ್, ಕುಮಾರ್ ಸೇರಿದಂತೆ ಸಮುದಾಯದ ಮುಖಂಡರಿದ್ದರು.

ತಿ.ನರಸೀಪುರ ವಕೀಲರ ಸಂಘಕ್ಕೆ ಪಾಲಾಕ್ಷಮೂರ್ತಿ ಅಧ್ಯಕ್ಷ



ತಿ.ನರಸೀಪುರ, ಮಾ.27 (ಎಸ್‌ಕೆ)– ತಿ.ನರಸೀಪುರ ವಕೀಲರ ಸಂಘದ ಅಧ್ಯಕ್ಷ ರಾಗಿ ಕೆ.ಜಿ.ಪಾಲಾಕ್ಷಮೂರ್ತಿ ಆಯ್ಕೆಯಾಗಿದ್ದಾರೆ.

ವಕೀಲರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಜಿ.ಪಾಲಾಕ್ಷ ಮೂರ್ತಿ, ಪಿ.ಸತೀಶ್ ಹಾಗೂ ಎಸ್.ಜಗದೀಶ್ ಉಮೇದುವಾರಿಕೆ ಪತ್ರ ಸಲ್ಲಿಸಿದರು. ನಂತರ ನಡೆದ ಮತದಾನದಲ್ಲಿ 113 ವಕೀಲರು ಮತ ಚಲಾಯಿಸಿದರು. ಮತಗಳ ಎಣಿಕೆ ಕಾರ್ಯ ನಡೆಸಲಾಗಿ ಕೆ.ಜಿ.ಪಾಲಾಕ್ಷ ಮೂರ್ತಿ 61 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಗೊಂಡರು. ಸಮೀಪದ ಪ್ರತಿಸ್ಪರ್ಧಿ ಪಿ.ಸತೀಶ್ 36 ಹಾಗೂ ಎಸ್.ಜಗದೀಶ್ 16 ಮತಗಳನ್ನು ಪಡೆದು ಪರಾಭವಗೊಂಡರು.

ಕಾರ್ಯದರ್ಶಿ ಸ್ಥಾನಕ್ಕೆ ಎನ್.ಸಿದ್ದರಾಜು, ಕೆ.ಸೋಮಣ್ಣ, ಎಸ್.ಸಿ.ಶಾಂತನಾಗರಾಜು ಮತ್ತು ರಾಜಣ್ಣ ಸ್ಪರ್ಧೆಯಲ್ಲಿದ್ದರು. ಎನ್. ಸಿದ್ದರಾಜು 49 ಮತ ಪಡೆದು ಆಯ್ಕೆಯಾದರೆ, ಕೆ.ಸೋಮಣ್ಣ 34, ಎಸ್.ಸಿ. ಶಾಂತರಾಜು 27 ಹಾಗೂ ರಾಜಣ್ಣ 2 ಮತ ಪಡೆದು ಪರಾಜಿತರಾದರು. ಜಯರಾಮು ಉಪಾಧ್ಯಕ್ಷ, ರಂಗಯ್ಯ ಸಹ ಕಾರ್ಯದರ್ಶಿ ಹಾಗೂ ವಿ.ಎಂ. ಕಿರಣ್ ಕುಮಾರ್ ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿಗಳಾದ ಸಿದ್ದಪ್ಪಾಜಿ ಚಾರಿ ಹಾಗೂ ಸೋಮ ಶೇಖರ ಮೂರ್ತಿ ತಿಳಿಸಿದರು.

ಶ್ರೀಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ



ತಿ.ನರಸೀಪುರ, ಮಾ.27(ಎಸ್‌ಕೆ)– ಯಾರು ಧರ್ಮವಂತರಾಗಿ ಬಾಳುತ್ತಾರೋ ಅವರನ್ನು ಧರ್ಮ ಕಾಯುತ್ತದೆ ಎಂದು ಸಿದ್ದರಹಳ್ಳಿ ಪಾರಮಾರ್ಥ ಗವಿಮಠದ ಶ್ರೀಮಲ್ಲಿಕಾರ್ಜುನಸ್ವಾಮಿ ತಿಳಿಸಿದರು.

ವೀರಶೈವ ಸಮಾಜ ಸೇವಾ ಸಮಿತಿ ಆಶ್ರಯದಲ್ಲಿ ಪಟ್ಟಣದ ತ್ರ್ಯಂಬಕೇಶ್ವರ ಮಠದ ಆವರಣದಲ್ಲಿ ನಡೆದ ಶ್ರೀಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ, ಶ್ರೀ ರೇಣುಕಾ ಸಭಾ ಭವನದ 18ನೇ ವಾರ್ಷಿಕೋತ್ಸವ ಮತ್ತು ಗುರುರಕ್ಷೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಧರ್ಮ ನಮ್ಮನ್ನು ರಕ್ಷಾ ಕವಚವಾಗಿ ಕಾಪಾಡುವ ಸಾಧನದಂತೆ ಕೆಲಸ ಮಾಡುತ್ತದೆ. ಹೀಗಾಗಿ ಧರ್ಮ ಆಚರಣೆ ಮಾಡುವವರಿಗೆ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಎಚ್ಚರಿಕೆ ಇರಬೇಕಷ್ಟೇ ಎಂದರು.

ವೀರಶೈವ ಧರ್ಮದಲ್ಲಿ ಗುರುಗಳ ಪಾತ್ರ ಮಹತ್ತರವಾಗಿದ್ದು, ಸಮಾಜ ನಿಂತಿರುವುದೇ ಗುರುಗಳ ಆಧಾರದ ಮೇಲೆ. ಅಷ್ಟ ವರ್ಣಗಳಲ್ಲಿ ಬರುವುದೇ ಗುರು, ಗುರುವನ್ನು ಆರಾಧಿಸುವ ಮೂಲಕ ಭಕ್ತ ತನ್ನ ಕಾಯಕ ಸಾರ್ಥಕ ಪಡಿಸಿ ಕೊಳ್ಳುತ್ತಾನೆ. ನಮ್ಮ ಸಮಾಜದಲ್ಲಿ ಶ್ರೀಮಂತಿಕೆ, ಬಡತನಕ್ಕಿಂತ ಗುರುವಿಗೆ ಹೆಚ್ಚಿನ ಮಹತ್ವ ಇದೆ. ನಮ್ಮ ಧರ್ಮದ ಮೂಲ ಸಿದ್ಧಾಂತ ಎಂದರೆ ಕಾಯಕ, ದಾಸೋಹ ಮತ್ತು ದಾನ ದಾಸೋಹ. ದಾಸೋಹ ಎಂದರೆ ಕೇವಲ ಅನ್ನ ದಾಸೋಹ ಮಾತ್ರವಲ್ಲ, ದಾನ ದಾಸೋಹವೂ ಆಗಿದ್ದು ಶ್ರದ್ಧೆಯಿಂದ ಕಾಯಕ ಮಾಡಬೇಕು. ಕಾಯಕದ ಫಲವನ್ನು ದಾಸೋಹ ಮಾಡುವ ಮೂಲಕ ಸಮಾಜದ ಋಣ ತೀರಿಸುವ ಕೆಲಸ ಮಾಡಬೇಕು ಎಂದರು.

ಮೈಸೂರು ಮಹಾನಗರ ಪಾಲಿಕೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, ಸಮಾಜದಿಂದ ನಮಗೇನು ದೊರಕಿದೆ ಎಂಬುದಕ್ಕಿಂತ ನಾವು ಸಮಾಜಕ್ಕೆ ಏನು ಕೊಟ್ಟಿದ್ದೇವೆ ಎನ್ನುವುದು ಮುಖ್ಯವಾಗುತ್ತದೆ. ನಮ್ಮ ಕೈಲಾದಷ್ಟು ಮಟ್ಟಿಗೆ ಸಮಾಜಕ್ಕೆ ಸೇವೆ ಮಾಡುವ ಅವಕಾಶ ಪಡೆಯಬೇಕು ಎಂದರು. ತೋಪಿನ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಮಳವಳ್ಳಿ ಸಪ್ಪೆ ಸ್ವಾಮಿ ಮಠದ ಶಾಂತ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಸಮಾಜ ಸೇವಕ ಪಿ.ಎಸ್.ನಾಗೇಂದ್ರಸ್ವಾಮಿ, ಜಗದ್ಗುರು ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಷಡಕ್ಷರಿ, ಕುದೇರು ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ಸಿವಿಲ್ ಇಂಜಿನಿಯರ್ ಎಸ್.ಮಂಜುನಾಥ್ ಪ್ರಸಾದ್, ಕೆ.ಜಿ.ಮಂಜುನಾಥ್, ಮದ್ದೂರಿನ ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ವಿ.ಮಂಜುನಾಥ್, ಎಸ್.ನಂದೀಶ್, ಎನ್.ನವೀನ್, ಸಂಘದ ಅಧ್ಯಕ್ಷ ಟಿ.ಎ.ಶಾಂತರಾಜು, ಉಪಾಧ್ಯಕ್ಷ ಶಿವಪ್ರಸಾದ್, ಕಾರ್ಯದರ್ಶಿ ಸಿ.ವೀರೇಶ್, ಸಹ ಕಾರ್ಯದರ್ಶಿ ಎಂ.ವೀರೇಶ್, ಖಜಾಂಚಿ ಆರ್.ಸಿದ್ದಲಿಂಗಸ್ವಾಮಿ, ಸಂಚಾಲಕರಾದ ನಂದೀಶ್, ಫ್ಯಾನ್ಸಿ ಮೋಹನ್, ಅಂಗಡಿ ಶೇಖರ್, ಪುರಸಭಾ ಸದಸ್ಯರಾದ ಎಸ್.ಕೆ. ಕಿರಣ್, ರೂಪ, ನಾಗೇಶ್, ನೂತನ್, ಉಪನ್ಯಾಸಕ ಕುಮಾರಸ್ವಾಮಿ ಮತ್ತಿತರರಿದ್ದರು.

ಕಾಂಗ್ರೆಸ್ ಬಲಪಡಿಸಲು ಸದಸ್ಯತ್ವ ನೋಂದಣಿ ಹೆಚ್ಚಿಸಿ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ



ಮಲ್ಕುಂಡಿ, ಮಾ.27(ಚನ್ನಪ್ಪ)– ಕಾಂಗ್ರೆಸ್ ಬಲಪಡಿಸಲು ಸದಸ್ಯತ್ವ ನೋಂದಣಿ ಹೆಚ್ಚಿಸಿ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ಹುರ ಗ್ರಾಮದಲ್ಲಿ ಆಯೋಜಿಸಿದ್ದ ಡಿಜಿಟಲ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ಬೂತ್ ಮಟ್ಟದಿಂದ ಆಯಾಯ ಬೂತ್ ಮಟ್ಟದ ನೋಂದಣಿಗಾರರ ಜೊತೆಗೂಡಿ ನಿಗದಿತ ಗುರಿಯಂತೆ ಸದಸ್ಯತ್ವ ನೋಂದಣಿ ಯಶಸ್ವಿಗೊಳಿಸಿ ಪಕ್ಷ ಸಂಘಟನೆಗೆ ಮುಂದಾಗಬೇಕಿದೆ. ಕ್ಷೇತ್ರದಲ್ಲಿ ಬಿರುಸಿನಿಂದ ಸದಸ್ಯತ್ವ ನೋಂದಣಿ ನಡೆಯುತ್ತಿದ್ದು, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಈ ಹಿಂದೆ ನಮ್ಮ ಸರ್ಕಾರ ಉತ್ತಮ ಆಡಳಿತ ನೀಡಿದೆ. ಮಾ.31 ರವರೆಗೆ 50 ಸಾವಿರ ಸದಸ್ಯರನ್ನು ನೋಂದಣಿ ಮಾಡಬೇಕು ಎಂದರು.

ಕಾಂಗ್ರೆಸ್ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದೆ ಎಂದ ಅವರು, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಹಲವು ಸವಾಲುಗಳನ್ನು ಎದುರಿಸಿ ಭಾರತಕ್ಕೆ ಪ್ರಜಾಪ್ರಭುತ್ವದ ಭದ್ರಕೋಟೆ ಹಾಕಿಕೊಟ್ಟಿದೆ. ಕಾಂಗ್ರೆಸ್‌ನಿಂದ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದ ಅವರು, ಬಿಜೆಪಿ ಸರ್ಕಾರ ಅಭಿವೃದ್ಧಿ ಮಾಡದೇ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಕಿಡಿಕಾರಿದರು.

ಮಾಜಿ ಸಿಎಂ ಸಿದ್ದರಾಮಯ್ಯ ತಮ್ಮ ಅಧಿಕಾರವಧಿಯಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡಿ ಹುರ ಗ್ರಾಮದ ಸುತ್ತಮುತ್ತಲ 124 ಗ್ರಾಮಗಳಿಗೆ ಕುಡಿಯುವ ನೀರು ದೊರಕಿಸಿಕೊಟ್ಟಿದ್ದಾರೆ. 5 ವರ್ಷ ಉತ್ತಮ ಆಡಳಿತ ನೀಡಿದ್ದಾರೆ ಎಂದ ಅವರು, ಬಿಜೆಪಿ ಸರ್ಕಾರ ಗ್ರಾಪಂಗೆ ಯಾವುದೇ ಅನುದಾನ ನೀಡದೆ ಬರಿ ಸುಳ್ಳು ಭರವಸೆ ನೀಡಿ ಆಡಳಿತ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಜನತೆಯೇ ತಕ್ಕ ಪಾಠ ಕಲಿಸುತ್ತಾರೆ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಸಿ.ಎಂ. ಶಂಕರ್, ಜಿಪಂ ಮಾಜಿ ಸದಸ್ಯೆ ಪುಷ್ಪ, ಗ್ರಾಪಂ ಮಾಜಿ ಅಧ್ಯಕ್ಷ ಶಿವಣ್ಣ, ಶಿವಕುಮಾರ್ ಸೇರಿದಂತೆ ಕಾರ್ಯಕರ್ತರಿದ್ದರು.

ಪಂಜಾಬ್ ವಿರುದ್ಧ ಆರ್‌ಸಿಬಿಗೆ ಸೋಲು

ಮುಂಬೈ, ಮಾ.27– ನಾಯಕ ಫಾಫ್ ಡುಪ್ಲೆಸಿಸ್ ಅಮೋಘ ಅರ್ಧಶತಕದ ಹೊರತಾಗಿಯೂ ಪಂಜಾಬ್ ಕಿಂಗ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 5 ವಿಕೆಟ್‌ಗಳ ಸೋಲು ಅನುಭವಿಸಿತು. ಈ ಮೂಲಕ



ಐಪಿಎಲ್ 15ನೇ ಆವೃತ್ತಿಯನ್ನು ಸೋಲಿನೊಂದಿಗೆ ಆರಂಭಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಆರ್‌ಸಿಬಿ, ನಾಯಕ ಫಾಫ್ ಡುಪ್ಲೆಸಿಸ್ 88 (57 ಎಸೆತ, 3 ಬೌಂಡರಿ, 7 ಸಿಕ್ಸರ್), ಅನುಜ್ ರಾವತ್ 21, ವಿರಾಟ್ ಕೊಹ್ಲಿ ಅಜೇಯ 41 ಹಾಗೂ ದಿನೇಶ್ ಕಾರ್ತಿಕ್ ಅಜೇಯ 32 ಅಮೋಘ ಆಟದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 205 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. ಬೌಲಿಂಗ್‌ನಲ್ಲಿ ಪಂಜಾಬ್ ಪರ ಹರ್ಷದೀಪ್ ಸಿಂಗ್, ರಾಹುಲ್ ಚಹರ್ ತಲಾ ಒಂದು ವಿಕೆಟ್ ಪಡೆದರು.

ಬಳಿಕ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ಇನ್ನೂ ಆರು ಎಸೆತಗಳು ಬಾಕಿ ಉಳಿದಿರುವಂತೆಯೇ 5 ವಿಕೆಟ್ ಕಳೆದುಕೊಂಡು 208ರನ್ ಗಳಿಸಿ ಗುರಿ ತಲುಪಿತು. ತಂಡಕ್ಕೆ ನಾಯಕ ಮಾಯಂಕ್ ಅಗರವಾಲ್ 32 ಹಾಗೂ ಶಿಖರ್‌ಧವನ್ 43ರನ್ ಗಳಿಸಿ ಬಿರುಸಿನ ಆರಂಭವೊದಗಿಸಿದರು. ನಂತರ ಬಂದ ಭಾನುಕ ರಾಜಪಕ್ಷೆ 43, ಲಿಯಾಮ್ ಲಿವಿಂಗ್‌ಸ್ಟೋನ್ 19 ಎಚ್ಚರಿಕೆ ಆಟವಾಡಿ ತಂಡದ ರನ್ ಗತಿ ಹೆಚ್ಚಿಸಿದರು. ಕೊನೆಯ ಓವರ್‌ಗಳಲ್ಲಿ ಅಬ್ಬರಿಸಿದ ಒಡಿಯನ್ ಸ್ಮಿತ್ ಅಜೇಯ 25 ಹಾಗೂ ಶಾರೂಖ್ ಖಾನ್ ಅಜೇಯ 24ರನ್ ಗಳಿಸುವ ಮೂಲಕ ಪಂಜಾಬ್ ರೋಚಕ ಗೆಲುವು ದಾಖಲಿಸಲು ನೆರವಾದರು. ಬೌಲಿಂಗ್‌ನಲ್ಲಿ ಆರ್‌ಸಿಬಿ ಪರ ಮಹಮ್ಮದ್ ಸಿರಾಜ್ 2, ಆಕಾಶ್‌ದೀಪ, ವಹಿಂದ್ ಹಸರಂಗ, ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಬಿರುಸಿನ ಬ್ಯಾಟಿಂಗ್ ಮಾಡಿದ ಒಡಿಯನ್ ಸ್ಮಿತ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮುಂಬೈ ವಿರುದ್ಧ ಡೆಲ್ಲಿಗೆ ಭರ್ಜರಿ ಜಯ

ಮುಂಬೈ, ಮಾ.27– ತಂಡದ ಸಾಂಘಿಕ ಹೋರಾಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಪ್ರಸಕ್ತ ಸಾಲಿನ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಇಲ್ಲಿನ ಬ್ರಬೋರ್ನ್ ಮೈದಾನದಲ್ಲಿ ಮುಂಬೈ ನೀಡಿದ 178 ರನ್‌ಗಳ ಸವಾಲಿನ ಗುರಿ



ಬೆನ್ನತ್ತಿದ ಡೆಲ್ಲಿ ತಂಡದ ಮೊತ್ತ 75 ರನ್ ಆಗುವಷ್ಟರಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಬಂದ ಶಾರ್ದೂಲ್ ಠಾಕೂರ್ 4 ಬೌಂಡರಿ ಒಳಗೊಂಡ 22 ಸಿಡಿಸಿ ನಿರ್ಗಮಿಸಿದರು. ಈ ವೇಳೆ ಒಂದಾದ ಅಕ್ಷರ್ ಪಟೇಲ್ ಹಾಗೂ ಲಲಿತ್ ಯಾದವ್ 75 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದಿತ್ತರು. ಲಲಿತ್ ಯಾದವ್ 38 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 48 ರನ್ ಗಳಿಸಿದರೇ, ಅಕ್ಷರ್ ಪಟೇಲ್ ಕೇವಲ 17 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ಒಳಗೊಂಡ ಅಜೇಯ 38 ರನ್ ಗಳಿಸಿದರು. ಉಳಿದಂತೆ ಪೃಥ್ವಿ ಷಾ 38, ಟೀಮ್ ಸೈಫರ್ಟ್ 21 ರನ್ ಗಳಿಸಿದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ 18.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 179 ರನ್ ಗಳಿಸುವ ಮೂಲಕ ಜಯ ಗಳಿಸಿತು. ಮುಂಬೈ ಪರ ಬಾಸಿಲ್ ತಂಪಿ 3, ಮುರುಗನ್ ಅಶ್ವಿನ್ 2, ಟೈಮಿಲ್ ಮಿಲ್ಸ್ 1 ವಿಕೆಟ್ ಪಡೆದರು. ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 177 ರನ್ ಗಳಿಸಿತು. ತಂಡದ ಪರ ಇಶಾನ್ ಕಿಶನ್ 48 ಎಸೆತಗಳಲ್ಲಿ 11 ಬೌಂಡರಿ, 2 ಸಿಕ್ಸರ್ ಒಳಗೊಂಡ 81, ನಾಯಕ ರೋಹಿತ್ ಶರ್ಮಾ 41, ತಿಲಕ್ ವರ್ಮಾ 22 ರನ್ ಗಳಿಸಿದರು. ಡೆಲ್ಲಿ ಪರ ಕುಲದೀಪ್ ಯಾದವ್ 3, ಖಲೀಲ್ ಅಹಮದ್ 2 ವಿಕೆಟ್ ಪಡೆದರು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜೇಮ್ಸ್ (ಕ): ಬೆ.9.55ಕ್ಕೆ, ಮ.12.55ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.50ಕ್ಕೆ.
ಸ್ಕ್ರೀನ್ 2	ಜೇಮ್ಸ್ (ಕ): ಬೆ.8ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ಓರುತಿ (ಮ): ಬೆ.10.50ಕ್ಕೆ, ಆಂಬುಲೆನ್ಸ್ (ಇಂ): ರಾ.10ಕ್ಕೆ.
ಸ್ಕ್ರೀನ್ 3	ಎದರ್ಕುಂ ತುನಿಂದವನ್ (ತ): ಬೆ.10.05ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.1ಕ್ಕೆ, ಬಚ್ಚನ್ ಪಾಂಡೆ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ರಾಧೆಶ್ಯಾಮ್ (ತೆ): ಮ.1.15ಕ್ಕೆ, ಜೇಮ್ಸ್ (ಕ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜೇಮ್ಸ್ (ಕ): ಬೆ.8.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಬಚ್ಚನ್ ಪಾಂಡೆ (ಹಿಂ): ಬೆ.9.20ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.12.20ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ಜೇಮ್ಸ್ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45ಕ್ಕೆ, ಬಚ್ಚನ್ ಪಾಂಡೆ (ಹಿಂ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಏಕ್ ಲವ್‌ಯಾ (ಕ): ಬೆ.10.45ಕ್ಕೆ, ಮ.1.45ಕ್ಕೆ, ಸಂ.6.35ಕ್ಕೆ, ಓಲ್ಡ್‌ಮಾಂಕ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಎದರ್ಕುಂ ತುನಿಂದವನ್ (ತ): ಬೆ.10.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 3	ರಾಧೆಶ್ಯಾಮ್ (ತೆ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಆ ತೊಂಭತ್ತು ದಿನಗಳು (ಕ): ಬೆ.11ಕ್ಕೆ, ಡಿಯರ್ ಸತ್ಯ (ಕ): ಮ.1.30ಕ್ಕೆ, ಎದರ್ಕುಂ ತುನಿಂದವನ್ (ತ): ಸಂ.4.15ಕ್ಕೆ, ಹರೀಶ ವಯಸ್ಸು 36 (ಕ): ರಾ.7.15ಕ್ಕೆ, ಪದ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೇಮ್ಸ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು

ಕೋಟೆಯಲ್ಲಿ ವಿಶ್ವ ಕ್ಷಯ ರೋಗ ದಿನಾಚರಣೆ



ಹೆಚ್.ಡಿ.ಕೋಟೆ, ಮಾ.26(ಮಂಜು)– ಪಟ್ಟಣದ ತಾಲೂಕು ಆರೋಗ್ಯಾಧಿಕಾರಿ ಕಚೇರಿಯಲ್ಲಿ ವಿಶ್ವ ಕ್ಷಯ ರೋಗ ದಿನಾಚರಣೆ ನಡೆಯಿತು. ಈ ವೇಳೆ ಜಾಗೃತಿ ಜಾಥಾಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಚಾಲನೆ ನೀಡಿದರು. ಡಾ.ಸೋಮಣ್ಣ, ರೋಟರಿ ಅಧ್ಯಕ್ಷ ಮಹೇಶ್, ಹೃದ್ರೋಗ ತಜ್ಞ ಡಾ.ಪ್ರಜ್ವಲ್, ಆರ್ಮುಗಂ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಾಗೇಂದ್ರ, ರವಿರಾಜ್, ಹನುಮಂತು, ಅಶೋಕ್, ಕುಮಾರ್, ಕ್ಷಯರೋಗದ ಮೇಲ್ವಿಚಾರಕರಾದ ನಾಗರಾಜು, ಸುರೇಶ್, ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.



ನಂಜನಗೂಡು ತಾಲೂಕಿನ ಹೆಡತಲೆ ಶ್ರೀಆದಿಶಕ್ತಿ ಬಂಗಿ ಮಾರಮ್ಮನ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜವರಮ್ಮ ನಿಧನ



ಹೆಚ್.ಡಿ.ಕೋಟೆ, ಮಾ.27– ಪಟ್ಟಣದ ಕಾಳಿದಾಸ ರಸ್ತೆಯ ಹೂವಿನ ವ್ಯಾಪಾರಿ ಲೇ.ವೆಂಕಟನಾಯಕರ ಪತ್ನಿ ಜವರಮ್ಮ (70) ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಪಟ್ಟಣದ ಸ್ಮಶಾನದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಶೈವ ಲಿಂಗಾಯತ ಸಮುದಾಯವನ್ನು ಕೇಂದ್ರದಲ್ಲಿ ಓಬಿಸಿಗೆ ಸೇರಿಸಬೇಕು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ ಆಗ್ರಹ



ವಕೀಲರು ರಾಜಕೀಯದಿಂದ ದೂರವಿರಿ...

ನನ್ನ 50 ವರ್ಷಗಳ ಸುದೀರ್ಘ ಕಾನೂನು ಕ್ಷೇತ್ರದ ಸೇವೆಯ ಅನುಭವದಲ್ಲಿ ಹಲವಾರು ವಕೀಲರ ಸಂಘಟನೆಗಳಿಗೆ ಭೇಟಿ ನೀಡಿದ್ದೇನೆ. ಹಲವು ಸಂಘಟನೆಗಳಲ್ಲಿ ರಾಜಕೀಯ ವಿಭಾಗಗಳಿವೆ. ಈ ವಕೀಲರು ಈ ಪಕ್ಷ, ಆ ವಕೀಲರು ಆ ಪಕ್ಷ ಎಂದು ಹೇಳಿಕೊಂಡು ಪರಸ್ಪರ ಯುದ್ಧ ಮಾಡುತ್ತಾರೆ, ಹೊಡೆದಾಟಗಳು ನಡೆಯುತ್ತವೆ. ವಕೀಲ ವೃತ್ತಿಯಲ್ಲಿ ಗಂಭೀರವಾಗಿ ಇರಲು ಬಯಸುವವರು ರಾಜಕೀಯದಿಂದ ದೂರವಿರಿ ಅಥವಾ ರಾಜಕೀಯದಲ್ಲಿ ಇರಲು ಬಯಸುವವರು ವಕೀಲ ವೃತ್ತಿಯಿಂದ ದೂರವಿರಿ. ವಕೀಲ ವೃತ್ತಿಯಲ್ಲಿ ತೀವ್ರ ಪೈಪೋಟಿ ಇದೆ. ಕೇಸ್‌ನಲ್ಲಿ ಪೈಪೋಟಿ ಇರಬೇಕು. ಕೇಸ್‌ನಿಂದ ಹೊರಬಂದ ಮೇಲೆ ಅನ್ಯೋನ್ಯತೆಯಿಂದ ಇರಬೇಕು. ವಕೀಲರು ಬಂದ್ ಮಾಡುವುದು, ಕೋರ್ಟ್ ಕಲಾಪಗಳನ್ನು ಬಹಿಷ್ಕರಿಸುವುದು ಮಾಡಬಾರದು.

- **ಎಸ್.ಆರ್.ಬನ್ನೂರ್ ಮಠ,** ಕರ್ನಾಟಕ ಕಾನೂನು ಆಯೋಗ ಅಧ್ಯಕ್ಷರೂ ಆದ ಕೇರಳ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಮೈಸೂರು, ಮಾ.27(ಎಂಕೆ)- ವೀರಶೈವ ಲಿಂಗಾಯತ ಸಮುದಾಯವು ಕೇಂದ್ರದ ಓಬಿಸಿ ಪಟ್ಟಿಗೆ ಸೇರ್ಪಡೆಯಾಗಬೇಕು ಈ ಕುರಿತು ಬಹಳ ದಿನದಿಂದ ಪ್ರತಿಪಾದನೆ ಮಾಡುತ್ತಿದ್ದೇವೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಬಿ.ಖಂಡ್ರೆ ಹೇಳಿದರು.

ನಗರದ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 'ಜಿಲ್ಲಾ ಕಾನೂನು ಘಟಕ' ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪನೆಯಾಗಬೇಕು ಎನ್ನುವ ಬೇಡಿಕೆ ಈಡೇರಿದೆ. ಅದರಂತೆ ಕೇಂದ್ರದ ಓಬಿಸಿ ಪಟ್ಟಿಗೆ ಸೇರ್ಪಡೆಯಾಗಬೇಕು. ಕೇಂದ್ರದ ಶಿಕ್ಷಣ, ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಸಿಗಲು ಸಾಧ್ಯವಾಗುತ್ತಿತ್ತು ಆದರೆ ಇನ್ನೂ ಅದು ಹಾಗೆಯೇ ಇದೆ. ಇದಕ್ಕಾಗಿ ನಾವೆಲ್ಲರೂ ಸಾಮೂಹಿಕವಾಗಿ ಹೋರಾಟ ಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲೂ ಸಂಘಟನೆಯಾಗಬೇಕು ಎಂದು ಕರೆ ನೀಡಿದರು.

ಸಮುದಾಯದಲ್ಲಿ ಒಗ್ಗಟ್ಟು ಇಲ್ಲದ ಕಾರಣ ಶಿಕ್ಷಣ ಮತ್ತು ಉದ್ಯೋಗದಲ್ಲಿ ನ್ಯಾಯ ಲಭಿಸಿಲ್ಲ. ಇದು ಸಿಗಬೇಕಾದರೆ ಸಮುದಾಯದಲ್ಲಿ ಒಗ್ಗಟ್ಟು ಮೂಡಬೇಕಿದೆ. ಪ್ರತಿ ಜಿಲ್ಲೆಯಲ್ಲೂ ಲಿಂಗಾಯತ ಸಮುದಾಯ ಭವನಗಳಾಗಬೇಕು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರ್ತಿಸಿ ಪ್ರೋತ್ಸಾಹ ನಿಡಬೇಕು. ನಮ್ಮವರು ಜಾಗೃತರಾಗಬೇಕು. ಸಮಾಜದ ಸಂಘಟನೆ ಇನ್ನೂ ಬಲಾಢ್ಯವಾಗಿ ಬೆಳೆಯಬೇಕಾಗಿದೆ ಎಂದು ಹೇಳಿದರು.

ಧರ್ಮದ ಉಳಿವಿಗೆ ಪ್ರಯತ್ನ: ಕರ್ನಾಟಕ ಕಾನೂನು ಆಯೋಗ ಅಧ್ಯಕ್ಷರೂ ಆದ ಕೇರಳ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಸ್.ಆರ್.ಬನ್ನೂರ್ ಮಠ ಮಾತನಾಡಿ, ನಾವುಗಳು ಜಾತ್ಯತೀತರಾದರೂ ನಮ್ಮ ಧರ್ಮ, ಆಚರಣೆಗಳನ್ನು ಬಿಡಿ ಎಂದು ಸಂವಿಧಾನದಲ್ಲಿ ಎಲ್ಲಿಯೂ ಹೇಳಿಲ್ಲ. ಧರ್ಮದ ಉಳಿವಿಗಾಗಿ ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡುವುದು ಅವಶ್ಯ. ಸಂವಿಧಾನದ ಪ್ರಕಾರ ನಾವೆಲ್ಲರೂ ಭಾರತೀಯರು ಮತ್ತು ಜಾತ್ಯತೀತರು ಹೀಗಿರುವಾಗ ವೀರಶೈವ ಲಿಂಗಾಯತ ಘಟಕದ ಅವಶ್ಯಕತೆ ಏನಿದೆ? ಎಂದು ಬಹಳಷ್ಟು ಮಂದಿ ನನ್ನನ್ನು ಕೇಳಿದ್ದರು. ಸಮಾಜದ, ಸಮುದಾಯದ ಒಳಿತಿಗಾಗಿ ವೀರಶೈವ ಲಿಂಗಾಯತ ಮಹಾಸಭಾದಂತಹ ಘಟಕಗಳ ಅವಶ್ಯಕತೆ ಬಹಳಷ್ಟಿದೆ ಎಂದರು.

ನಿವೃತ್ತ ಉಪ ಲೋಕಾಯುಕ್ತರಾದ ಸುಭಾಷ್ ಬಿ. ಆಡಿ ಮಾತನಾಡಿ, ಬಸವ ತತ್ವಸಿದ್ಧಾಂತದಂತೆ ಸಮಾನತೆಯ ಅಂಶ ಮೈಸೂರು ಭಾಗದಲ್ಲಿದೆ. 12ನೇ ಶತಮಾನದಲ್ಲಿಯೇ ಸಮಾನತೆ, ಸ್ವಾತಂತ್ರ್ಯ ಎನ್ನುವ ಅಂಶಗಳನ್ನೊಳಗೊಂಡ ಸಂವಿಧಾನದ ಪರಿಕಲ್ಪನೆ ಇತ್ತು. ಸಮಾಜದಲ್ಲಿ ನ್ಯಾಯ ಸಿಗದೆ ನೊಂದವರಿಗಾಗಿ ಕಾನೂನಿನ ಅರಿವು-ನೆರವು ಮೂಡಿಸುವುದಕ್ಕಾಗಿ ಇಂತಹ ಕಾನೂನು ಘಟಕಗಳು ಸ್ಥಾಪನೆಯಾಗಬೇಕು. ಒಗ್ಗಟ್ಟಿನಿಂದ ಹರಿದು ಹೋಗುತ್ತಿರುವ ಸಮಾಜವನ್ನು ಒಂದುಗೂಡಿಸುವ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ತಿಳಿಸುವ ಕೆಲಸವಾಗಬೇಕಾಗಿದೆ ಎಂದು ಹೇಳಿದರು.

ಸನ್ಮಾನ: ಇದೇ ವೇಳೆ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ಚಂದ್ರಶೇಖರ್ ಆಲಬೂರ್, ಜೆ.ಚೈತ್ರಾ ಹಾಗೂ ಕರ್ನಾಟಕ ವಕೀಲರ ಪರಿಷತ್ತಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಬಿ.ಆರ್.ಚಂದ್ರಮೌಳಿ ಅವರನ್ನು ಸನ್ಮಾನಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕರ್ನಾಟಕ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಸಿ.ಎಂ.ಜಗದೀಶ್, ಉಪಾಧ್ಯಕ್ಷ ಬಿ.ಆರ್.ಚಂದ್ರಮೌಳಿ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಕೋಶಾಧ್ಯಕ್ಷ ವರುಣಾ ಮಹೇಶ್, ಜಿಲ್ಲಾಧ್ಯಕ್ಷ ಎಸ್.ಶಿವಮೂರ್ತಿ ಕಾನ್ಯ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಟಿ.ಎಸ್.ಲೋಕೇಶ್, ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಕೆ.ಎಸ್.ಮಹದೇವ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಯೋಗಿ ನಾರೇಯಣ ಕೈವಾರ ತಾತಯ್ಯರ ತತ್ವ-ಆದರ್ಶ ಪಾಲಿಸಿ

ಮೈಸೂರಲ್ಲಿ ಯೋಗಿ ನಾರೇಯಣ ಗುರುಗಳ ಜಯಂತಿ ಆಚರಣೆ



ಮೈಸೂರು, ಮಾ.27(ಎಂಟಿವೈ)- ಶ್ರೀ ಯೋಗಿ ನಾರೇಯಣ ಕೈವಾರ ತಾತಯ್ಯ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನದಲ್ಲಿ ಏಳಿಗೆ ಸಾಧಿಸುವಂತೆ ಶಾಸಕ ಎಲ್.ನಾಗೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಯೋಗಿ ನಾರೇಯಣ ಯತೀಂದ್ರರ ಜಯಂತಿ ಆಚರಣಾ ಸಮಿತಿ ಭಾನುವಾರ ಆಯೋಜಿಸಿದ್ದ ಯೋಗಿ ನಾರೇಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಲಿಜ ಸಮುದಾಯ ಗುರುಗಳಾದ ಕೈವಾರ ತಾತಯ್ಯ ಅವರ ಜಯಂತಿಯನ್ನು ಸರ್ಕಾರದ ವತಿಯಿಂದಲೇ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆದೇಶಿಸಿದ್ದಾರೆ. ಮಹನೀಯರ ಜಯಂತಿ ಆಚರಿಸುವ ಮೂಲಕ ಅವರ ಕೊಡುಗೆ ಸ್ಮರಿಸುವುದರೊಂದಿಗೆ ತತ್ವ, ಸಂದೇಶಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಉದ್ದೇಶ ಸರ್ಕಾರದ್ದಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಸಮುದಾಯಗಳ ಮಹನೀಯರ ಆದರ್ಶ ಅಳವಡಿಸಿಕೊಂಡು ಏಳಿಗೆ ಸಾಧಿಸುವತ್ತ ಗಮನ ಕೇಂದ್ರೀಕರಿಸಬೇಕು ಎಂದರು.

ಮೆರವಣಿಗೆ: ಇದಕ್ಕೂ ಮುನ್ನ ಸರಸ್ವತಿಪುರಂನ ಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘದ ಆವರಣದಲ್ಲಿ ಕೈವಾರ ತಾತಯ್ಯನವರ ಮೆರವಣಿಗೆಗೆ ಅರಗು ಮತ್ತು ಬಣ್ಣದ ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಹೆಚ್.ಎ. ವೆಂಕಟೇಶ್ ಮಾತನಾಡಿ, ತಾತಯ್ಯ ಅವರು, ತಂದೆ- ತಾಯಿ ಇಲ್ಲದೆ ಊರಿನವರ ಸಹಾಯದಿಂದ ಬೆಳೆದು ಸಂಸ್ಕೃತ-ಕನ್ನಡ, ತೆಲುಗು ಮೂರು ಭಾಷೆಗಳಲ್ಲಿ ಪರಿಣಿತರಾಗಿದ್ದರು. ನಮ್ಮ ಋಷಿ ಮುನಿಗಳ ಆಧ್ಯಾತ್ಮಿಕ ಜ್ಞಾನ ಸಂಪಾದಿಸಲು ಅನ್ಯದೇಶಗಳು ಹವಣಿಸುತ್ತಿವೆ ನಮ್ಮ ಆಧ್ಯಾತ್ಮದ ಬಗ್ಗೆ ನಮಗೆ ಅರಿವಿಲ್ಲ. 110 ವರ್ಷಗಳ ಸುದೀರ್ಘ ಬದುಕಿನಲ್ಲಿ 50 ವರ್ಷ ಸಂಸಾರಿಕ ಜೀವನ, ನಂತರದ ದಿನಗಳಲ್ಲಿ ಸಂಸಾರ ತ್ಯಜಿಸಿ, ಸನ್ಯಾಸತ್ವ ಸ್ವೀಕರಿಸಿ ಪ್ರಾಪಂಚಿಕ ಜೀವನವನ್ನು ಉಳಿದರ್ಧ ಬಾಳನ್ನು ಯೋಗಿಯಾಗಿ ಬಾಳಿದರು ಎಂದು ಸ್ಮರಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಗುಬ್ಬಿಗೂಡು ರಮೇಶ್, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ, ನಿಕಟಪೂರ್ವ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ನಟ ದರ್ಶನ್ ಅವರ ತಾಯಿ ಮೀನಾ ತೂಗುದೀಪ ಶ್ರೀನಿವಾಸ್ ಪಾಲ್ಗೊಂಡಿದ್ದರು. ಮೆರವಣಿಗೆಯಲ್ಲಿ ರೇಣು, ಟಿ.ಕೆ.ಉಮೇಶ್, ಜಿ.ರಾಮು, ಭಾನುಪ್ರಕಾಶ್, ಪಿ.ಕಾಮರಾಜ್, ಲಿಂಗರಾಜ, ಮಹೇಶ್ ನಾಯ್ಡು, ವೀಣಾ ಬಾಬು, ಹೆಚ್.ಕೆ ಮೋಹನ್ ಕುಮಾರ್, ಹೆಚ್.ಆರ್.ಗೋಪಾಲ ಕೃಷ್ಣ, ಕಿತ್ತೂರು ಪ್ರಕಾಶ್, ಎನ್. ವಿಜಯಕುಮಾರ, ಬಿ.ಕೆ. ಸುರೇಶ್ ಇದ್ದರು.